# అంతరంగ

1 ANNA



**This page is available for advertisement. Rate Rs. 15/ (per insertion)**

# ಪ್ರಕಟಣೆ

ನಮ್ಮ ಕಂಪೆನಿಯಲ್ಲಿ ಐದು ಯಾ ಅದರ ಮೇಲೆ ಪಾಲು ಇರುವವರಿಗೂ, ನಮ್ಮ ಕಂಪೆನಿಯಲ್ಲಿ ರೂ. **200**/- ಯಾ ಅದಕ್ಕಿಂತ ಹೆಚ್ಚು ನಿರಖು ಠೇವಣಾತಿ ಇಟ್ಟವರಿಗೂ **ಅಂತರಂಗದ** ಸಂಚಿಕೆಗಳನ್ನು ಮುಫತ್ತಾಗಿ ಕೊಡುವುದೆಂತ ನಿಶ್ಚಯಿಸಿದ್ದೇವೆ. ಆದುದರಿಂದ ಸದ್ರಿ ಪಾಲುದಾರರೂ ಠೇವಣಾತಿದಾರರೂ ಪ್ರತ್ಯೇಕ **ಚಂದಾ** ಹಣವನ್ನು ಕಳುಹಿಸಬೇಕಾದುದಿಲ್ಲ.

15-7-'38. **ಎಸ್. ಯು. ಪಣಿಯಾಡಿ,**
ಮೆನೇಜಿಂಗ್ ಡೈರೆಕ್ಟರ್,
**ಉಡುಪಿ.** ಸಪ್ಲೈ ಏಜನ್ಸಿ ಲಿಮಿಟೆಡ್

**ಈ ಪುಟವು ಪ್ರಕಟನೆಗೆ ದೊರೆಯುತ್ತದೆ. ದರ ರೂ. 15/- (ಪ್ರತಿ ಬಾರಿ.)**

# ಅಂತರಂಗ

ವಿಶೇಷ ತರದ ಕನ್ನಡ ವಾರಪತ್ರಿಕೆ.
ಮನಿಪಳ, ಉಡುಪಿ


ಸಂಪುಟ ೧.

೭ ಅಗೋಸ್ತು '೩೮
ಆದಿತ್ಯವಾರ.

ಸಂಚಿಕೆ ೪.



ಎಸ್. ಯು. ಪಣಿಯಾಡಿ.
(*Editor in Chief*)

ಕೆ. ಹೈದರ್.
(*Managing Editor*)


ವಾರ್ಷಿಕ ಚಂದಾ
ಮೂರು ರೂಪಾಯಿ.
ವಿ. ಪಿ. ಕ್ರಮವಿಲ್ಲ.
ಹಣವನ್ನು ಮುಂಗಡವಾಗಿ
ಕಳುಹಬೇಕು.


Associate Editors.
ಎಸ್. ಎಸ್. ಕಾರಂತ.
ಪಿ. ವಿ. ಆಚಾರ್ಯ.
ಪಿ. ಎಲ್. ಅಡಿಗ.
ಎಂ. ವಿ. ಹೆಗ್ಡೆ.


ಬಿಡಿಸಂಚಿಕೆ
ಒಂದಾಣೆ.
ನಿಮ್ಮ ಊರಿನ
ಏಜಂಟರಿಂದ
ಪಡಕೊಳ್ಳಿರಿ.


Members of the Advisory Board.
ಶ್ರೀ. ಬಿ. ವಾಸುದೇವರಾವ್, ಬಿ. ಎ., ಬಿ. ಎಲ್.
,, ಕೊರಡ್ಕಲ್ ಶ್ರೀನಿವಾಸರಾವ್, ಗ್ರಂಥಕರ್ತ.
,, ಆರ್. ಆರ್. ಕುಂಜೂರು.
,, ಪಿ. ವಿ. ಉಪಾಧ್ಯಾಯ, ಬಿ. ಎ., ಎಲ್‌ಎಲ್. ಬಿ.
,, ಆರ್. ಎಸ್. ಶೆಣೈ, ಸಂಪಾದಕ, ವರ್ತಕಧುರೀಣ.
,, ಕೆ. ಎಚ್. ಶೆಟ್ಟಿ, ಮೆನೇಜರ್ ನವಯುಗ.
ಶ್ರೀಮತಿ. ಪಿ. ಭಾರತೀ ಬಾಯಿ.
ಶ್ರೀ. ಪಿ. ಎನ್. ಬಿ. ರಾಮಾಚಾರ್ಯ, ಸಂಪಾದಕ, ನವಶಕ್ತಿ.
,, ಯು. ವೆಂಕಟರಮಣಾಚಾರ್ಯ, ಮೆನೇಜರ್ ಶ್ರೀಕೃಷ್ಣಸಂದೇಶ.
,, ಉಪೇಂದ್ರ ಅನಂತ ಪೈ, ಮಾಲಕ, ಚಿತ್ರಕಲಾ.



ಮಾಲಕರು ಮುದ್ರಕರು ವ ಪ್ರಕಾಶಕರು:
ಸಪ್ಲೈ ಏಜೆನ್ಸಿ ಲಿಮಿಟೆಡ್ ಉಡುಪಿ.

ಮುದ್ರಣ ವ ಪ್ರಕಟನ ಸ್ಥಳ:
ಮನಿಪಳ ಪವರ್ ಪ್ರೆಸ್,
ಮನಿಪಳ, ಉಡುಪಿ.

ANNUAL SUBSCRIPTION Rs. [illegible]—0—0.

SINGLE COPY
AS. 0—1—0

## ಬರೆಹಗಾರರಿಗೆ ಸಲಹೆ

೧. ಲೇಖನಗಳನ್ನೂ, ಕಿರುಗತೆಗಳನ್ನೂ, ಒಂದಂಕ ನಾಟಕಗಳನ್ನೂ ಯಾರೂ ಬರೆದು ಕಳುಹಿಸಬಹುದು.

೨. ಬರಹವು ಕಾಗದದ ಒಂದೇ ಮೈಯಲ್ಲಿ ಸ್ಪಷ್ಟವಾಗಿರಬೇಕು.

೩. ಯೋಗ್ಯ ಕಂಡವುಗಳನ್ನು ಮಾತ್ರ ಪ್ರಕಟಿಸಲಾದೀತು.

೪. ಪ್ರಕಟಿಸದಿಪ್ಪ ಲೇಖನಗಳನ್ನು ಬರೆಹಗಾರರ ಖರ್ಚಿನಿಂದಲೇ ವಾಪಾಸು ಕಳುಹಿಸಬಹುದು.

೫. ಪ್ರತಿಫಲವನ್ನು ಅಪೇಕ್ಷಿಸುವ ಲೇಖಕರು ಮುಂಚಿತವಾಗಿಯೇ ಪ್ರತಿಫಲದ ವ್ಯವಸ್ಥೆಯನ್ನು ಸಮ್ಮತಿ ಕೂಡೆ ಮಾಡಿಕೊಳ್ಳಬೇಕು.

೬. ಸಾಧಾರಣ ವರ್ತಮಾನಗಳನ್ನು ಯಾರೂ ನಮಗೆ ಕಳುಹಿಸಬೇಕಾದ ಅಗತ್ಯವಿಲ್ಲ. ನಾವವನ್ನು ಪ್ರಕಟಿಸುವುದಿಲ್ಲ.

ಸಂಪಾದಕ,

**ಅಂತರಂಗ,** ಉಡುಪಿ.

---

## ಪ್ರಕಟನೆ ಕೊಡುವವರಿಗೆ ಸಲಹೆ

೧. ಪ್ರಕಟನೆಯ ವಿಷಯಗಳು ಅಯೋಗ್ಯವಾಗಿ ಕಂಡುಬಂದಲ್ಲಿ ಮುದ್ರಿಸಲಾಗುವುದಿಲ್ಲ.

೨. ಒಂದೇ ಬದಿಯಲ್ಲಿ ವಿವರವಾಗಿ ಬರೆಯಬೇಕು.

೩. ಬದಲಾವಣೆಯಿದ್ದಲ್ಲಿ ಒಂದು ವಾರ ಮುಂಚಿತವಾಗಿ ತಿಳಿಸಬೇಕು.

೪. ಬ್ಲೋಕುಗಳು ವಾಪಾಸು ಬೇಕಾಗಿದ್ದಲ್ಲಿ ಅವರವರ ಖರ್ಚಿನಿಂದಲೇ ವಾಪಾಸು ಪಡೆಯಬೇಕು.

೫. ಪ್ರಕಟನೆ ಬಾಬ್ತು ಹಣವನ್ನು ಮುಂಗಡವಾಗಿಯೇ ಕೊಡಬೇಕು.

### —: ಪ್ರಕಟನೆಯ ದರ :—

| | | | | |
|---|---|---|---|---|
| ಇಡೀ | ಪುಟ | ರೂಪಾಯಿ | ೧೦—೦—೦ | ಒಂದು ಸರ್ತಿಗೆ |
| ಅರ್ಧ | ,, | ,, | ೫—೦—೦ | ,, |
| ಕಾಲು | ,, | ,, | ೩—೦—೦ | ,, |
| ಅರೆಕಾಲು | ,, | ,, | ೨—೦—೦ | ,, |
| ಕಲಮು ಇಂಚಿಗೆ | | ,, | ೧—೦—೦ | ,, |

**ವಿಶೇಷತರದ ಪ್ರಕಟನೆಗೂ, ವಾರ್ಷಿಕ ದರಕ್ಕೂ ಬರೆದು ತಿಳಿಯಿರಿ.**

**ಪ್ರಕಟನ ಶಾಖೆ:—**

**ಅಂತರಂಗ, ಉಡುಪಿ**

# ಅರಸಿ-ಆರಿಸಿದ್ದು

"ಬ್ರಿಟಿಷ್ ಇಂಡಿಯಕ್ಕಿಂತ ಮೈಸೂರು ಎಷ್ಟು ಸುಧಾರಿಸಿದೆ! ಚಿಕ್ಕ ಪುಟ್ಟ ಗ್ರಾಮಗಳಲ್ಲಿ ಕೂಡಾ ವಿದ್ಯುಚ್ಛಕ್ತಿ ಮತ್ತು ಆಸ್ಪತ್ರೆಗಳಿವೆ."ಯೆಂದು ಸರ್. ವೇಪರಾಮೇಶರ್‌ರವರು ವಿದ್ಯಾರಾಜ್ಯಶಾಸ್ತ್ರ ವಿಚಾರಣಾಕಾಲದಲ್ಲಿ ಹೇಳಿದರು.

ಸರಿ. ಹೊರಗಿಂದ ಬಂದವರಿಗೆ ಮೊದಲು ಕಾಣುವುದೆಂದರೆ ಅವೆರಡೇ. ಬೋರೇಗೌಡನ ಹೊಟ್ಟೆ ಬೆನ್ನಿಗೆ ತಾಗಿಕೊಂಡಿರುವುದು ವಿದ್ಯುಚ್ಛಕ್ತಿಯ ಬೆಳಕಿನಲ್ಲಿ ಸರ್ ವೇಪರಿಗೆ ಕಂಡಿರಲಿಕ್ಕಿಲ್ಲ.

○○ ○○ ○○

"ಫೆಡರಲ್ ನ್ಯಾಯವಿಧಾಯಕಸಭೆಯಲ್ಲಿ ಈಗಿನ ಭಾರತ ಘಟನೆಯನ್ನು ಬದಲಾಯಿಸಬಹುದು" ಎಂಬುದು ಬ್ರಿಟಿಷ್ ಸರಕಾರವು ಕಾಂಗ್ರೆಸಿಗೆ ಕೊಡುವ ಮೂರನೆಯ ಆಶ್ವಾಸನೆಯಂತೆ.

ಫೆಡರಲ್ ಎಸೆಂಬ್ಲಿಯಲ್ಲಿ ಬದಲಾವಣೆ ಮಾಡುವುದಕ್ಕಿಂತ ಮೊದಲೇ ವ್ಯತ್ಯಾಸಗೊಳಿಸಿದರೆ ಬ್ರಿಟಿಷ್‌ಸರಕಾರದ ಗೌರವಕ್ಕೆ ಕುಂದು ಬರುವುದೆ?

○○ ○○ ○○

ಇಂಗ್ಲೆಂಡಿನ ವೈಟ್‌ಹಾಲ್ ದ್ವಾರಪಾಲಕರಾದ ಕೆಲವು ಸೈನಿಕರು ವೈಟ್‌ಹಾಲಿನ ಸಮೀಪದಲ್ಲಿ ತಿರುಗಾಡುತ್ತಿದ್ದ ಹದಿನೈದು ವರುಷದ ಒಬ್ಬ ಕುವರಿಗೆ ಹಟಸಂಭೋಗ ಮಾಡಿ ಆಕೆಯು ಗರ್ಭಿಣಿಯಾದಳಂತೆ. ಇಷ್ಟು ಚಿಕ್ಕ ಜನನಿಯು ಮೃತ್ಯುವಶಳಾಗಬಾರದೆಂಬ ಸದಿಚ್ಛೆಯಿಂದ ಮಿ॥ ಬೌರ್ನ್ ಎಂಬ ಸರ್ಜನರು ಆಕೆಯ ಅಪಾಯವನ್ನು ತಪ್ಪಿಸಿ ಪೋಲೀಸರು ಭ್ರೂಣಹತ್ಯೆಗಾಗಿ ತನ್ನನ್ನು ಶಿಕ್ಷಿಸಬೇಕೆಂದು ಅವರಿಗೆ ತಿಳಿಸಿದರಂತೆ. ವ್ಯವಹರಣೆಯಾಗಲಾಗಿ ನ್ಯಾಯಾಧೀಶ ಮೆಕ್ನಾಟ



ಬ್ರಿಟನಿನ ವಿದೇಶ ಧೋರಣೆಯು ಬ್ರಿಟಿಷ ಸಾಮ್ರಾಜ್ಯಕ್ಕೆ ಹಿತಕಾರಿಯಾಗಿಲ್ಲವೆಂದು ಇತ್ತೀಚೆಗೆ ಹೇಳಿದ ಪ್ರಸಿದ್ಧ ರಾಜಕಾರಣ ಪಟುಗಳಾದ
**ಮಿ॥ ಚರ್ಚಿಲ್ಲರು**

ನರು ಸರ್ಜನರನ್ನು ಬಿಟ್ಟರಂತೆ. ಕಾನೂನು ಸದಿಚ್ಛೆಯ ಈ ಭ್ರೂಣಹತ್ಯೆಯನ್ನು ಸಹಿಸಿರುವುದರಿಂದ ಅಲ್ಲಿಯ ಜನತೆಯು ಈ ಕುರಿತು ಬಹಳೇ ಚರ್ಚಿಸುತ್ತಿದೆ. ಇಂಗ್ಲೆಂಡಿನ ಸೈನಿಕರು ಹದಿನೈದು ವರುಷದ ಕುಮಾರಿಗೆ ಮಾಡಿದ "ಉಪಕಾರ"ವು ಸ್ಮರಣೀಯವಾಗಿದೆ!

○○ ○○ ○○

"ಖಾರೆ, ಜಿಂದಾಬಾದ್" "ಬಾಯ್‌ಕೋಟ್ ಶುಕ್ಲ"! ಇಷ್ಟು ಮಾತ್ರವಲ್ಲ, "ವರ್ಕಿಂಗ್ ಕಮಿಟಿ ಬಾಯ್‌ಕೋಟ್" ನಾಗಪುರದ ವಿದ್ಯಾರ್ಥಿಗಳು ಡಾ. ಯನ್. ಬಿ. ಖಾರೆಯವರನ್ನು ಲೀಡರರನ್ನಾಗಿ ನಿಲ್ಲಲು ಆತಂಕ ಮಾಡಿದುದಕ್ಕೆ ಮೆರವಣಿಗೆಯಲ್ಲಿ ಮಾಡಿದ ಉದ್ಘೋಷಗಳಿವು.

ಎರಡು ಸಾವಿರ ವಿದ್ಯಾರ್ಥಿಗಳು ಹರತಾಳ ಮಾಚರಿಸಿದುದರಿಂದ ಶಾಲೆ ಕಾಲೇಜುಗಳು ಮುಚ್ಚಲ್ಪಟ್ಟವಂತೆ. ಸಭೆ, ಮೆರವಣಿಗೆ ಇತ್ಯಾದಿಗಳು ನಡೆದುವಂತೆ. ಶುಕ್ಲರು ವಾರ್ಧದಿಂದ ಬರುವ ಕಾಲಕ್ಕೆ ಅವರ ಪ್ರತಿರೂಪವೊಂದನ್ನು ಹೊತ್ತುಕೊಂಡು ವಿದ್ಯಾರ್ಥಿಗಳು ಮುಖ್ಯ ಬೀದಿಗಳಲ್ಲಿ ಸಂಚರಿಸಿ ಸ್ವಾಗತಿಸಲು ರೈಲ್ವೇ ಸ್ಟೇಶನಿಗೆ ಹೋದಾಗ ಶುಕ್ಲರಿಲ್ಲ. ನಿರಾಶರಾಗಿ ವಿದ್ಯಾರ್ಥಿಗಳು ಓ ತೆರಳಿದರು. ಇದು ಡಾ. ಖಾರೆಯವರ ಮೇಲೆ ತೋರಿಸಿದ ಮಮತೆಯೇ ಅಥವಾ ಮಹಾಕೋಸಲದ ಪ್ರಾಂತೀಯತೆಯೋ? ಈ ಪ್ರಶ್ನೆಯನ್ನು ಖಾರೆಯವರೊಡನೆಯೇ ಕೇಳಿದರೆ ಸಮರ್ಪಕವಾದ ಉತ್ತರವು ಸಿಗಬಹುದು.

——

# ಅಂದಿನ ಅನಾಥ ಹುಡುಗ–

## ವೀರರ ಚರಿತ್ರೆಯೋದಿ ಜರ್ಮನಿಯ "ವಿಧಾತ"ನಾದ ಅಡಾಲ್ಫ್ ಹಿಟ್ಲರ್ !

೪ ಕೋಟಿ ಮತದಾರರನ್ನು ತನ್ನಿಚ್ಛೆಯಂತೆ
ತತ್ವವನ್ನು ಅನುಸರಿಸಿ, ಯೂರೋಪಿನ ಎಲ್ಲಾ
ಮಾಡಿದ ಜರ್ಮನ್ ಸರ್ವಾಧಿಕಾರಿ ಹಿಟ್ಲರನ

# ಅಧೋಗತಿಗಿಳಿಯುತ್ತಿದ್ದ ಜರ್ಮನಿ

ಜರ್ಮನಿಯ ೪ ಕೋಟಿ ಮತದಾರರನ್ನು ತನ್ನಿಚ್ಛೆಯಂತೆ ಕುಣಿಸಿ, ಜರ್ಮನರ ವಿಧಾತನೆಂಬ ಅಭಿಪ್ರಾಯವು ಅವರಲ್ಲಿ ಬೇರೂರುವಂತೆ ಮಾಡಿದ ಹಿಟ್ಲರನು ನಲುವತ್ತೊಂಭತ್ತು ವರುಷಗಳ ಹಿಂದೆ ಆಸ್ಟ್ರಿಯಾ ಮತ್ತು ಬವೇರಿಯಗಳು ಕೂಡುವೆಡೆಯಲ್ಲಿ ಜನಿಸಿದನು. ಅವನ ಕುಟುಂಬವು ಇತರರು ಹಾಡಿ ಹೊಗಳುವಷ್ಟು ಪ್ರಾಮುಖ್ಯವಾಗಿದ್ದಿಲ್ಲ. ಆದುದರಿಂದ ಅವನ ಕುಟುಂಬದ ಕುರಿತು ಹೆಚ್ಚೇನೂ ತಿಳಿಯದಿರಲು ಕಾರಣ.

೦೦೦

ಹಿಟ್ಲರನ ತಂದೆಯೂ ಒಬ್ಬ ಸಾಮಾನ್ಯ ವ್ಯಕ್ತಿಯಾಗಿದ್ದನು. ಸಾಮಾನ್ಯ ಮನುಷ್ಯನಾಗಿದ್ದರೂ ದೊಡ್ಡ ರಾಜನೀತಿಜ್ಞನಂತೆ ಅವನು ಆಸ್ಟ್ರಿಯ–ಹಂಗೇರಿಯಾ ರಾಜಮನೆತನದ ರಾಜನೀತಿಯನ್ನು ಪ್ರತಿ ಸಾಯಂಕಾಲ ನಿರ್ಭೀತಿಯಿಂದ ವಿಮರ್ಶಿಸುತ್ತಿದ್ದನು. ಅವನ ಮಡದಿ ಒಬ್ಬ ಬೋಹೇಮಿಯನ್ ಹೆಂಗಸು. ಹಿಟ್ಲರನು ಆಕೆಯನ್ನು ಧಾರ್ಮಿಕಮನೋವೃತ್ತಿಯವಳೆಂದು ಮಾತ್ರ ಹೇಳಿದ್ದಾನೆ.

೦೦೦

ತನ್ನ ಮಗನು ದೊಡ್ಡ ವ್ಯಕ್ತಿಯಾಗಬೇಕೆಂಬ ಇಚ್ಛೆಯು ಎಲಾಯ್ಸ್ ಷಿಕ್ಲ್ ಗ್ರೂಬರ್‌ನಲ್ಲಿ ಬಹುವಾಗಿತ್ತು. ಅನ್ಸ್ಟ್ ಶಾಲೆಯಲ್ಲಿ ಹಿಟ್ಲರನ ವಿದ್ಯಾಭ್ಯಾಸವಾಯಿತು. ಪಾಠಕ್ಕಿಂತಲೂ ಅವನಿಗೆ ಆಟದಲ್ಲಿಯೇ ಹೆಚ್ಚಿನ ಮಮತೆಯಿತ್ತು. ಈ ಮನೋವೃತ್ತಿಯಿಂದಾಗಿ ಅವನು ತನ್ನ ಬಾಲ್ಯದಲ್ಲಿಯೇ ವಿಖ್ಯಾತ ಅಲೆಕ್ಸಾಂಡರನಂತಾಗಲಿಚ್ಛಿಸಿ ತನ್ನದೊಂದು "ಸೈನ್ಯ"ವನ್ನು ರಚಿಸಿದನು. ಈ ಸೈನ್ಯದಲ್ಲಿದ್ದ ಸೈನಿಕನೆಂದರೆ ಅವನ ಸಹಪಾಠಿಯಾದ ಒಬ್ಬನೇ ಒಬ್ಬ ಹುಡುಗ. ಪ್ರಾಯದಲ್ಲಿ ಅವನು ಚಿಕ್ಕವನಾಗಿದ್ದುದರಿಂದ ಹಿಟ್ಲರನು ಅವನಿಗೆ ಬೆಲ್ಲ ಕೊಟ್ಟು ತಾನು ಹೇಳಿದಂತೆ ಮಾಡಿಸುತಿದ್ದನು.

೦೦೦

ಹದಿನೈದು ವರುಷದ ಯುವಕನಾಗಿದ್ದಾನೆ ಹಿಟ್ಲರ್. ಬೇಜವಾಬ್ದಾರೀ ಜೀವನವು ಭರದಿಂದ ನಡೆಯುತ್ತಿದ್ದಾಗ ಅವನ ತಂದೆ ತಾಯಂದಿರು ಮೃತ್ಯುವಶರಾದರು. ಈ ಬಾಲಕನೊಡನೆ ಹಣವಿಲ್ಲ, ವಿದ್ಯೆಯಿಲ್ಲ, ಬಂಧು ಬಾಂಧವರಿಲ್ಲ. ಅನಾಥನಾಗಿ ದಾರಿಯುದ್ದಕ್ಕೂ ಅಲೆಯುವ ನಿರ್ಗತಿಯು ಅವನದಾಯಿತು. ಅಲೆಕ್ಸಾಂದರನಂತಾಗಬೇಕೆಂಬ ಅವನ ಮಹದಭಿಲಾಷೆಯು ಗಾಳಿಗೋಪುರವನ್ನು ದಾರಿದ್ರ್ಯದ



ಯುರೋಪಿನ ಧೂಮಕೇತುಗಳಿವರು.
ಪ್ರಧಾನನೆನ್ನುವಾಗ ಮುಸ್ಸೋಲಿನಿಯು
ಪ್ರಬಲ ಸರ್ವಾಧಿಕಾರಿಯೆನ್ನುತ್ತಾನೆ. ಅವರ
ತ್ತಿನೆದುರು ಅವರೇ ಪ್ರಬಲರೆಂದು ತೋ

ಬಿರುಗಾಳಿಯು ನುಚ್ಚುನೂರುಗೊಳಿಸಿತು. ೪೦ ಬೆಳ್ಳಿ ನಾಣ್ಯಗಳೊಂದಿಗೆ ಅವನು ವಿಯೆನ್ನಕ್ಕೆ ತೆರಳಿದನು.

೦೦೦

ಕಲೆಯಲ್ಲಿ ಹಿಟ್ಲರನಿಗೆ ಕೊಂಚ ಅಭಿರುಚಿಯಿತ್ತು. ಹೊಟ್ಟೆ

# ಇಂದಿನ ಸರ್ವಾಧಿಕಾರಿ

ಕಂಚಿಸಿ, ರಾಷ್ಟ್ರೀಯ ಸಮತಾವಾದವೆಂಬ ರಾಷ್ಟ್ರಗಳನ್ನೂ ನಾಝೀ ತತ್ವಕ್ಕೆ ಬೆದರುವಂತೆ ಅದ್ಭುತರಮ್ಯ ಜೀವನ.

# ಯನ್ನು ರಕ್ಷಿಸಿದ ಯುವಕ.



ಹಿಟ್ಲರನು ಯುರೋಪಿನ ಅತ್ಯುಗ್ರ ಸೈನ್ಯದ ಯುರೋಪಿನ ಪ್ರಬಲ ರಾಷ್ಟ್ರದ ಮಹಾ ದೇಶಗಳ ಪರಿಸ್ಥಿತಿಯು ಹೇಗಿದ್ದರೂ ಜಗ ರಿಸಿಕೊಳ್ಳುವುದು ಇವರಿಬ್ಬರ ವೈಶಿಷ್ಟ್ಯ.

ಯ ಹಸಿವು ಅವನನ್ನು ಒಬ್ಬ ಕಲಾವಿದನನ್ನಾಗಿ ಮಾಡಿತು. ತನ್ನ ಚಿತ್ರಗಳನ್ನು ವಿಯನ್ನದ ಕಲಾಶಾಲೆಯ ಡೈರೆಕ್ಟರರಿಗೆ ತೋರಿಸಿದಾಗ ಅವುಗಳು ನಿಷ್ಪ್ರಯೋಜಕವಾದುವುಗಳೆಂದು ಮೂಲೆಪಾಲು ಮಾಡಲ್ಪಟ್ಟವು. ನಿರಾಶನಾಗಿ ಹಿಟ್ಲರನು ಶಿಲ್ಪಿಯಾಗಲು ಯತ್ನಿಸಿದನು. ಮನೆಗಳನ್ನು ಕಟ್ಟುವ ನಕಾಶೆಗಳನ್ನು ಮಾಡಿ ವಿಯೆನ್ನದ ಅದೇ ಡೈರೆಕ್ಟರರಿಗೆ ತೋರಿಸಿದಾಗ ಅವನಿಗೆ ಮನೆಗಳನ್ನು ಕಟ್ಟಿಸುವ ಯೋಚನೆಯಿದ್ದರೆ ಮೊದಲು ಕಲ್ಲು ಕಟ್ಟುವವನಾಗುವುದೊಳ್ಳೆಯದೆಂದರು. ಈ ಬುದ್ಧಿವಾದವನ್ನು ಹಿಟ್ಲರನು ತನ್ನಲ್ಲಿದ್ದ ನಾಣ್ಯಗಳು ಮಾಯವಾಗುತ್ತಾ ಬರುತ್ತಿದ್ದುದರಿಂದ ಸ್ವೀಕರಿಸಬೇಕಾಯಿತು.

೦೦೦

ತರುಣ ಹಿಟ್ಲರನ ಸಹವ್ಯವಸಾಯಿಗಳು ಮಾರ್ಕ್ಸನ ತತ್ವಗಳ ಕುರಿತು ಏನೂ ತಿಳಿಯದಿದ್ದರೂ ಚರ್ಚಿಸುತ್ತಿದ್ದರು ಅವರ ಚರ್ಚೆಯಲ್ಲಿ ‘‘ಕಲ್ಲು ಕಟ್ಟುವ ಹಿಟ್ಲರ” ನನ್ನು ಸೇರಿಸಬೇಕೆಂದು ಅವರು ಆಶಿಸಿದರು. ಕೆಲಸದಲ್ಲಿ ಇತರರಿಗಿಂತ ಹಿಟ್ಲರನು ಬುದ್ಧಿವಂತನಲ್ಲದಿದ್ದರೂ ಅನ್ಯರಿಗಿಂತ ಅವನೇ ಚತುರನೆಂದು ಭಾವಿಸುವ ಸ್ವಭಾವವು ಅವನದು. ಅವನ ಸಮತಾವಾದೀ ಸಹೋದ್ಯೋಗಿಗಳೊಂದಿಗೆ ಅವನು ಸೇರಲಿಚ್ಛಿಸಲಿಲ್ಲ. ತಾನು ಸಮತಾವಾದೀ ವಿರೋಧಿಯೆಂದು ಅವರೆದುರು ಧೈರ್ಯದಿಂದ ಹೇಳಿ ತನ್ನ ವಿರೋಧವನ್ನು ವ್ಯಕ್ತಪಡಿಸಿದನು.

೦೦೦

ವಿಯೆನ್ನದ ಒಂದು ಬೀದಿ. ಹಿಟ್ಲರನು ರಜೆಯಾದುದರಿಂದ ಬೀದಿಯುದ್ದಕ್ಕೂ ಅಲೆದಾಡುತ್ತಿರುವಾಗ ವಿಚಿತ್ರ ವಸನಗಳನ್ನು ತೊಟ್ಟ ಕೆಲವರು ಸಭೆಸೇರಿ ಏನನ್ನೋ ಚರ್ಚಿಸುತ್ತಿದ್ದರು. ಇವರಾರು? ಇವರು ಜರ್ಮನರೇ ಎಂಬ ಪ್ರಶ್ನೆಯು ಅವನಲ್ಲುತ್ಪನ್ನವಾಯಿತು. ‘‘ಅವರು ಜರ್ಮನರಲ್ಲ, ಯೆಹೂದಿಯರು’’ ಎಂದು ಅವನಿಗೆ ತಿಳಿಯಿತು.

೦೦೦

ಈ ಜನರ ಕುರಿತು ಅವನು ಚರಿತ್ರೆಯಲ್ಲೋದಿದ್ದನು. ಅವರು ಕೃಪಣರು, ಇತರರ ಹಣವನ್ನು ನಿಷ್ಕರುಣೆಯಿಂದ ಸೆಳೆದೊಯ್ಯುವ ಯೆಹೂದಿಯರೆಂದು ಅವನಿಗರಿಯಿತು. ರಾಷ್ಟ್ರದ ಸಂಪತ್ತಿನ ಮೇಲೆ ಕುಳಿತು ಅಧಿಕಾರ ನಡೆಸುವ ಪಂಗಡದವರೇ ಅವರೆಂದು ಅವನಿಗೆ ಮನದಟ್ಟಾಯಿತು.

೦೦೦

ವಿಯನ್ನದಲ್ಲಿ ತನ್ನ ಅಭಿವೃದ್ಧಿಯಾಗುವಂತಿಲ್ಲವೆಂದು ಅವನಿಗೆ ಸ್ಪಷ್ಟವಾಯಿತು. ಜರ್ಮನಿಯ ಒರೆಗಲ್ಲಿನಲ್ಲಿ ತನ್ನ ಅದೃಷ್ಟವನ್ನು ಅರೆದು ನೋಡಲು ಹಿಟ್ಲರನು ಅಲ್ಲಿಗೆ ತೆರಳಿದನು. ಮ್ಯೂನಿಚ್ ನಗರದಲ್ಲಿ ಹಿಟ್ಲರನು ಕಾಲಿಟ್ಟುದು ಅದೇ ಮೊದಲನೆಯ ಬಾರಿ.

‘‘ಯೆಹೂದಿಯರು ಇಲ್ಲದಿರುವ ಈ ಸ್ಥಳದಲ್ಲಿ ಅವನು ನಿರಾತಂಕವಾಗಿ ಜೀವಿಸಿದನು. ಚತುರ

ಸ್ವಭಾವದ ಕಪ್ಪು ಕೂದಲಿನ ಹಿಟ್ಲರನು ಹುಡುಗ ಹುಡುಗಿಯರೊಡನೆ ನಿರಾತಂಕವಾಗಿ ತಿರುಗುತ್ತಿದ್ದನು.

○ ○ ○

ಈಗ ಹಿಟ್ಲರನು ಸುಣ್ಣಗಾರೆ ಹಾಕಿ ದುಡಿಯುವ ಯುವಕ. ಬಿಡುವಿದ್ದಾಗ ಚಿತ್ರಗಳನ್ನು ಬರೆದು ಅವನು ವಾರ್ತಾಪತ್ರಿಕೆಗಳಿಗೆ ಕಳುಹಿಸುವುದಿತ್ತು. ಆದರೆ ಹಿಂದೆ ಕಳುಹಿಸಲು ಸಾಕಷ್ಟು ಅಂಚೆ ಚೀಟುಗಳು ಚಿತ್ರಗಳೊಡನೆ ಕಳುಹಿಸಲ್ಪಡುತ್ತಿದ್ದುದರಿಂದ ಅವುಗಳು ಹೆಚ್ಚಾಗಿ ಹಿಟ್ಲರನಿಗೆ ಹಿಂದೆ ಬರುತ್ತಿದ್ದುವು. ಭಾವನಾರಾಜ್ಯದಲ್ಲಿ ಅಧಿಕಾರ ನಡೆಸಲು ಹವಣಿಸುತ್ತಿದ್ದ ಹಿಟ್ಲರನು ಶೂನ್ಯವಾದೊಬ್ಬ ವ್ಯಕ್ತಿಯಾಗಿದ್ದನು. ಕೋಟಗಟ್ಟಲೆ ಜನರ ಮಧ್ಯದಲ್ಲಿರುವ ಒಬ್ಬ ಸಾಮಾನ್ಯ ಯುವಕನಾಗಿದ್ದನು.

○ ○ ○

ಆಗ ಬಂತು ಮಹಾಯುದ್ಧ. ಧೀರಸೈನಿಕನಂತೆ ಹೋರಾಡಬೇಕೆಂದಿದ್ದ ಹಿಟ್ಲರನಿಗೊಂದು ಸಂದರ್ಭವು ದೊರಕಿತು. ಬವೇರಿಯದ ಸೈನ್ಯದೊಡನೆ ಅವನು ಸೇರಿಕೊಂಡನು. ಸಾಮ್ ಮತ್ತು ಫ್ರಿಷ್ ಯುದ್ಧಗಳಲ್ಲಿ ಹೋರಾಡಿದನು. ಅವನ ಮುಂಗೋಪಕ್ಕಾಗಿ ಇತರರು ಹಿಟ್ಲರನನ್ನು "ಹುಚ್ಚ ಅಡಾಲ್ಫ್" ಎಂದು ಕರೆಯುವುದಿತ್ತು. ಅಂದಿನ ಹಿಂಡನ್‌ಬರ್ಗನನ್ನು ಈ ಸಾಮಾನ್ಯ ಸೈನಿಕನು ಸಿಕ್ಕಾಬಟ್ಟೆ ವಿಮರ್ಶಿಸುತ್ತಿದ್ದನು. ಚತುರ ಸ್ವೈವಿಕನಾದುದರಿಂದ ಅವನ ಸ್ಥಾನವು ಬದಲಾಗುತ್ತಾ ಬಂತು. ಕೊನೆಗೆ ವೈರಿಗಳನ್ನು ಸದೆಬಡಿದುದಕ್ಕಾಗಿ ಅತ್ಯುಚ್ಚ ಸೈನಿಕ ಪದವಿಯು ಅವನಿಗೆ ದೊರೆಯಿತು.

○ ○ ○

ಯುದ್ಧಕಾಲದಲ್ಲಿ ಅವನ ಒಂದು ಕಣ್ಣಿಗೆ ಗಾಯವಾಯಿತು. ಒಂದು ಆಸ್ಪತ್ರೆಯಿಂದ ಇನ್ನೊಂದಕ್ಕೆ ಅವನು ಹೋಗಬೇಕಾಯಿತು. ಈ ಕಾಲದಲ್ಲಿ ಅವನ ರಾಷ್ಟ್ರದಲ್ಲಿ ಮಹತ್ವದ ಬದಲಾವಣೆಗಳಾಗುತ್ತಿದ್ದುವು. ಹಾಸಿಗೆಯ ಮೇಲೆ ತಲೆಯನ್ನಿಟ್ಟು, ತನ್ನ ಗೆಳೆಯರು ವಾರ್ತಾಪತ್ರಿಕೆಗಳಿಂದೋದುತ್ತಿದ್ದ ವಾರ್ತೆಯನ್ನು ಕೇಳಿ ಅವನ ಕಣ್ಣಿನಿಂದ ನೀರು ಸುರಿಯುತ್ತಿತ್ತು. ಕೀಲ್‌ನಲ್ಲಿ ನಾವೆಯು ದಂಗೆಯೆದ್ದಿತು! ಕೈಸರನು ಹಾಲೆಂಡಿಗೆ ಓಡಿಹೋದನು! ಸಾಮ್ರಾಜ್ಯಶಾಹೀಧ್ವಜವು ಕೆಳಗಿಳಿಸಲ್ಪಟ್ಟು ರಿಪಬ್ಲಿಕಿನ ಧ್ವಜದ ಆರೋಹಣವಾಯಿತೆಂಬ ವಾರ್ತೆಗಳನ್ನು ಹಾಸಿಗೆಯಲ್ಲಿಯೇ ಅವನು ಕೇಳಿದನು. ರಷ್ಯದಿಂದ ಜರ್ಮನಿಯನ್ನು ರಕ್ಷಿಸಿ ಗೌರವವನ್ನು ಉಳಿಸಬೇಕೆಂಬ ಇಚ್ಛೆಯು ಅವನಲ್ಲುಂಟಾಯಿತು.

○ ○ ○

ಯೆಹೂದಿಯರನ್ನು ವಿರೋಧ ದೃಷ್ಟಿಯಿಂದ ಕಾಣುತ್ತಿದ್ದುದರಿಂದ ಸಭೆಗಳಿಗೆ ಹೋಗಿ ಗುಪ್ತಚಾರಕನಂತೆ ನಡೆಯುವುದನ್ನೆಲ್ಲಾ ಸೈನ್ಯಾಧಿಕಾರಿಗಳಿಗೆ ತಿಳಿಸುವ ಕೆಲಸವು ಅವನಿಗೆ ದೊರೆಯಿತು. ಈ ಕೆಲಸವನ್ನು ಚತುರತೆಯಿಂದ ಮಾಡಿ ಅವನು ಅಧಿಕಾರಿಗಳ ಪ್ರಶಂಸೆಗೆ ಪಾತ್ರನಾದನು.

○ ○ ○

ಅದೊಂದು ದಿನ. ಮುರುಕು ಗುಡಿಸಲಿನಲ್ಲಿ ಕೆಲವರು ಸಭೆಗೂಡಿ ಹೊಸ ಸಾಮಾಜಿಕ ಪದ್ಧತಿಯ ಕುರಿತು ಚರ್ಚಿಸುತ್ತಿದ್ದರು. ಅಲ್ಲಿಯೇ ಒಬ್ಬ ತರುಣ ಇಂಜಿನೀಯರನು ಭಾಷಣಮಾಡುತ್ತಾ ರಾಷ್ಟ್ರೀಯತೆಯೂ ಸಮತಾವಾದವೂ ಕೂಡಿ ಒಂದಾಗಿರುವುದೇ ಅವರ ನವೀನ ಪದ್ಧತಿಯ ವೈಶಿಷ್ಟ್ಯವೆಂದು ಹೇಳುತ್ತಿದ್ದನು.

○ ○ ○

ಈ ನವ ಪದ್ಧತಿಯಲ್ಲಿ ಹಿಟ್ಲರನಿಗೆ ಅಪಾರ ವಿಶ್ವಾಸ ಉಂಟಾಯಿತು. ಇತರರ ಇಚ್ಛೆಯಂತೆ ಅವನೂ ಅದಕ್ಕೆ ಸೇರಿದನು. ಏಳು ಸದಸ್ಯರನ್ನೊಳಗೊಂಡ ಸಂಘವದು. ಅವನೇ ಏಳನೆಯ ಸದಸ್ಯ! ಪ್ರಚಾರಕಾರ್ಯದ ಡೈರೆಕ್ಟರನಾಗುವ ಅಧಿಕಾರವು ಹಿಟ್ಲರನ ಪಾಲಿನದಾಯಿತು. ಈ ಡೈರೆಕ್ಟರನಿಗೆ 1933 ರಲ್ಲಿ ಹದಿನೇಳು ಕೋಟಿ ಮತಗಳು ಸಿಗುವಂತಾಯಿತು.

○ ○ ○

ಈ ಅಧಿಕಾರದಲ್ಲಿರುವಾಗ ಹಿಟ್ಲರನು ಹೊಸ ರೀತಿಯ ಪ್ರಚಾರಕಾರ್ಯವನ್ನು ಮಾಡಲಾರಂಭಿಸಿದನು. ಇತರರನ್ನು ಖಂಡಿಸಿದರೆ ಅವರು ಬೇಕಷ್ಟು ಪ್ರಚಾರವನ್ನು ತಮ್ಮ ವಿರೋಧಿಗಳ ಕುರಿತು ಮಾಡುವರೆಂದೆಣಿಸಿ ಹಿಟ್ಲರನು ಮ್ಯೂನಿಚ್ ವಾರ್ತಾಪತ್ರಿಕೆಗಳನ್ನು ಕಟುವಾಗಿ ವಿಮರ್ಶಿಸಿದನು. ವಾರ್ತಾಪತ್ರಿಕೆಗಳು ಈ ವಿಮರ್ಶೆ

ಗಳನ್ನು ಲೆಕ್ಕಿಸಲಿಲ್ಲ. ನಿರಾಶನಾಗಿ ಹಿಟ್ಲರನು ಸಂಘವಾದಿಗಳನ್ನು ವಿಮರ್ಶಿಸಿದನು. ಈ ಸಂಗಡದವರು ಸಿಟ್ಟಿನಿಂದ ಇವನಿಗೆ ವಿರೋಧವಾಗಿ ಮಹತ್ವದ ಪ್ರಚಾರ ನಡೆಸಿದರು. ಈ ಪ್ರಚಾರದಿಂದ ಹತ್ತು, ನೂರು ಮಂದಿ ಬರುತ್ತಿದ್ದ ಹಿಟ್ಲರನ ಸಭೆಗಳಿಗೆ ಸಾವಿರಗಟ್ಟಲೆ ಜನರು ಬರಲಾರಂಭಿಸಿದರು. ಭಾಷಣಗಳಿಂದ ಜನಮನವನ್ನು ಸೆಳೆಯುವುದರಲ್ಲಿ ಹಿಟ್ಲರನಷ್ಟು ಚತುರರು ಜರ್ಮನಿಯಲ್ಲಿ ಇತರರಿಲ್ಲವೆನ್ನಬಹುದು.

೦ ೦ ೦

ಹಿಟ್ಲರನ ಬಾಲ್ಯದ ಕನಸುಗಳು ಈಗ ನನಸ ಗುತ್ತಾ ಬರುತ್ತಿವೆ. ಅಲೆಕ್ಸಾಂಡರನಷ್ಟು ಪ್ರಖ್ಯಾತನಾಗಬೇಕೆಂಬ ಅವನ ಆಶೆಯ ಸಸಿಯು ಹೂ ಬಿಟ್ಟಿದೆ. ಅಂದಿನ ಅನಾಥ ಬಾಲಕನು ಇಂದಿನ ಜರ್ಮನರ ವಿಧಾತನಾಗಿದ್ದಾನೆ. ಆಸ್ಟ್ರಿಯವನ್ನು ಸದ್ದಿಲ್ಲದೆ ನುಂಗಿ, ಸದ್ಯದಲ್ಲಿಯೇ ಕಳೆದು ಹೋದ ಜರ್ಮನ್ ವಸಾಹತುಗಳನ್ನೂ, ಖ್ಯಾತಿಯನ್ನೂ ಇನ್ನೊಮ್ಮೆ ಪಡೆಯಲಿದ್ದಾನೆ. ಸಂಘವಾದವನ್ನು ಜರ್ಮನಿಯಲ್ಲಿ ಕೊಂದವನೆಂದರೆ ಹಿಟ್ಲರ್! ಅವನ ಕಾರ್ಯಗಳು ಇಷ್ಟೇ ಅಲ್ಲ. ಇನ್ನೆಷ್ಟೋ ಮಹತ್ವದ ಬದಲಾವಣೆಗಳನ್ನು ಅವನು ತಂದೊಡ್ಡಲಿದ್ದಾನೆ.

---

## ವಿನೋದಗಳು.

ಶ್ಯಾಮರಾಯರು ಒಂದು ದನ ಮಾರಿದರು. ಮಾರನೆ ದಿನ ಅದನ್ನು ಕೊಂಡುಕೊಂಡವರು ಬಂದು ಕೋಪದಿಂದ—

"ಹೌದಯ್ಯಾ, ನಿಮ್ಮ ದನ ಬಂಜೆಯೆಂದು ಹೇಳದೆ ನನಗೆ ಮೋಸಮಾಡಿದಿರಲ್ಲಾ?"

"ಹೌದು ಸ್ವಾಮಿ," ಎಂದು ಶ್ಯಾಮರಾಯರು ಉತ್ತರವಿತ್ತು ಹೇಳಿದರು- "ನನಗೆ ಅದನ್ನು ಕೊಟ್ಟವರು ಆ ಕುರಿತು ಏನನ್ನೂ ಹೇಳಲಿಲ್ಲ. ಹಾಗೆ ಅದೊಂದು ಗುಟ್ಟಾಗಿರಬೇಕೆಂದು ಭಾವಿಸಿ ನಾನು ರಟ್ಟುಮಾಡಲಿಲ್ಲ"

೦ ೦ ೦

"ಹುಡುಗಾ, ಕಳೆದ ಪಾಠದಲ್ಲಿ ನಾನು ಉಷ್ಟ್ರ ಪಕ್ಷಿಯ ಕುರಿತು ಏನು ಹೇಳಿದೆ?"

"ನಿಮಗೆ ಮರೆತು ಹೋಗಿದೆಯೋ ಸಾರ್?"

---


# ಸಪ್ಲೈ ಏಜೆನ್ಸಿ ಲಿಮಿಟೆಡ್ ಉಡುಪಿ.

## ಮಾಲಕರು:-

ಮಣಿಪಾಳ ಪವರ್ ಪ್ರೆಸ್, ಶ್ರೀ ಭಾರತವಸ್ತುಮಂದಿರ, ಅಂತರಂಗ, ತುಳುನಾಡ್ ಸ್ಟೇಶನರಿ ಮಾರ್ಟ್, ತುಳುನಾಡ್ ಪ್ರೆಸ್ ಇತ್ಯಾದಿ.

**ಹೆಡ್ ಆಫೀಸು:** ಬೊಬ್ಬರ್ಯ ಜಂಕ್ಷನ್, ಉಡುಪಿ.

ಅಧಿಕೃತ ಮೂಲಧನ ರೂ. ೧,೦೦,೦೦೦
ಚಂದಾತೆತ್ತ ,, ,, ೩೦,೩೦೦

**ಫೈನಾನ್ಸ್ ಡಿಪಾರ್ಟ್‌ಮೆಂಟ್:** ವ್ಯಾಸಭವನಂ, ಉಡುಪಿ

**ನಿರಖು ಠೇವಣಾತಿಗಳು ಈ ಕೆಳಗಣ ಬಡ್ಡಿಯಲ್ಲಿ ಸ್ವೀಕರಿಸಲ್ಪಡುತ್ತವೆ.**

| | | | | |
|---|---|---|---|---|
| ೩ ತಿಂಗಳಿಂದ | ೬ ತಿಂಗಳ ವರೆಗೆ | ಶೇಕಡ | ೪ | ಸಲೆಯಲ್ಲಿ |
| ೬ ,, | ೧೧ ,, | ,, | ೫ | ,, |
| ೧೨ ,, | ೧೮ ,, | ,, | ೬ | ,, |

೨ ವರ್ಷ ಯಾ ಅದಕ್ಕಿಂತ ಹೆಚ್ಚಿನ ಸಮಯಕ್ಕಿಡುವ ಬಡ್ಡಿದ ವನ್ನು ಬರೆದು ತಿಳಕೊಳ್ಳಿರಿ.

ಮೆನೇಜರ್,

**ಫೈನಾನ್ಸ್ ಡಿಪಾರ್ಟ್‌ಮೆಂಟ್,**

ವ್ಯಾಸಭವನಂ, ತೇರಬೀದಿ, ಉಡುಪಿ.

# ನಿಮಗೆ ಬೇಸರವಾದಾಗ ನನಗೆ ಬರೆಯಿರಿ

**ಕುಮಾರಿ... ಬಾಯಿ, ಪುತ್ತೂರು.**

"ನಿಮ್ಮ ಪತ್ರಿಕೆಯ ಎರಡನೆಯ ಸಂಚಿಕೆಯಲ್ಲಿ "ಈ ಸಮಸ್ಯೆಯನ್ನು ಬಗೆಹರಿಸುವುದು ಹೇಗೆ?' ಎಂಬ ಲೇಖನದಲ್ಲಿ ಎಷ್ಟು ನಿಮಿಷಗಳ ತನಕ ಮುದ್ದಿಡಬಹುದೆಂಬ ವಿಚಾರ ಬರೆದಿದೆ. ಇಂತಹ ಲೇಖನಗಳನ್ನು ಪ್ರಕಟಸುವುದರಿಂದ ನೀವು ಸ್ತ್ರೀತ್ವದ ಅವಮಾನಮಾಡುತ್ತಿದ್ದೀರೆಂಬುದರ ಅರಿವು ನಿಮಗಿದೆಯೇ"?

ತಂಗೀ! ಭಾವುಕತೆಗೆ ಅಷ್ಟೊಂದು ಏರಬೇಡಿರಿ. ಅಂತಹ ಲೇಖನಗಳಲ್ಲಿ ಮಾನಾವಮಾನಗಳ ಪ್ರಶ್ನೆಯೆಲ್ಲಿದೆ? (ಇದ್ದರೆ) ಸ್ತ್ರೀಯರಿಗಾಗುವಷ್ಟೇ ಅವಮಾನವು ಪುರುಷರಿಗೂ ಆಗುವುದಿಲ್ಲವೆ?...ಅನುಭವವು ನಿಮ್ಮ ಈಗಿನ ಅಭಿಪ್ರಾಯವನ್ನು ಬದಲಾಯಿಸದಿರಲಾರದೆಂದು ನನ್ನ ಭರವಸೆ.

ಂ ಂ ಂ

**ನಾರಾಯಣ ಶೆಟ್ಟಿ, ಮಂಗಳೂರು,**

"ನಿಮ್ಮ ಕಳೆದ ಬಾರಿಯ ಓದುಗರ ಪುಟದಿಂದ ದಕ್ಷಿಣ ಕನ್ನಡದಲ್ಲಿ ಭುವನೇಶ್ವರಿ ಟಾಕೀಸೆಂಬೊಂದು ಚಲಚ್ಚಿತ್ರ ಸಂಸ್ಥೆ ಸ್ಥಾಪಿತವಾಗಿದೆಯೋ ಆಗಲಿರುವುದೋ ಎಂದು ವ್ಯಕ್ತವಾಗುತ್ತದೆ. ಇದರ ವಿಷಯವಾಗಿ ನಾನು ಹೆಚ್ಚು ತಿಳಿಯಲಿಚ್ಛಿಸುತ್ತೇನೆ."

ಈ ವಿಷಯದಲ್ಲಿ ನೀವು ಶ್ರೀ. ಗರೂಡ ಸದಾಶಿವರಾಯರೊಡನೆಯೇ ಪತ್ರ ವ್ಯವಹಾರ ಮಾಡಿರಿ.

ಂ ಂ ಂ

**ಶ್ರೀ. ಹಾಳಭಾವೆಪ್ಪಾ ಅಂದಾನೆಪ್ಪಾ ಗಲಗಲಿ... ಹಾವೇರಿ.**

ಮೊನ್ನೆ ನಡದ ಕಾಂಗ್ರೆಸ ವರ್ಕಿಂಗ ಕಮಿಟಿಯ ಸಭಾದೊಳಗೆ ಭಾಷಾವಾರ ಪ್ರಾಂತರಚನೆಯ ಪ್ರಶ್ನೆಯನ್ನು ಮುಂದರಿಸಿಡಬೇಕೆಂಬ ನಿರ್ಧಾರವಾಗಿಯದೆ. ಇದರಿಂದ ನಮ್ಮ ಕರ್ನಾಟಕ ಪ್ರಾಂತದ ನಿರ್ಮಾಣಕ್ಕೆ ಅಡಚಣೆಯಾದೀತೆಂದು ನಿಮಗನಿಸುವದಿಲ್ಲವೆ?"

ಹೌದು. ವರ್ಕಿಂಗ್ ಕಮಿಟಿಯಲ್ಲಿ ನಮ್ಮ ಕರ್ನಾಟಕದ ಸದಸ್ಯರೊಬ್ಬರೂ ಇಲ್ಲದಿರುವುದು ಈ ಅಡಚಣೆಗೆ ಕಾರಣವಿರಬಹುದು!

ಂ ಂ ಂ

**ಪಿ. ರಾಮನಾಯ್ಕ... ಕಾಸರಗೋಡು**

"ನಾನು ಮಂಗಳೂರಲ್ಲಿ ಕಲಿಯುತ್ತಿದ್ದಾಗ ನನ್ನ ಸಹವಿದ್ಯಾರ್ಥಿನಿಯೊಬ್ಬಳಲ್ಲಿ ಅನುರಕ್ತನಾದೆ. ಅವಳಿಗೂ ನನ್ನ ಮೇಲೆ ಅನುರಾಗವಿದೆ. ನಮ್ಮ ವಿವಾಹಕ್ಕೆ ಬೇರಾವ ತೊಂದರೆಯಿಲ್ಲದಿದ್ದರೂ ನಾನು ನಿರುದ್ಯೋಗಿಯಾದೊಬ್ಬ ಬಡವನಾದುದರಿಂದ ನನಗೆ ಯೋಗ್ಯವಾದ ಉದ್ಯೋಗವು ದೊರೆಯುವ ವರೆಗೆ ನಮ್ಮ ವಿವಾಹಕ್ಕೆ ಆಸ್ಪದವಿಲ್ಲ. ಎಂದರೆ ಅವಳ ತಂದೆ ತಾಯಿಗಳು ಮದುವೆಗೊಪ್ಪುವುದಿಲ್ಲ. ನನ್ನ ಪ್ರೇಮಿಕೆಯು ಬೆಳೆದು ನಿಂತ ಹುಡುಗಿಯಾದುದರಿಂದ ಅವಳ ಇಷ್ಟಕ್ಕೆ ವಿರುದ್ಧವಾಗಿಯಾದರೂ ಅವಳಿಗೆ ಬೇರಾವನೊಬ್ಬನೊಡನೆ ವಿವಾಹವಾಗುವ ಸಂಭವವಿದೆ. ಹೀಗಿರುವಾಗ ನಾನು ಯಾವ ರೀತಿಯಲ್ಲಿ ವರ್ತಿಸಿದರೆ ನನಗೆ ಒಳಿತೆಂಬುದನ್ನು ತಿಳಿಸಲಾರಿರಾ? ಅವಳಿಲ್ಲದೆ ನಾನು ಬದುಕಲಾರೆನೆಂಬಷ್ಟು ಭಯವೂ ನನಗಿದೆ."

ನಿಮ್ಮ ಪ್ರೇಮಿಕೆಯು ನಿಜವಾಗಿಯೂ ನಿಮ್ಮನ್ನು ಪ್ರೀತಿಸುವುದಿದ್ದರೆ ಇನ್ನಾರನ್ನೂ ಆಕೆಯು ವಿವಾಹವಾಗುವುದಿಲ್ಲವೆಂದು ಕಂಠೋಕ್ತವಾಗಿ ಹಿರಿಯರೊಡನೆ ಹೇಳಲಿ. ಆಕೆಯು ನಿಮ್ಮ ಬೇಡಿಕೆಯನ್ನು ಪಾಲಿಸದಿದ್ದರೆ ನಿಮ್ಮೊಳಗಿರುವ ಪ್ರೇಮವನ್ನು ಪ್ರೇಮವೆನ್ನಲಾಗುವುದಿಲ್ಲ. ಒಂದು ವೇಳೆ ಆಕೆಯು ನಿರಾಕರಿಸಿದರೆ ಅವಳ ಮೈತ್ರಿಯನ್ನು ಬಿಟ್ಟು ನೀವು ಇನ್ನೊಬ್ಬಳೊಡನೆ ಪ್ರೇಮಪ್ರಸಂಗವನ್ನು ಬೆಳೆಸುವುದು ಯೋಗ್ಯ. ನೀವು ಉದ್ಯೋಗಿಗಳಾಗುವ ತನಕ ಹೀಗೆಯೇ ಮಾಡುತ್ತಾ ಬಂದು ಕೊನೆಗೆ ನಿಮ್ಮ ನಿಜವಾದ ಪ್ರೇಯಸಿಯನ್ನು ಮದುವೆಯಾಗಬಹುದು.

---

## ದೇವರ ಭೇಟಿಯಾಗಲು ಆಜ್ಞೆ!

ದೇವರ ಭೇಟಿಮಾಡಿ, ಭಾವಚಿತ್ರವನ್ನೂ ತೆಗೆಯಬೇಕೆಂಬ ಆಜ್ಞೆಯನ್ನು ಕೊಟ್ಟೊಂದು ಸ್ವಾರಸ್ಯದ ಕತೆಯು ಮಿ| ಸೆಸಿಲ್ ಹಂಟ್ ಎಂಬವರು ಲಂಡನಿನ ಪ್ರಸಿದ್ಧ ಪತ್ರಿಕೋದ್ಯಮಿಗಳ ಕುರಿತು ಬರೆದ ಪುಸ್ತಕದಲ್ಲಿ ಪ್ರಕಟವಾಗಿದೆ.

### ಭಾವಚಿತ್ರವನ್ನೂ ತೆಗೆಯಬೇಕು.

ಡೈಲೀಮೈಲ್ ಪತ್ರಿಕೆಯ ಸುದ್ದಿಗಾರರು ಅಮೇರಿಕದ ಗನಿಸ್ಫೋಟದ ವಾರ್ತೆಯನ್ನು ಕಳುಹಿಸುವಾಗ "ಈ ದಿನ ರಾತ್ರಿ, ದೇವರು ಈ ಚಿಕ್ಕ ಗುಡ್ಡೆಯಲ್ಲಿ ಕುಳಿತು ಅನಾಹುತದ ದೃಶ್ಯವನ್ನು ನೋಡುತ್ತಿದ್ದಾನೆ......" ಎಂದು ಬರೆದಿದ್ದರು. ಈ ವಾರ್ತೆಯು ತಲಪಿದೊಡನೆಯೇ ಪತ್ರಿಕಾ ಸಂಪಾದಕರು ಹೀಗೆಂದು ತಂತಿಕೊಟ್ಟರು "ಗನಿಸ್ಫೋಟದ ಅನಾಹುತವಂತಿರಲಿ; ದೇವರ ಭೇಟಿಮಾಡಿ ಭಾವಚಿತ್ರವನ್ನು ತೆಗೆಯಲು ಮರೆಯಬೇಡಿ."

# ಅಂತರಂಗದ ಸುದ್ದಿಗಳು

ಗುಟ್ಟಿನ ಸಂಗತಿಗಳಾದುದರಿಂದ ಯಾರೊಡನೆಯೂ ಹೇಳಿ ಗಡಿಬಿಡಿ ಮಾಡಬಾರದು.

**ಶಿಸ್ತಿನ ಅವಧಿಯಲ್ಲಿ ಕಡಿತ?**

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಶ್ರೀ. ರಂಗರಾವ್ ತಲಚೇರಿಕರರ ಮೇಲಿನ ಶಿಸ್ತನ್ನು ತೆಗೆದುಹಾಕುವರೆಂಬ ವದಂತಿ.

X X X

**ಸತ್ಯಮೂರ್ತಿಯವರಿಗೆ ಅಧ್ಯಕ್ಷತೆಯೆ?**

ಶ್ರೀ. ಸತ್ಯಮೂರ್ತಿಯವರು ಮುಂದಿನ ವರುಷ ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಡುವರೆಂಬ ಕಿಂವದಂತಿ.

X X X

**ಚೀನಕ್ಕೆ ನಮ್ಮ ಜಿಲ್ಲೆಯ ಸಹಾಯ**

ಚೀನಕ್ಕೆ ಕಳುಹಿಸಲಿರುವ ವೈದ್ಯಕೀಯ ಶಿಷ್ಟಮಂಡಲಕ್ಕೆ ನಮ್ಮ ಜಿಲ್ಲೆಯಲ್ಲಿ ಒಟ್ಟು ೫೦,೦೦೦ ರೂಪಾಯಿ ಜಮೆಯಾಗಿದೆಯಂತೆ.

X X X

**ಅವತಾರ!**

ತಿರುಪತಿಯ ಶ್ರೀನಿವಾಸನು ಉಡುಪಿಯಲ್ಲಿ ಅಕ್ಟೋಬರ ೧೩ನೆ ತಾರೀಕಿನಂದು ಅವತರಿಸುವನೆಂದು ಒಬ್ಬ ಭಟ್ಟರಿಗೆ ಸ್ವಪ್ನವಾಗಿದೆ.

X X X

**ಮತಾಂತರ?**

ಶ್ರೀಮತಿ ಕಮಲಾದೇವಿಯವರು ಕಾಮ್ರೇಡ್ ಯಂ. ಯನ್. ರಾಯರ ತೀವ್ರಗಾಮಿ ಪಂಗಡಕ್ಕೆ ಸೇರುವರೆಂದು ಕರ್ಣಾಕರ್ಣಿಕೆ.

X X X

(ಅಂತರಂಗದ ಸುದ್ದಿಗಾರರ ಗುಟ್ಟಿನ ಡೈರಿಯ ಆಧಾರ ರಹಿತವಾದ ಸುದ್ದಿಗಳು)

●

**ಉಡುಪಿಯ ಸುಯೋಗ?**

ಉಡುಪಿಯ ಮುನಿಸಿಪಾಲಿಟಿಯು ೭|| ಮೈಲು ರಸ್ತೆಗೆ ಡಾರು ಹಾಕುವರೆಂದು ವಾರ್ತೆ.

X X X

**ನಮ್ಮ ಜಿಲ್ಲೆಗೆ ಗೌರವ?**

ಕೊಚ್ಚಿಯ ನವರಾಜ್ಯ ಘಟನೆಯನ್ನು ಯಶಸ್ವಿಯಾಗಿ ಮಾಡುವರೆ ನೇಮಿಸಲ್ಪಡುವ ಸಲಹೆಗಾರರ ಮಂಡಲಿಗೆ ಶ್ರೀಮತಿ ಕಮಲಾದೇವಿಯರು ಸೇರಿಸಲ್ಪಡುವರೆಂದು ಸುದ್ದಿ ಹರಡಿದೆ.

X X X

**ತಪಸ್ವಿಗಳ ಆಗಮನ?**

ಉಡುಪಿಯ ಹತ್ತಿರವಿರುವ ಕುಂಡೆಲ್‌ಕಾಡಿನಲ್ಲಿ ಎರಡು ಮೂರು ದಿನಗಳಿಂದ ಒಬ್ಬ ಮಹಾ ವೃದ್ಧ ತಪಸ್ವಿಗಳು ತಪಸ್ಸು ಮಾಡುತ್ತಿದ್ದಾರಂತೆ. ಅವರು ಎಂತಹ ರೋಗವನ್ನಾದರೂ ತನ್ನ ಮಂತ್ರಶಕ್ತಿಯಿಂದ ಗುಣಮಾಡಿ ಬಿಡುತ್ತಾರಂತೆ. ಈಗಾಗಲೆ ಇದರ ಪ್ರಯೋಜನವನ್ನು ಹಲವರು ಪಡೆದಿರುವರಂತೆ.

X X X

**ಕಮಿಷನರರ ವರ್ಗಾವರ್ಗಿ?**

ಮಂಗಳೂರು ಮ್ಯುನಿಸಿಪಾಲಿಟಿಯ ಈಗಿನ ಕಮಿಷನರರು ಮಂಗಳೂರಿಂದ ವರ್ಗಾಯಿಸಲ್ಪಡುವ ಸಂಭವವಿದೆಯೆಂಬ ಸುದ್ದಿ.

X X X

**ಹೀಗಾಗಬಹುದೇ?**

ಶ್ರೀ. ರಂಗರಾವ್ ದಿವಾಕರರ ಆರೋಗ್ಯವು ಸುಧಾರಿಸುತ್ತಾ ಬರುತ್ತಿರುವುದರಿಂದ ಅವರನ್ನು ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಅನೇಕರು ಹಲವು ಪತ್ರಗಳನ್ನು ಬರೆದಿದ್ದಾರಂತೆ.

X X X

**ಸಾಲನಿವಾರಣೆ?**

ಸಾಲನಿವಾರಣಾ ಕಾಯಿದೆಯು ಎಲ್ಲೆಲ್ಲಿ ಎಂತೆಂಥ ಪರಿಣಾಮವನ್ನುಂಟುಮಾಡಿದೆಯೆಂಬುದನ್ನು ವಿಚಾರಿಸುತ್ತಾ ಕಾಂಗ್ರೆಸ್ ಧುರೀಣರು ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿ ಭಾರೀ ಕೆಲಸಮಾಡಬೇಕೆಂದು ಯೋಚಿಸಲಾರಂಭಿಸಿದ್ದಾರೆಂದು ವಾರ್ತೆ.

X X X

**ಉಡುಪಿಯ ಮ್ಯುನಿಸಿಪಲ್ ಚುನಾವಣೆ?**

ಕಾಂಗ್ರೆಸ್ ಶುದ್ಧೀಕರಣ ಸಂಘದವರು ಉಡುಪಿಯ ಮುಂಬರುವ ಮ್ಯುನಿಸಿಪಲ್ ಚುನಾವಣೆಗೆ ಎಲ್ಲಾ ಸ್ಥಾನಗಳಿಗೆ ತಮ್ಮ ಸ್ವಂತ ಉಮೇದ್ವಾರರನ್ನು ನಿಲ್ಲಿಸುವರೆಂದು ನಂಬಬಹುದಂತೆ.

X X X

**ಜಿಲ್ಲೆಯಲ್ಲಿ ಬಿರುಗಾಳಿ!**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗೋಸ್ತು ೧೪ರಿಂದ ೨೧ರ ವರೆಗೆ ಭಯಂಕರ ಬಿರುಗಾಳಿಯು ಬೀಸಿ, ಕಡಿಮೆಯೆಂದರೆ ೨೫,೦೦೦ ಜನರಾದರೂ ಸಾಯುವರೆಂದು

ಸ್ಥಳೀಕ ಜೋಯಿಸರೊಬ್ಬರು ಭವಿಷ್ಯ ಹೇಳಿದ್ದಾರೆ ಕುಂಭ ರಾಶಿಯಲ್ಲಿ ಹುಟ್ಟಿದವರಿಗೆ ವಿಶೇಷ ಅಪಘಾತವಿದೆಯೆಂದು ಅವರ ಅಂಬೋಣ.

X X X

**ಮತಭೇದ?**

ಈಗಿನ ಜಿಲ್ಲಾ ಕಾಂಗ್ರೆಸಿನ ವರ್ಕಿಂಗ್ ಕಮಿಟಿಯ ಸದಸ್ಯರಲ್ಲಿ ಇತ್ತೀಚೆಗೆ ಮತಭೇದವುಂಟಾಗಿ ಹೊಸ ಕಮಿಟಿಯ ನಿರ್ಮಾಣವಾಗುವ ಸಂಭವವಿದೆಯೆಂದು ವರ್ತಮಾನ.

X X X

**ದಂಡನೆಯೆ?**

ಕಾರ್ಕಳ ತಾಲೂಕು ಕಾಂಗ್ರೆಸ್ ಕಮಿಟಿಯವರು ಶ್ರೀ. ಕೆ. ಕೆ. ಪೊದವಾಳರು ಸಮತಾವಾದೀ ಪಕ್ಷಕ್ಕೆ ಸೇರಬಾರದೆಂಬ ಠರಾವನ್ನು ಮಾಡಿರುವುದಕ್ಕೆ ಜಿಲ್ಲಾ ಕೋಂಗ್ರೆಸ್ ಕಮಿಟಿಯವರು ಕಾರ್ಕಳದವರನ್ನು ದಂಡಿಸಬೇಕೆಂದು ಕೆಲವು ಸದಸ್ಯರ ಕೋರಿಕೆಯಂತೆ.

X X X

**ಕಾರ್ಕಳಕ್ಕೂ ಬಂತೆ?**

ಶ್ರೀ. ಕೆ. ಕೆ. ಪೊದುವಾಳರ ಧುರೀಣತೆಯಲ್ಲಿ ಕಾರ್ಕಳದಲ್ಲಿ "ಸಮಾಜಾಧಿಕಾರೀ ಪಕ್ಷ"ವೊಂದು ಸ್ಥಾಪಿಸಲ್ಪಡಬಹುದೆಂಬ ನಿರೀಕ್ಷೆಯಿದೆ.

X X X

**ಮುಸ್ಲಿಮ್ ಲೀಗಿನ ಪಡೆ?**

ಪೆಲೆಸ್ತೈನಿನಲ್ಲಿ ಅರಬರಿಗಾಗುವ ಅತ್ಯಾಚಾರವನ್ನು ತಡೆಯಲು ಮುಸ್ಲಿಮ್ ಲೀಗಿನವರು ತಮ್ಮ ವತಿಯಿಂದ ಯುದ್ಧ ಮಾಡುವ ಸ್ವಯಂಸೇವಕದಳವನ್ನು ಕಳುಹಿಸಲಿರುವರಂತೆ.

X X X

**ಐಕ್ಯದ ಹೊಸಹಾದಿ?**

ಮಿ| ಜಿನ್ನರನ್ನು ಕಾಂಗ್ರೆಸಿನ ಕಾಯಂ ಅಧ್ಯಕ್ಷರನ್ನಾಗಿ ಮಾಡಲು ಕಾಂಗ್ರೆಸು ಒಪ್ಪಿದರೆ ಮುಸ್ಲಿಮ್ ಲೀಗಿನವರ ಶರ್ತಗಳನ್ನು ಹಿಂತೆಗೆಯಬಹುದಾಗಿ ಮಿ| ಫಜ್ಲುಲ್ ಹಕ್ಕರು ಕಾಂಗ್ರೆಸಿಗೆ ಸೂಚನೆ ಕೊಟ್ಟಿರುವರಂತೆ.

X X X

**ಬಂಗಾಳದಲ್ಲಿ ಕಾಂಗ್ರೆಸ್ ಮಂತ್ರಿಮಂಡಲ?**

ಬಂಗಾಳದ ಮಂತ್ರಿಮಂಡಲದಿಂದ ಹೊರತಳ್ಳಲ್ಪಟ್ಟ ಮಾಜಿ ಮಂತ್ರಿ ನಜಿಮುದ್ದೀನರು ಕಾಂಗ್ರೆಸಿಗೆ ಸೇರುವ ಕುರಿತು ಶ್ರೀ. ಶರತ್ ಚಂದ್ರ ಬೋಸರೊಡನೆ ಮಾತುಕತೆ ನಡೆಸುತ್ತಿರುವರಂತೆ. ಇದರ ಪರಿಣಾಮವಾಗಿ ಬಂಗಾಳದಲ್ಲಿ ತೀವ್ರವೇ ಕಾಂಗ್ರೆಸ್ ಮಂತ್ರಿಮಂಡಲವಾಗಲಿರುವುದಂತೆ.

---

ನಮ್ಮ ಸ್ವಂತ

## ಹೊಸ ಗಾದೆಗಳು

ಟಂಕಸಾಲೆಯಿಂದ

ನಿದ್ರೆಗಿಂತ ಬಂಧುವಿಲ್ಲ, ನುಸಿಗಿಂತ ವೈರಿಯಿಲ್ಲ.

೦೦೦

ಸತ್ತವರಿಗಿಂತ ಉತ್ತಮರಿಲ್ಲ, ಇದ್ದವರಿಗಿಂತ ಕೆಟ್ಟವರಿಲ್ಲ.

೦೦೦

ನೇಣು ಹಾಕಿದ ಆಲದ ಮರವೆಂದು ಅಪ್ಪನನ್ನು ನೇತ ಹಾಕುವುದೆ?

೦೦೦

ಸತಿಗೆ ಪರಪತಿಯೇ ದೈವ!

೦೦೦

ಊರಿಗೆ ದೊಡ್ಡವನಾದವನಿಗೆ ಮರ್ಯಾದೆಯಿಲ್ಲ.

೦೦೦

ಇದ್ದ ನಾಯಿಗೆ ಸತ್ತ ಹೆಗ್ಗಣ ಮುದ್ದು!

೦೦೦

ಕೊಟ್ಟ ಸಾಲವ ಹಿಂದೆ ಕೇಳುವಾತನೆ ಹೊಲೆಯ!

೦೦೦

ಸತ್ತ ತಾಯಿಯ ಕರುವ ಅಟ್ಟಿಬಿಡದವ ಮೂರ್ಖ.

೦೦೦

ಊಟ ಮಾಡದ ದೇವ ಉಂಟು ಮಾಡಲಾಪನೆ?

೦೦೦

ಮೈತುಂಬಾ ಹೊಲಸು, ಮೋರೆ ತುಂಬಾ ಪೌಡರ್!

೦೦೦

"ಯಾವಾತನು ಹೆಂಗಸನ್ನು ನೋಡಿ ಅವಳಲ್ಲಿ ಮೋಹಿತನಾಗುತ್ತಾನೋ ಅವನು ಅವಳೊಡನೆ ಮನಸ್ಸಿನಲ್ಲಿಯೇ ವ್ಯಭಿಚಾರ ಮಾಡಿದಂತಾಯಿತು," ಎಂದು ಬೈಬಲಿನಲ್ಲಿ ಹೇಳಿದೆ.

ಹಾಗಾದರೆ ನೋಡದೆ, ಮೋಹಿತನಾಗದೆ, ವ್ಯಭಿಚಾರವನ್ನು ಮಾಡಿದರೆ ಹೇಗೆ?

೦೦೦

ಕೂಷ್ಮಾಂಡ ವಾಯುವಿಗೇನಾದರೂ ಮದ್ದಿದೆಯೇ? ಎಂದೊಬ್ಬರ ಪ್ರಶ್ನೆ—ಹೌದು. ಏನನ್ನೂ ತಿನ್ನದಿರುವುದೇ ಮುದ್ದು.

# ವಿಪರೀತ ಪ್ರಿಯ

ಗೈ ಡಿ' ಮೋಪಸ್ಸಾಂತರ ಒಂದು ಕತೆಯ ರೂಪಾಂತರ.

ಫ್ರಾನ್ಸ್ ಇಟಲಿಗಳ ಸರಹದ್ದಿನಲ್ಲಿ ಭೂಮಧ್ಯ ಸಮುದ್ರದ ತೀರದಲ್ಲಿ ಒಂದು ಪುಟ್ಟ ರಾಜ್ಯವಿದೆ. ಅದರ ಹೆಸರು ‘‘ಮನಾಕೊ’’. ಈ ರಾಜ್ಯಕ್ಕಿಂತಲೂ ಹೆಚ್ಚು ಜನಸಂಖ್ಯೆಯುಳ್ಳ ಎಷ್ಟೋ ಹಳ್ಳಿಗಳಿರಬಹುದು— ಏಕೆಂದರೆ ಎಲ್ಲರನ್ನೂ ಲೆಕ್ಕಕ್ಕೆ ಕಟ್ಟಿಕೊಂಡರೆ ಆ ರಾಜ್ಯದಲ್ಲಿ ಒಟ್ಟು ಏಳು ಸಾವಿರ ಜನರಿದ್ದಾರೆ. ಮತ್ತೆ ಆ ರಾಜ್ಯದ ಭೂಮಿಯನ್ನೆಲ್ಲಾ ಆ ಪ್ರಜೆಗಳಲ್ಲಿ ಸಮಾನವಾಗಿ ಹಂಚಿದ್ದಾದರೆ ಒಬ್ಬೊಬ್ಬರಿಗೆ ಒಂದೊಂದೆಕ್ರೆ ದೊರೆಯುವಂತಿದೆ. ಆದರೂ ಈ ಆಟದ ರಾಜ್ಯದಲ್ಲಿಯೂ ಒಬ್ಬ ಚಿಕ್ಕ ರಾಜನಿದ್ದಾನೆ. ಒಬ್ಬಳು ರಾಣಿಯಿದ್ದಾಳೆ. ಅವರಿಗೆ ಸತ್ಯಕ್ಕೂ ಒಂದು ಅರಮನೆಯಿದೆ, ಸಭೆಯಿದೆ, ಮಂತ್ರಿಗಳಿದ್ದಾರೆ, ಧರ್ಮಗುರುವಿದ್ದಾನೆ, ಸೇನಾಪತಿಗಳಿದ್ದಾರೆ, ಸೇನೆಯಿದೆ, ಎಲ್ಲ ಇದೆ.

ಅದೊಂದು ದೊಡ್ಡ ಸೈನ್ಯವೇನಲ್ಲ, ಬರೀ ಅರುವತ್ತು ಸೈನಿಕರದು, ಆದರೂ ಅದೊಂದು ಸೈನ್ಯವೇ. ಎಲ್ಲ ಕಡೆಗಳಂತೆ ಅಲ್ಲಿಯೂ ಎಲ್ಲ ವಿಧದ ಕಂದಾಯಗಳೂ ಇವೆ. ಆದರೇನು? ಅವುಗಳಿಂದ ರಾಜನ, ಅರಮನೆಯ, ಸಭಾಸದರ, ಸೈನ್ಯದ ಖರ್ಚು ಹುಟ್ಟುವುದು ಕಷ್ಟವಾಗುತ್ತಿತ್ತು. ಆದರೆ ಅದಕ್ಕೊಂದು ಉಪಾಯ ಸಿಕ್ಕಿತು. ಆ ರಾಜ್ಯದಲ್ಲಿ ಒಂದು ಜುಗಾರಿಯ ಕಣವಿತ್ತು. ಯಾರು ಗೆಲ್ಲಲಿ, ಯಾರು ಸೋಲಲಿ, ಆ ಕಣವಿಟ್ಟವನಿಗೆ ಹಣದ ಒಂದಂಶ ಸಿಕ್ಕಿಯೇ ಸಿಕ್ಕುತ್ತದೆ - ಆದರಿಂದ ಅವನು ರಾಜನಿಗೆ ಕರದ ರೂಪದಲ್ಲಿ ತುಂಬಾ ಹಣ ಕೊಡುತ್ತಿದ್ದ. ಈ ಲಾಭದಿಂದ ನಡೆಯುತ್ತಿತ್ತು ರಾಜನ ಸಂಸಾರ. ಇಡೀ ಯುರೋಪಿನಲ್ಲಿ ಅಂಥ ಸಾರ್ವಜನಿಕ ಜುಗಾರಿ ಕಣವು ಒಂದೇ ಇದ್ದದ್ದರಿಂದ ರಾಜನಿಗೆ ಅದರಿಂದ ಅಷ್ಟು ಲಾಭ ದೊರೆಯುತ್ತಿತ್ತು.

ಆದ್ದರಿಂದ ಯಾರ್ಯಾರಿಗೆ ಜುಗಾರಾಡಬೇಕೋ ಅವರೆಲ್ಲ ಮನಾಕೋವಿಗೇ ಹೋಗಬೇಕು. ರಾಜನಿಗೇನೋ ಗೊತ್ತಿತ್ತು– ಹೀಗೆ ಜುಗಾರಿನ ಮೇಲೆ, ಹೆಂಡದ ಮೇಲೆ, ತಂಬಾಕಿನ ಮೇಲೆ ಕಂದಾಯ ವಸೂಲು ಮಾಡುವುದು ಸರಿಯಲ್ಲ, ಎಂತ. ಆದರೆ ಪಾಪ, ಏನು ಮಾಡಿಯಾನು ಆತ? ಅವನೂ ಬದುಕಬೇಕಲ್ಲ?

ಕೆಲವು ವರ್ಷಗಳ ಕೆಳಗೆ ಅಲ್ಲೊಂದು ಖೂನಿ ನಡೆದುಹೋಯಿತು. ರಾಜ್ಯದ ಪ್ರಜೆಗಳೆಲ್ಲ ಶಾಂತಿಪ್ರಿಯರಾಗಿದ್ದರು, ಅದರಿಂದ ಅಲ್ಲಿ ಈ ವರೆಗೆ ಅಂಥ ಅಕೃತ್ಯ ನಡೆದದ್ದಿಲ್ಲ. ಸರಿ, ಖೂನಿಗಾರ ಹಿಡಿಯಲ್ಪಟ್ಟ, ನ್ಯಾಯಾಧಿಪತಿಗಳು ಸೇರಿದರು, ವಕೀಲರು ಬಂದರು, ಎಲ್ಲರೂ ಸೇರಿ ವಿಚಾರಿಸಿ, ಚರ್ಚಿಸಿ, ಕೊನೆಗೆ ಆತನ ತಲೆ ಕಡಿದುಬಿಡಬೇಕೆಂದು ತೀರ್ಪು ಕೊಟ್ಟರು. ಆಯಿತು, ಆ ಮೇಲೆ ಅವರು ತಮ್ಮ ತೀರ್ಪನ್ನು ರಾಜನ ಮುಂದಿಟ್ಟರು. ರಾಜನೂ ತನ್ನ ಒಪ್ಪಿಗೆಯನ್ನಿತ್ತ. ‘ಈ ಮನುಷ್ಯನ ಶಿರಚ್ಛೇದ ಮಾಡಬೇಕೆಂದೇ ಆದರೆ, ಹಾಗೇ ಆಗಲಿ!’

ಆದರೆ ಈ ವಿಚಾರದಲ್ಲಿ ಒಂದೇ ತೊಂದರೆ. ಆ ರಾಜ್ಯದಲ್ಲಿ ತಲೆ ಕಡಿಯುವ ಯಾವ ಸಾಧನವೂ ಇರಲಿಲ್ಲ. ಮಂತ್ರಿಗಳು ಈ ವಿಷಯ ಆಲೋಚಿಸಿ ಫ್ರಾನ್ಸಿನ ಸರಕಾರಕ್ಕೆ ಒಂದು ಮನವಿ ಮಾಡಿದರು. ಒಬ್ಬ ಕೊಲೆಗಡಕನ ತಲೆ ಕಡಿದು ಕೊಡಬೇಕಾದರೆ ನಿಮಗೇನು ಕೊಡಬೇಕು?

ಫ್ರೆಂಚ್ ಸರಕಾರದಿಂದ ಉತ್ತರ ಬಂತು ‘‘ಹದಿನಾರು ಸಾವಿರ ಫ್ರಾಂಕ್ ಖರ್ಚು ಬೀಳುತ್ತದೆ’’ಂದು! ರಾಜನ ಎದೆ ಹಾರಿತು! ‘‘ಏನು? ಹದಿನಾರು ಸಾವಿರ! ಆ ದುಷ್ಟನಿಗೆ ಅಷ್ಟು ಬೆಲೆಯೇ? ಇದಕ್ಕಿಂತ ಅಗ್ಗದಲ್ಲಿ ಕೆಲಸ ಸಾಗದೆ? ಹದಿನಾರು ಸಾವಿರ ಫ್ರಾಂಕೆಂದರೆ ನನ್ನ ಪ್ರಜೆಗಳಲ್ಲಿ ತಲಾ ಒಂದರ ಎರಡೆರಡು ಫ್ರಾಂಕಿನಿಂದಲೂ ಹೆಚ್ಚಾಯಿತು. ಜನರು ಕೇಳಿದರೆ ದಂಗೆಯೆದ್ದಾರು!’’

ಇಟಲಿಯ ರಾಜನಿಗೆ ಬರೆದು ನೋಡಬೇಕೆಂದಾಯಿತು. ಬರೆದೂ ನೋಡಿದರು. ಅವನು ೧೨ ಸಾವಿರ ಫ್ರಾಂಕ್ ಬೇಡಿದನು. ಇನ್ನೇನು ಮಾಡೋಣ?

ಸರಿ, ಪುನಃ ಸಭಾಸದರು ಸೇರಿದರು, ಮಂತ್ರಿಗಳು ವಿಚಾರಿಸಿದರು. ನಮ್ಮ ಸೈನಿಕರ ಪೈಕಿ ಯಾರಾದರೂ ಈ ಕೆಲಸ ಮಾಡಲಾರರೆ? ಸೇನಾಪತಿಯನ್ನು ಕರೆಸಿದರು. ಕೇಳಿದರು; ಸೈನಿಕರೆಲ್ಲ ತಲೆ ಅಲ್ಲಾಡಿಸಿದರು- ‘‘ಏನು? ನಾವು ಯುದ್ಧದಲ್ಲಿ ಒಬ್ಬನನ್ನು ಕೊಂದೇವು. ಹೀಗೆ ತಲೆ ಕಡಿಯಲು ನಾವೇನು—?’’

ಏನು ಮಾಡಬೇಕು? ಮಂತ್ರಿಗಳು ಆಲೋಚಿಸಿದರು, ಪುನರಾಲೋಚಿಸಿದರು. ಸಮಿತಿ ಉಪಸಮಿತಿಗಳನ್ನು ನಿಯಮಿಸಲಾಯಿತು. ಕೊನೆಗೆ ನಿರ್ಣಯವಾಯಿತು- "ಮರಣ ದಂಡನೆಯನ್ನು ರದ್ದುಪಡಿಸಿ ಆಜೀವ ಕಾಗೃಹವಾಸದ ಶಿಕ್ಷೆ ಕೊಡಬೇಕೆ"ಂದು! ಕರುಣೆ ತೋರಿಸಿದಂತೂ ಆಯಿತು; ಅಗ್ಗದಲ್ಲಿಯೂ ಕೆಲಸ ನಡೆಯಿತು. ರಾಜ ಇದಕ್ಕೊಪ್ಪಿದ; ಎಲ್ಲ ಸಲಕರಣೆಗಳನ್ನು ಮಾಡಲಾಯಿತು. ಈಗ ಇನ್ನೊಂದು ತೊಂದರೆ ತಲೆದೋರಿತು. ಈ ರಾಜ್ಯದಲ್ಲಿ ಭದ್ರವಾದ ಜೈಲೇ ಇದ್ದಿಲ್ಲ ಕಡೆಗೆ ಒಂದು ಮನೆಯನ್ನು ಬಾಡಿಗೆಗೆ ಪಡೆದು ಕೈದಿಯನ್ನು ಆದರಲ್ಲಿ ಹಾಕಿ ಒಬ್ಬ ಕಾವಲುಗಾರನನ್ನು ನೇಮಿಸಲಾಯಿತು. ಆ ಕಾವಲುಗಾರನಿಗೆ ಇನ್ನೊಂದು ಕೆಲಸವಿತ್ತು. ಅವನು ಕೈದಿಗಾಗಿ ಅರಮನೆಯಿಂದಲೂಟವನ್ನೂ ತರಬೇಕಿತ್ತು.

ತಿಂಗಳ ಮೇಲೆ ತಿಂಗಳು ಕಳೆದು ಒಂದು ವರ್ಷ ಸಂದು ಹೋಯಿತು. ವರ್ಷಾಂತ್ಯದಲ್ಲಿ ಆ ಪುಟ್ಟ ರಾಜನು ತನ್ನ ಲೆಕ್ಕಪತ್ರಗಳನ್ನು ಪರಿಶೋಧಿಸುವಾಗ ಒಂದು ದೊಡ್ಡ ಖರ್ಚಿನ ಐಟಂ ಕಣ್ಣಿಗೆ ಬಿತ್ತು. ಅದು ಈ ಕೈದಿಯ ಖರ್ಚು- ೬೦೦ ಫ್ರೇಂಕುಗಳಿಗೂ ಮೀರಿತ್ತು ಆ ಖರ್ಚು. ಎಲ್ಲಕ್ಕಿಂತ ಹೆಚ್ಚಿನ ವಿಚಾರವೆಂದರೆ ಆ ನೀಚನು ಇನ್ನೂ ಯುವಕನಾಗಿದ್ದ. ಹೀಗೇ ಎಷ್ಟು ವರ್ಷ ಅವನ ಖರ್ಚನ್ನು ರಾಜನೇ ನೋಡಿಕೊಳ್ಳಬಹುದು?

ಪುನಃ ಮಂತ್ರಿಗಳೊಡನೆ ಪರ್ಯಾಲೋಚನೆಯಾಯಿತು. ಒಬ್ಬ ಮಂತ್ರಿ ಹೇಳಿದ- "ನನ್ನ ಅಭಿಪ್ರಾಯದಲ್ಲಿ ಕಾವಲುಗಾರನನ್ನು ತೆಗೆದು ಹಾಕುವುದೇ ಉಪಾಯ." "ಹಾಗಾದರೆ ಅವನು ಓಡಿಹೋಗುವುದಿಲ್ಲವೇ?" ಇನ್ನೊಬ್ಬನ ತರ್ಕ. "ಓಡಿಹೋದಾನಲ್ಲ? ಅವನನ್ನಿಟ್ಟುಕೊಂಡು ನಮಗೇನಾಗಬೇಕಾಗಿದೆ?" ರಾಜನಿಗೆ ಈ ನಿರ್ಣಯವನ್ನು ತಿಳಿಸಲಾಯಿತು. ಅವನೂ ಒಪ್ಪಿಕೊಂಡ. ಕಾವಲುಗಾರನನ್ನು ತೆಗೆದುಹಾಕಿ, ಮುಂದೇನಾಗುವುದೆಂಬುದನ್ನು ನಿರೀಕ್ಷಿಸತೊಡಗಿದರು. ಆದದ್ದೇನೆಂದರೆ, ಮಧ್ಯಾಹ್ನ ಮತ್ತು ಸಾಯಂಕಾಲ ಊಟದ ವೇಳೆಗೆ ಕೈದಿಯು ತಾನೇ ರಾಜನ ಅರಮನೆಗೆ ಹೋಗಿ ಊಟವನ್ನು ತಂದು ಉಣ್ಣತೊಡಗಿದ. ಉಳಿದ ಸಮಯದಲ್ಲಿ ಬಾಗಿಲುಹಾಕಿಕೊಂಡು ತನ್ನ ಜೈಲಿನಲ್ಲಿರತೊಡಗಿದ. ಮರುದಿನವೂ ಹಾಗೇ ಆಯಿತು. ಸಮಯ ತಪ್ಪದೆ ಊಟಕ್ಕೆ ಹೋಗುತ್ತಿದ್ದ; ಆದರೆ ಓಡಿಹೋಗುವ ವಿಚಾರವಂತೂ ಅವನೇನೂ ಯೋಚಿಸುವಂತೆ ಕಾಣಲಿಲ್ಲ. ಏನು ಮಾಡುವುದಪ್ಪಾ ಇನ್ನು?

**ಓಡಿಹೋಗಲೊಲ್ಲದ ಕೊಲೆಗಾರ!**



ಮೊತ್ತಮೊದಲು ನನಗೆ ನೀವು ಮರಣ ದಂಡನೆ ವಿಧಿಸಿದ ಮೇಲೆ ಕೊಲ್ಲಲೇ ಬೇಕಿತ್ತು. ನೀವು ಹಾಗೆ ಮಾಡಲಿಲ್ಲ, ಅದೊಂದು ವಿಚಾರ. ಆ ವೇಳೆ ನೀವು ನನಗೆ ಆಜನ್ಮ ಸಜೆ ವಿಧಿಸಿ ನನಗೆ ಅನ್ನ ತರುವುದಕ್ಕೆ ಒಬ್ಬ ಕಾವಲನ್ನು ನಿಯಮಿಸಿದಿರಿ. ಆ ಮೇಲೆ ಅವನನ್ನೂ ತೆಗೆದುಹಾಕಿ ನಾನೇ ಅನ್ನ ತಂದುಕೊಳ್ಳುವ ಹಾಗೆ ಮಾಡಿದಿರಿ. ಆದರೂ ನಾನು ಮಾತಾಡಲಿಲ್ಲ. ಈಗ ನನ್ನನ್ನು ಹೋಗೆನ್ನುತ್ತೀರಿ, ಅದು ಸಾಧ್ಯವಿಲ್ಲ. ನಿಮಗೆ ಇಷ್ಟವಿದ್ದಂತೆ ಮಾಡಿರಿ. ನಾನಂತೂ ಓಡಿ-ಹೋಗಲಾರೆ!

ಅವನನ್ನಿರಿಸಿಕೊಳ್ಳಲು ರಾಜನಿಗಿಷ್ಟವಿಲ್ಲವೆಂದು ಸೀದಾ ಹೇಳುವುದೊಳ್ಳೆಯದೆಂದು ನ್ಯಾಯ ಮಂತ್ರಿಯ ಮುಂದೆ ಅವನನ್ನು ತಂದು ನಿಲ್ಲಿಸಲಾಯಿತು.

"ನೀನು ಯಾಕೆ ಓಡಿಹೋಗುವುದಿಲ್ಲ? ನಿನ್ನನ್ನು ಕಾಯಲು ಯಾರೂ ಇಲ್ಲ. ನೀನು ಹೋದರೆ ರಾಜನಿಗೇನೂ ಸಿಟ್ಟು ಬರಲಿಕ್ಕಿಲ್ಲ."

"ರಾಜನಿಗೇನೆ ಸಿಟ್ಟು ಬರಲಿಕ್ಕಿಲ್ಲ; ನನಗೆ ಗೊತ್ತಿದೆ. ಆದರೆ ನಾನೆಲ್ಲಿ ಓಡಿಹೋಗಲಿ? ನೀವು ನನಗೆ ಶಿಕ್ಷೆವಿಧಿಸಿ ನನ್ನ ಹೆಸರನ್ನು ಹಾಳು ಮಾಡಿದ್ದೀರಿ. ನನ್ನನ್ನು ಇನ್ನಾರು ಸೇರಿಸಿಕೊಳ್ಳುತ್ತಾರೆ? ಮತ್ತೆ ಇಷ್ಟು ದಿನಗಳ ಅಭ್ಯಾಸದಿಂದ ನನಗೆ ಕೆಲಸ ಮಾಡಲು ಮೈ ಬಗ್ಗುವುದಿಲ್ಲ. ನೀವು ನನ್ನನ್ನು ಬಹಳ ಕೆಟ್ಟರೀತಿಯಿಂದ ನಡೆಸಿಕೊಂಡಿದ್ದೀರಿ. ಮೊತ್ತಮೊದಲು ನನಗೆ ನೀವು ಮರಣ ದಂಡನೆ ವಿಧಿಸಿದ

ಮೇಲೆ ಕೊಲ್ಲಲೇ ಬೇಕಿತ್ತು. ನೀವು ಹಾಗೆ ಮಾಡಲಿಲ್ಲ, ಅದೊಂದು ವಿಚಾರ. ಆ ಮೇಲೆ ನೀವು ನನಗೆ ಆಜನ್ಮ ಸಜೆ ವಿಧಿಸಿ ನನಗೆ ಅನ್ನ ತರುವುದಕ್ಕೆ ಒಬ್ಬ ಕಾವಲನನ್ನು ನಿಯಮಿಸಿದಿರಿ. ಆ ಮೇಲೆ ಅವನನ್ನೂ ತೆಗೆದು ಹಾಕಿ ನಾನೇ ಅನ್ನ ತಂದುಕೊಳ್ಳುವ ಹಾಗೆ ಮಾಡಿದಿರಿ. ಆದರೂ ನಾನು ಮಾತಾಡಲಿಲ್ಲ. ಈಗ ನನ್ನನ್ನು ಹೋಗೆನ್ನುತ್ತೀರಿ, ಅದು ಸಾಧ್ಯವಿಲ್ಲ. ನಿಮಗೆ ಇಷ್ಟವಿದ್ದಂತೆ ಮಾಡಿರಿ. ನಾನಂತೂ ಓಡಿಹೋಗಲಾರೆ!"

ಮಂತ್ರಿಗಳು ಚಿಂತಿಸಿ ಚಿಂತಿಸಿ ಒಂದು ನಿರ್ಧಾರಕ್ಕೆ ಬಂದರು. ಅವನಿಗೆ ವರ್ಷವೊಂದರ ೬೦೦ ಫ್ರೇಂಕುಗಳ ಪೆನ್ಶನ್ ಕೊಡುವುದೆಂದು. ಕೈದಿಗೆ ಇದನ್ನು ತಿಳಿಸಲಾಯಿತು. "ಆಗಲಿ, ಚಿಂತೆಯಿಲ್ಲ, ಮಾತ್ರ ನೀವು ನಿಯಮಿತ ಸಮಯದಲ್ಲಿ ಪೆನ್ಶನನ್ನು ತಲಪಿಸಬೇಕು. ಆ ಶರ್ತದ ಮೇಲೆ ನಾನು ಹೊರಟುಹೋಗಲು ಸಿದ್ಧಸಿದ್ದೇನೆ."


ಹೀಗೆ ನಿಶ್ಚಿತವಾಯಿತು! ಈ ವರ್ಷಾಶನದ ಮೂರನೆ ಒಂದಂಶವನ್ನು ಮುಂಗಡವಾಗಿ ಪಡೆದು ಆ ಕೈದಿಯು ರಾಜ್ಯವನ್ನು ಬಿಟ್ಟು ಹೊರಗೆ ಹೋದ. ಅಲ್ಲಿ ತೋಟವನ್ನು ಬೆಳೆಸಿ ಈಗ ಸುಖವಾಗಿ ಜೀವನ ಮಾಡುತ್ತಿದ್ದಾನೆ. ಸಮಯ ತಪ್ಪದೆ ತನ್ನ ವರ್ಷಾಶನವನ್ನು ಪಡೆಯಲಿಕ್ಕೆ ಹೋಗುತ್ತಾನೆ.

**Rs. 75** WILL PAY YOU AFTER 5 YEARS **Rs. 100**

**Industrial Cash Certificates**

*For full particulars apply to:—*

**SUPPLY AGENCY LIMITED, UDIPI.**



For Everything Electrical

CONSULT

**The Modern Engineering Works.**

*Head Office:* MANGALORE.

SATISFACTION GUARANTEED

*Branch:* UDIPI.

Stockists of Electrical Accessories & Domestic Appliances
Suppliers of all kinds of Machinery for Industrial purposes

*THE PREMIER HOUSE FOR ELECTRICAL REPAIRS* & *THE TRUE SERVICE FOR EVERY CUSTOMER.*

IT PAYS TO

*CONSULT US BEFORE GOING ANYWHERE.*

**Installation of Pumping sets Motors, Rewinding armatures, and all kinds of Electrical & Mechanical Repairs a Speciality.**

## ಅವಸರವಿಲ್ಲ!

ಭಾಷಾವಾರು ಪ್ರಾಂತ್ಯರಚನೆಯು ಅಷ್ಟೊಂದು ಅವಸರದ ಪ್ರಶ್ನೆಯಲ್ಲ. ಅದನ್ನು ಮುಂದರಿಸಬಹುದು—ಎಂದು ಆಂಧ್ರ, ಕರ್ನಾಟಕ, ಕೇರಳ ಡೆಪ್ಯುಟೇಶನಿನವರಿಗೆ ಕಾಂಗ್ರೆಸ್ ಧುರೀಣರು ಹೇಳಿದರಂತೆ.

ಅದೇನಷ್ಟು ಅವಸರ' ಏಕೀಕರಣಕ್ಕಾಗಿ ದುಡಿದವರಿಗೆ ಕೊಂಚ ವಿಶ್ರಾಂತಿ ದೊರಕಿದಂತಾಯಿತು!

೦೦೦

## ಬಿಹಾರ್—ಬಂಗಾಳಿ

ಬಂಗಾಳಿ ಭಾಷೆಯಾಡುವ ಸ್ಥಳಗಳೆಲ್ಲಾ ಬಂಗಾಳಕ್ಕೆ ಸೇರಬೇಕೆಂದು ಬಂಗಾಳಿಗಳ ವಾದ. 'ಥ ಅದಾಗುವಂತಿಲ್ಲ. ಸುಮ್ಮನಿರಿ' ಎಂದು ಬಿಹಾರಿಗಳ ವಾದ. ಒಟ್ಟಾರೆ ಮೇಲೆ ಈ ಪ್ರಶ್ನೆಯ ತೀರ್ಮಾನಮಾಡಲು ಆರಿಸಲ್ಪಟ್ಟ ರಾಜೇಂದ್ರ ಬಾಬುಗಳಿಗೆ ಅಸ್ವಸ್ಥವಾದರೂ ಮತ್ತಷ್ಟೂ ತೊಂದರೆ.

೦೦೦

## ಮದರಾಸಿನ ಟಂಕಸಾಲೆಯಿಂದ

"ಯಾರೋ ಇತರರು ಮೇರೆ ಮೀರಿದಾಗ ಪೋಲೀಸರೂ ಮೇರೆ ಮೀರಿ ಹೋಗಬೇಕಾಯಿತು". ಇದನ್ನು ಸರ್ ಸಿಕಂದರ್ ಹಯಾತ್‌ಖಾನರು ಪಂಜಾಬ್ ಎಸೆಂಬ್ಲಿಯಲ್ಲಿ ಹೇಳಿ ಕಾಂಗ್ರೆಸ್ ಪ್ರಾಂತ್ಯದಲ್ಲಿ ಕೂಡಾ ಹೀಗಾಗುತ್ತದೆಂದರು. ಮೊನ್ನೆ ಮದರಾಸಿನ ಟಂಕಸಾಲೆಯಲ್ಲಿ ತಯಾರಾದ ಈ ಪ್ರಯೋಗವನ್ನು ಸರ್ ಸಿಕಂದರರು ಸಿಮ್ಲಾದಲ್ಲಿ ಹೇಳಬೇಕೆ! ಪಂಜಾಬಿನಲ್ಲಿ ಪೋಲೀಸರು ಮಿತಿ ಮೀರಿ ಹೋದುದು ಜಾಲಿಯನ್ ವಾಲಾಬಾಗಿನಲ್ಲಿ. (ಜಾಲಿಯನ್‌ವಾಲಾ ಬಾಗಿನಲ್ಲಿ ಮೊದಲಿನಂತೆ ಮೆಶಿನ್ ಗನ್ನಲ್ಲ, ಲಾಠಿ!)

೦೦೦

## ಐ. ಸಿ. ಯಸ್

ಭಾರತೀಯ ಐ. ಸಿ. ಯಸ್ ಅಧಿಕಾರರು ರಾಜಿ ಕೊಡದಂತೆ ಯತ್ನಿಸದಿದ್ದರೆ ಬ್ರಿಟಿಷರ ಗುಟ್ಟೆಲ್ಲಾ ರಟ್ಟಾಗುತ್ತದೆ. ಇತ್ತೀಚೆಗೆ ರಾಜಿನಾಮೆಯಿತ್ತ ಶ್ರೀ. ಹುಂಡಿ ವಿಷ್ಣು ಕಾಮತರು ಹಲವು ಕತೆಗಳನ್ನು ಹೇಳಿದ್ದಾರೆ. ಒಬ್ಬ ಯುರೋಪಿಯನ್ ಅಧಿಕಾರಿಗಳು ಮಾಲಕರಿಲ್ಲದ ನಜರತ್ತನ್ನು (ಬೆಳ್ಳಿಯ ಆಭರಣ) ಸ್ವಂತಕ್ಕಾಗಿ ಉಪಯೋಗಿಸಿಕೊಂಡರಂತೆ. ಇಂತಹ ಕಥೆಗಳನ್ನೂ ಹೇಳುವುದೇ?

# ವಿನೋದಮಯ-ರಾಜತಂತ್ರ.

## ಜಪಾನಿಗೆ ತೆರಳುವರು!

ಜಪಾನಿಗೆ ತಿಳಿದಿರಲಿ, ಎಚ್ಚರಿಕೆ. ಮಿ| ಎಚ್. ಎ. ಜಿನ್ನರು ಚೀನಕ್ಕೆ ಒಂದು ಶಿಷ್ಟಮಂಡಲವನ್ನು ಕೊಂಡೊಯ್ಯುವರೆಂದು ನಾನು ಪತ್ರಿಕೆಗಳಲ್ಲೋದಿದೆ. ಜಿನ್ನರು ಚೀನಕ್ಕೆ ತಲಪುವುದೇ ತಡ, ಕೆಲಸಕ್ಕೆ ಆರಂಭಿಸುತ್ತಾರೆ. ಒಂದೊಂದೇ ಶರ್ತ (ಫ್ರೊಂಟ್)ಗಳು ಜಪಾನಿನವರ ಮುಂದೆ ಹೊರ ಬರಲಾರಂಭಿಸುವವು ಭಾರತದಲ್ಲಿ ಹಿಂದುಗಳ 'ಅನ್ಯಾಯ'ದಿಂದ ಮುಸ್ಲಿಮರನ್ನು ರಕ್ಷಿಸಲು ೧೪ ಶರ್ತಗಳನ್ನು ಹೊರತಂದವರವರು. ಚೀನದಲ್ಲಿ ನೂರಾರು ಫ್ರೊಂಟುಗಳನ್ನು ಒಮ್ಮೆಯೇ ಹೊರತಂದುಬಿಡಬಹುದು. ಪಾಪ, ಜಪಾನಿನವರ ಪಾಡು ಏನಾಗಬಹುದೋ?

೦೦೦

## ಘಟನೆಯ ನಿರ್ಮಾಮ

ಎಸೆಂಬ್ಲಿಗಳಲ್ಲಿರುವ ಕಾಂಗ್ರೆಸ್ ಪಕ್ಷದ ವ್ಯಕ್ತಿಗಳು ಕಾಂಗ್ರೆಸ್ ಮನೋವೃತ್ತಿಯವರಾಗಿರಬೇಕೆಂದು ಗಾಂಧಿಜಿಯವರು ಇತ್ತೀಚೆಗೆ ಸ್ಪಷ್ಟವಾಗಿ ಹೇಳಿದ್ದಾರೆ. ನವರಾಜ್ಯ ಘಟನೆಯನ್ನು ಮುರಿಯುವ ಪ್ರಶ್ನೆಯು ಗಾಂಧಿಜಿಯವರಿಗೆ ಮಾತ್ರ ನೆನಪಿದೆ, ಇತರರಿಗೆ ಪ್ರಾಯಶಃ ಪೂರ್ಣ ಮರೆತುಹೋಗಿರಬೇಕು.

೦೦೦

## ವಿಠಲಭಾಯಿಗಳ ವೀಲು!

ದಿವಂಗತ ವಿಠಲಭಾಯಿಯವರು ವಿದೇಶಗಳಲ್ಲಿ ಕಾಂಗ್ರೆಸ್ ಪ್ರಚಾರಕ್ಕಾಗಿ ಹಣವನ್ನು ವೀಲುಮಾಡಿಕೊಟ್ಟರಂತೆ. ವಲ್ಲಭಾಯಿಯವರು ಆ ಹಣವನ್ನು ಹರಿಜನ ಫಂಡಿಗೆ ಕೊಡಲಿದ್ದಾರಂತೆ. ಈ ಗಡಿಬಿಡಿಯನ್ನು ನಿಲ್ಲಿಸಲು ಗಾಂಧಿಜಿಯವರು ತಮ್ಮ ಅಭಿಪ್ರಾಯವನ್ನು ಕೊಟ್ಟರಾಗುತ್ತಿತ್ತೆಂದು ಹಲವರಭಿಪ್ರಾಯ: ಆದರೆ—ಎಂಬುದೊಂದೇ ಪ್ರಶ್ನೆ.

೦೦೦

## ಹುಳಿದ್ರಾಕ್ಷೆ

ಪ್ರಾಂತಿಕ ಸ್ವಾಯತ್ತೆಯನ್ನು ಪೂರ್ಣವಾಗಿ ಕಲಿತು ಸರ್ ಎ. ಪಿ. ಪತ್ರೋರವರು ಅದು ಪ್ರಯೋಜನವಿಲ್ಲವೆಂದು ಹೇಳಿದ್ದಾರೆ. ವೈಯಕ್ತಿಕ ಪ್ರಾತಿನಿಧ್ಯವಿರಬೇಕೆಂದು ಅವರ ವಾದ. ಅವರೇ ಅವರ ಪ್ರತಿನಿಧಿಗಳು! ಇದು "ದ್ರಾಕ್ಷೆ ಹುಳಿಯೆಂಬ ಕಥೆಯೋ ಅಥವಾ ಪ್ರಜಾಸತ್ತೆಯೆಂದರೆ ಏನೆಂದು ಪತ್ರೋರವರಿಗೆ ತಿಳಿಯದಿರುವುದೊ—ಎಂಬುದು ಮಾತ್ರ ತಿಳಿದಿಲ್ಲ.

೦೦೦

## ಹಾರೂನರ ಸೂಚನೆ

ಮುಸ್ಲಿಮ್ ರಾಷ್ಟ್ರಗಳಲ್ಲಿ ಕಾಂಗ್ರೆಸ್ ಧುರೀಣರು—ಭಾರತದ ಮುಸ್ಲಿಮರು ರಾಷ್ಟ್ರೀಯ ಮನೋವೃತ್ತಿಯವರಲ್ಲವೆಂಬ ಅಭಿಪ್ರಾಯವನ್ನುಂಟುಮಾಡಿರುವುದರಿಂದ ಅದನ್ನು ಬದಲಾಯಿಸುವಂತೆ ಮಾಡಲು ಒಂದು ಡೆಪ್ಯುಟೇಶನ್ ಹೊರಡಬೇಕೆಂದು ಕರಾಚಿಯ ಸರ್ ಅಬ್ದುಲ್ಲಾ ಹಾರೂನರು ಸೂಚಿಸಿದ್ದಾರೆ.

ಇದಕ್ಕೆ ಹಾರೂನರೇ ಧುರೀಣರಾಗಬೇಕೆಂದು ನನ್ನ ಸೂಚನೆ.

೦೦೦

## ಹಕ್ಕರ ಮೊರೆ

ಕಾಂಗ್ರೆಸಿನವರು ಬಂಗಾಳದಲ್ಲಿ ಉಪದ್ರವಿಸುತ್ತಿದ್ದಾರೆ—ಕಾಯಬೇಕು—ಎಂದು ಬಂಗಾಳದ ಈಗಿನ ಪ್ರಧಾನ ಮಂತ್ರಿಗಳಾದ ಫಜ್ಲುಲ್ ಹಕ್ಕರು ಗಾಂಧಿಜಿಯವರೊಡನೆ ಮೊರೆಯಿಟ್ಟಿದ್ದಾರೆ.

ಎಂಥ ಅನ್ಯಾಯ! ಹಕ್ಕರು ಗವರ್ನರರು ಹೇಳಿದಂತೆ ಕುಣಿಯುವಾಗ ಹೀಗೆ ಉಪದ್ರವಿಸುವುದೇ?

೦೦೦

## ನೀಲಗಿರಿ ಸತ್ಯಾಗ್ರಹ

ಒರಿಸ್ಸದ ಸಮೀಪದಲ್ಲಿರುವ ನೀಲಗಿರಿ ಸಂಸ್ಥಾನದ ಪ್ರಜೆಗಳು ಸತ್ಯಾಗ್ರಹ ನಿಲ್ಲಿಸಿದರಂತೆ. ಪ್ರಜಾಮಂಡಲದ ಮೂಲಕ ಪ್ರಜೆಗಳ ಕಷ್ಟವನ್ನು ಕೇಳಿ ನಿವಾರಣಾ ಯತ್ನ ಮಾಡುವೆನೆಂದು ರಾಜರು ಆಶ್ವಾಸನೆಯಿತ್ತಿರುವುದೇ ಇದಕ್ಕೆ ಮೂಲ ಕಾರಣ.

ಸತ್ಯಾಗ್ರಹವಿಲ್ಲದೆ ಈಗ ಯಾವ ಸವಲತ್ತನ್ನೂ ಕೊಡುವ ಅಭ್ಯಾಸವಿಲ್ಲವೆಂಬುದು ಸ್ಪಷ್ಟವಾಯಿತು. ಮುಂದೆ ಅರ್ಜಿಗಳನ್ನು ಕೊಡುವ ಬದಲು ಸತ್ಯಾಗ್ರಹ ಮಾಡುವುದೇ ಉತ್ತಮ.

೦೦೦

## ಮಿರಾಜಿನಲ್ಲೂ ಸುಧಾರಣೆ

ಮಿರಾಜ್ ಸಂಸ್ಥಾನದ ರಾಜರೂ ಪ್ರಜಾಮಂಡಲಿಗೆ ಚುನಾಯಿತ ಸದಸ್ಯರನ್ನು ಸೇರಿಸಿಕೊಳ್ಳುವಂತಾಯಿತು. ಮುಂದೆ ಸಂಸ್ಥಾನದ ಎಸೆಂಬ್ಲಿಯಲ್ಲಿ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಸದಸ್ಯರು ಹತ್ತು ಮಂದಿ, ನೊಮಿನೇಟ್ ಮಾಡಲ್ಪಟ್ಟವರು ಎಂಟು ಮಂದಿ. ಈ ಒಪ್ಪಂದವಾಗಲು ಕೂಡಾ ಜನರು ಸತ್ಯಾಗ್ರಹ ಮಾಡಬೇಕಾಯಿತು. ಇದು ಸತ್ಯಾಗ್ರಹದ ದುರಾಗ್ರಹ ಯುಗ!

೦೦೦

## ವಜೀರಸ್ಥಾನದಲ್ಲಿ!

ವಜೀರಸ್ತಾನದಲ್ಲಿ ನಡೆಯುವ ಯುದ್ಧವು ಇನ್ನೂ ನಿಲ್ಲಲಿಲ್ಲ. ಬ್ರಿಟಿಷರ ಸೈನ್ಯವು ಅಲ್ಲಿಯ ನಿವಾಸಿಕರ ಉಪದ್ರವವನ್ನು ಸಹಿಸದೆ ಗುಂಡೆಸೆಯುತ್ತಿದೆ. ಶಾಂತಸ್ವಭಾವದ ಸೈನಿಕರಿಗೆ ಪಠಾಣರು ಉಪದ್ರವಿಸುತ್ತಿದ್ದಾರಂತೆ. ಸಾವಿರಗಟ್ಟಲೆ ಹಣ ಖರ್ಚು ಮಾಡಿದರೂ ಇದನ್ನು ನಿಲ್ಲಿಸಲಾಗದ ಸರಕಾರವನ್ನು ಪ್ರಶಂಸಿಸ ಬೇಡವೆ? ವಜೀರಿಗಳು ಅದೇಕೆ ಇವರ ಆಳ್ವಿಕೆಯನ್ನು ವಿರೋಧಿಸುತ್ತಾರೆಂದು ಯಾರಿಗೂ ಅರಿಯದು.

೦೦೦

## ಗಡಿನಾಡಿನಲ್ಲೂ ಬಿಕ್ಕಟ್ಟೇ?

ಸರಹದ್ ಪ್ರಾಂತ್ಯದ ಎಸೆಂಬ್ಲಿಯವರು ಸೂಚಿಸಿದ ದಬ್ಬಾಳಿಕೆ ಕಾನೂನುಗಳ ತಿದ್ದುಪಡಿಯ ಮಸೂದೆಗೆ ಗವರ್ನರರು ತಮ್ಮ ಸಮ್ಮತಿಯನ್ನೀಯದಿದ್ದುದರಿಂದ ಆ ಕುರಿತು ಒಂದು ವರದಿಯನ್ನು ತಯಾರಿಸಲು ಸಮಿತಿಯೊಂದರ ನೇಮಕವಾಗಿದೆ. ಈ ವರದಿಯು ಗವರ್ನರರ ನಿರ್ಣಯವನ್ನು ವಿರೋಧಿಸಿದರೆ ಗಡಿನಾಡಿನಲ್ಲೂ ಬಿಕ್ಕಟ್ಟಾಗುವ ಸಂಭವವಿದೆ.

೦೦೦

## ಎಲ್ಲವೂ ಬೌದ್ಧ ಧರ್ಮಕ್ಕಾಗಿ!

ರಂಗೂನಿನಲ್ಲಿ ಭಾರತೀಯ ಮುಸ್ಲಿಮರೂ ಬೌದ್ಧರೂ ಪ್ರಚಂಡ ಜಾತೀಯ ಕಲಹದ ಸುಂಟರಗಾಳಿಯಲ್ಲಿ ಸಿಲುಕಿದ್ದಾರೆ. ಮಹಮ್ಮದಿಯೊಬ್ಬನು ಬೌದ್ಧ ಧರ್ಮದ ಕುರಿತು ಪುಸ್ತಕ ಬರೆದು ಪ್ರಕಟಿಸಿದ್ದೇ ಇದಕ್ಕೆ ಕಾರಣವಂತೆ. ಭಗವಾನ್ ಬುದ್ಧನ ಗೌರವ ರಕ್ಷಣೆಗಾಗಿ ಈ ಮಾನವ ಹಿಂಸೆ.



ಮಧ್ಯಪ್ರಾಂತ್ಯದ ಹೊಸ ಮಂತ್ರಿಗಳಾದ
ಶ್ರೀ. ಡಿ. ಕೆ. ಮೆಹಥಾರವರು.
ಡಾ. ಯನ್. ಬಿ. ಖರೆಯವರ ಸೂಚನೆಯಂತೆ ತನ್ನ ಮಂತ್ರಿ ಪದವಿಗೆ ರಾಜಿ ಕೊಡದೆ ವರ್ಕಿಂಗ್ ಕಮಿಟಿಯ ಆಜ್ಞೆಯನ್ನು ನಿರೀಕ್ಷಿಸಿದವರು.

ಈಗಾಗಲೇ ೬೦ ಮಂದಿ ಸತ್ತಿದ್ದಾರೆ. ಸುಮಾರು ೫೦೦ಕ್ಕಿಂತಲೂ ಮಿಕ್ಕಿದ ಜನರು ಗಾಯ ಹೊಂದಿದ್ದಾರೆ.

೦೦೦

## ಮುಂಬಯಿಯ ಹೊಟೆಲುಗಳು!

ಎಲ್ಲಾ ಜನರಿಗೆ ಹೊಟೆಲುಗಳಲ್ಲಿ ಪ್ರವೇಶವಿರಬೇಕೆಂಬ ನಿಯಮದಿಂದಾಗಿ ಮುಂಬಯಿಯಲ್ಲಿ ಹಲವು ಹೊಟೆಲಿನವರು ತಮ್ಮ ವ್ಯಾಪಾರವನ್ನು ನಿಲ್ಲಿಸಿ ಲೈಸೆನ್ಸುಗಳನ್ನು ಹಿಂದೆ ಕೊಡುವುದರಲ್ಲಿದ್ದಾರಂತೆ. ಹರಿಜನರೆಂದರೆ ಇಷ್ಟು ಆದರವೆ?

೦೦೦

## ಶೌಕತಾಲಿಯವರ ಧ್ಯೇಯ!

"ಯಾವ ರಾಜಕೀಯ ಸಂಸ್ಥೆಗೂ ಎಲ್ಲಾ ಮತಗಳ ಪ್ರಾತಿನಿಧ್ಯವನ್ನು ವಹಿಸುವ ಹಕ್ಕಿಲ್ಲ. ಗಡಿನಾಡಿನಲ್ಲಿ ಕಾಂಗ್ರೆಸ್ ಆಳ್ವಿಕೆಯನ್ನು ನಿಲ್ಲಿಸಲು ನಾಸಿಲ್ಲಿಗೆ ಬಂದಿರುತ್ತೇನೆ. ಮುಸ್ಲಿಮರೇ ಬಹುಸಂಖ್ಯಾತರಾಗಿರುವ ಈ ಪ್ರಾಂತ್ಯದಲ್ಲಿ ಮಂತ್ರಿಮಂಡಲವು ಕಾಂಗ್ರೆಸ್ಸಿನಿಂದ ಬರುವ ಆಜ್ಞೆಗಳಿಗೆ ಶಿರಬಾಗುವುದು ಶೋಚನೀಯವಾಗಿದೆ" ಎಂದರು, ಹಿರಿಯಣ್ಣ ಮೌಲಾನಾ ಶೌಕತಾಲಿಯವರು.

ಪಠಾಣರು ಶೌಕತಾಲಿಯವರಿಗೆ ಸ್ವಾಗತವನ್ನೀಯದಿದ್ದರೂ ತನ್ನ ಧ್ಯೇಯವನ್ನು ಮೌಲಾನಾ ಸಾಹೇಬರು ಸ್ಪಷ್ಟಗೊಳಿಸಿರುವುದು ಸಂತೋಷದ ಸಂಗತಿ. ಪ್ರಾಯಶಃ ಈ ಹೇಳಿಕೆಯನ್ನು ಮಾಡುವಾಗ ಅವರು ಅದರ ಹುರುಳೇನೆಂಬುದನ್ನು ಮರೆತಿರಬೇಕು.

೦೦೦

## ವೈಸರಾಯರು ಹಿಂದೆ ಬರುವರೆ?

ಫೆಡರೇಶನ್ ಸಮಸ್ಯೆಯನ್ನು ವೈಸರಾಯರಾದ ಲಾರ್ಡ್ ಲಿನ್ಲಿತ್ಗೋರವರು ಸರಿಯಾಗಿ ಬಿಡಿಸಲೆತ್ನಿಸಲಿಲ್ಲವೆಂಬ ಅಭಿಪ್ರಾಯ ವ್ಯತ್ಯಾಸವು ಲಂಡನಿನ ವೈಟ್ ಹಾಲಿನಲ್ಲುಂಟಾಗಿರುವುದಲ್ಲದೆ ಅವರು ಇಷ್ಟರ ತನಕ ಸಂಸ್ಥಾನಗಳ ರಾಜರನ್ನು ಫೆಡರೇಶನಿಗೆ ಸೇರಿಸದಿರುವುದು ಉಚಿತವಲ್ಲವೆಂಬ ಅಭಿಪ್ರಾಯವನ್ನು ಲಿನ್ಲಿತ್ಗೋರವರಿಗೆ ವ್ಯಕ್ತಪಡಿಸಿರುವರೆಂದು "ಮರಾಠಾ" ಸಾಪ್ತಾಹಿಕದ ಲಂಡನ್ ಪ್ರತಿನಿಧಿಗಳು ಬರೆದಿದ್ದಾರೆ. ಅಲ್ಲದೆ ಅವರ ಬದಲು ಲಾರ್ಡ್ ಲೋಥಿಯಾನ್, ಲಾರ್ಡ್ ಸಾಮ್ಯುವೆಲ್ ಅಥವಾ ಲಾರ್ಡ್ ಟ್ವೀಡ್ಸ್‌ಮಿರ್ ಈ ಮೂವರಲ್ಲೊಬ್ಬರು ವೈಸರಾಯರಾಗಿ ಬರುವರಂತೆ.

೦೦೦

## ದೀರ್ಘ ರಜೆಯೆ?

ವಿಶ್ರಾಂತಿಗೆಂದು ಲಿನ್ಲಿತ್ಗೋ ಪ್ರಭುಗಳು ಯುರೋಪಿಗೆ ತೆರಳಿದರು. ಆದರೆ ಲಂಡನ "ಇಂಡಿಯಾ ಆಫೀಸಿ"ನಲ್ಲಿ ದೊರಕುವ ವಿಶ್ರಾಂತಿಯೆಂದರೆ ಪ್ರಚಂಡ ಚರ್ಚೆ. ಪ್ರಾಯಶಃ ಲಿನ್ಲಿತ್ಗೋ ಪ್ರಭು

ಗಳ ರಜೆಯು ದೀರ್ಘ ರಜೆಯಾಗಿ, ಅವರು ರಾಜಕಾರಣದ ಕಾರ್ಯರಂಗದಿಂದ ದೂರದಲ್ಲಿರುವಂತಾಗಬಹುದೆ?

೦೦೦

**ಎಲ್ಲಿಯ ನೀತಿಯಿದು?**

ಎಲ್ಲರೂ ಏಕಬುದ್ಧಿಯಿಂದ ರಾಷ್ಟ್ರದ ಸೇವೆ ಮಾಡಿದರೆ ಹಿಂದೂ ಮುಸ್ಲಿಮ್ ಐಕ್ಯದ ಪ್ರಶ್ನೆಯನ್ನು ಸುಲಭವಾಗಿ ಬಿಡಿಸಬಹುದೆಂದು ಸರ್ ಅಕ್ಬರ್ ಹೈದರಿಯವರು ಡಾಕ್ಕಾ ವಿಶ್ವವಿದ್ಯಾಲಯದ ಕಾನ್ವಕೇಶನ್ ಭಾಷಣದಲ್ಲಿ ಹೇಳಿದರು.

ಈ ನೀತಿಯು ಯಾವ ರಾಜ್ಯದಿಂದ ಆರಿಸಲ್ಪಟ್ಟಿತೆಂದು ಹೈದರಿಯವರಿಗೇ ಗೊತ್ತು. ಹೈದರಾಬಾದಿನಲ್ಲಿ ಹಿಂದೂ ಮುಸ್ಲಿಮ್ ಐಕ್ಯ ಅಥವಾ ಇನ್ನಾವ ಐಕ್ಯಸಾಧನಾ ಯತ್ನವೂ ಕಾಣಸಿಗುವಂತಿಲ್ಲ. ಭಾಷಣದಲ್ಲಿ ಹೇಳುವುದನ್ನು ಕಾರ್ಯರೂಪಕ್ಕೆ ತರಬೇಕೆಂಬ ನಿಯಮವಿದೆಯೆ?

೦೦೦

**ಪಂಜಾಬಿನ ವಿಚಿತ್ರ ಪ್ರಜಾಸತ್ತೆ!**

ಪಂಜಾಬ್ ಸರಕಾರವು ಪ್ರಜಾಸತ್ತಾತ್ಮಕವಾದುದೆಂದು ಸರ್ ಸಿಕಂದರ್ ಹಯಾತ ಖಾನರು ಇರುಳು ಹಗಲೆನ್ನದೆ ಹೇಳುತ್ತಿದ್ದಾರೆ. ಆದರೆ ಮೊನ್ನೆ ಮೊನ್ನೆ ಅಮೃತಸರದ ಮೆಜಿಸ್ಟ್ರೇಟರು ಅಲ್ಲಿಯ ಕೃಷಿಕರು ಏರ್ಪಡಿಸಿದ ಜಾತಕ್ಕೆ ಕೊಟ್ಟ ಗುಂಡಿನ ಸ್ವಾಗತವನ್ನು ನೋಡುವಾಗ ಅದು ಪ್ರಜಾಪ್ರಭುತ್ವವಲ್ಲ "ಪ್ರಜಾಸದೆಬಡಿತ್ವ"ವೆಂದು ಸ್ಪಷ್ಟವಾಗುತ್ತದೆ.

೦೦೦

**ಸ್ತ್ರೀಯರ ಪ್ರಾಂತ್ಯ!**

ಕೆಲವು ವಾರಗಳ ಹಿಂದೆ ಅಹಮ್ಮದಾಬಾದಿನಲ್ಲಿ ನಡೆದ ಭಾರತ ಯುವತಿ ಸಂಘದಲ್ಲಿ ಒಬ್ಬ ಸ್ತ್ರೀ ಭಾಷಣ ಮಾಡುತ್ತಾ ಪುರುಷರು ಮಹಾ ಮತ್ಸರಿಗಳು, 'ಅಧಿಕಾರ ಲಾಲಸೆಯು ಅವರಲ್ಲಿ ಹೆಚ್ಚಿದೆ, ಆದುದರಿಂದ ಒಂದು ಪ್ರಾಂತ್ಯವನ್ನು ಸ್ತ್ರೀಯರಿಗೇ ಮಾದರಿ ನೋಡುವುದಕ್ಕಾಗಿ ಬಿಟ್ಟುಕೊಡಬೇಕೆ'ಂದಿದ್ದರಷ್ಟೆ. ಅವರು ಹೇಳಿರುವುದಕ್ಕೂ, ಇಂದಿನ ಮಧ್ಯ ಪ್ರಾಂತ್ಯದ ಮಂತ್ರಿ ಮಂಡಲದಲ್ಲಿ ನಡೆಯುತ್ತಿರುವ ನಾಟಕಕ್ಕೂ ಸಾಮ್ಯವಿದೆಯೆಂದು ಸ್ಪಷ್ಟವಾಗುತ್ತದೆ. ಈಗಿನ ಮಂತ್ರಿಮಂಡಲವನ್ನು ತೆಗೆದು ಹಾಕಿ ಮುಂದೆ ಆ ಪ್ರಾಂತ್ಯದಲ್ಲಿ ಸ್ತ್ರೀಯರಿಗೇ ಅಧಿಕಾರ ಕೊಟ್ಟು ಅವರು ಹೇಗೆ ಪ್ರಾಂತಾಡಳಿತೆ ನಡೆಸುವರೆಂಬುದನ್ನು ನೋಡಬಹುದಿತ್ತು. ಅವರಲ್ಲಿ ಮತ್ಸರವು ಎಷ್ಟರ ತನಕ ಕಡಿಮೆಯಾಗಿದೆಯೆಂಬುದನ್ನು ಸ್ಪಷ್ಟೀಕರಿಸಬಹುದಿತ್ತು. ಅವರ ಸೇವಾಶಕ್ತಿ, ರಾಷ್ಟ್ರೀಯತೆ, ಭೀರುತ್ವ, ಅಧಿಕಾರದಲ್ಲಿ ಅನಾಸಕ್ತಿ ಇವೇ ಮೊದಲಾದವುಗಳು ಯಾವ ಪ್ರಮಾಣದಲ್ಲಿವೆಯೆಂಬುದನ್ನು ವಿಶದಗೊಳಿಸಬಹುದಿತ್ತು. ಆದರೆ ಈ ಪ್ರಯೋಗವನ್ನು ಮಾಡಿ ನೋಡಲು ವರ್ಕಿಂಗ್ ಕಮಿಟಿಯು ಬಿಡಬಹುದೋ ಎಂಬ ಸಂಶಯವುತ್ಪನ್ನವಾಗುತ್ತದೆ.

೦೦೦

**ಉಪವಾಸ ಮಾಡಿ ದಪ್ಪ ಬೆಳೆಯಿರಿ!**

ಹೀಗೆಂದೊಡನೆಯೇ ನಗಬೇಕಾಗಿಲ್ಲ. ಹಿಂದೀ ಭಾಷೆಯ ಕಡು ವಿರೋಧಿ ಸ್ವಾಲನ್ ಜಗದೀಶರೆಂಬವರು ಉಪವಾಸ ಮಾಡಿ ದಪ್ಪ ಬೆಳೆದು ತಮ್ಮ ಮಾತೃಭಾಷಾ ಸೇವೆ ಮಾಡಿದರು. ಇದು ಗಣ್ಯ ವೈಜ್ಞಾನಿಕ ಸಂಶೋಧನೆಯಾಗಿದೆ. ಹೊಟ್ಟೆಗನ್ನವಿಲ್ಲದೆ ದಪ್ಪನಾಗಿ ಬೆಳೆಯುವುದಿದ್ದರೆ ಅದೆಷ್ಟೋ ನಿರ್ಗತಿಕರು ಪ್ರಭಾತ ಕಂಪೆನಿಯ ಬುವ್ವಾ ಸಾಹೇಬರಂತೆ ಹೊಟ್ಟೆ ಬೆಳೆಸಿಕೊಂಡಿರಬೇಕಿತ್ತು. ಆದರೆ ಈ ತನಕ ಹಾಗೇನೂ ಆದದ್ದಿಲ್ಲ. ಪ್ರಾಯಶಃ ಈ ಪ್ರಯೋಗದ ಅಂತರಂಗವು ಸ್ವಾಲನ್ ಜಗದೀಶರಿಗೆ ಗೊತ್ತಿರಬೇಕು. ಉಪವಾಸ ಮಾಡುವುದೆಂದರೆ ಯಾವಾಗಲೂ ಅನ್ನಬಿಡಬೇಕಾಗಿಲ್ಲ! ಯಾರೂ ನೋಡದಂತೆ ಮೃಷ್ಟಾನ್ನವುಣ್ಣಬಹುದು! ಹೀಗೆ ಉಂಡು ಇತರರ ಅಜ್ಞಾನಕ್ಕಾಗಿ ನಕ್ಕು ನಕ್ಕು, ಜಗದೀಶರು ದಪ್ಪನಾಗಿರಬಹುದು!

೦೦೦

**ದೇವರಿಗೊಂದು ಸಮಸ್ಯೆ!**

ಇಪ್ಪತ್ತನೆಯ ಶತಮಾನದ ದೇವರಿಗೆ ರಾಜಕಾರಣದ ಚಾಣಾಕ್ಯತೆಯ ದೆಸೆಯಿಂದಾಗಿ ಉಸಿರಾಡುವುದೂ ಕಷ್ಟವಾಗಿ ಪರಿಣಮಿಸಿರಬಹುದು. ಎಲ್ಲರೂ ದೇವರಿಗೇ ಅಧಿಕಾರಕೊಡುತ್ತಿರುವುದಲ್ಲದೆ ಅವರನ್ನು ನುಂಗಿ ನೀರು ಕುಡಿಯಲೂ ಸಿದ್ಧರಾಗಿರುತ್ತಾರೆ. ಮೊನ್ನೆ ಮಧ್ಯಪ್ರಾಂತ್ಯದ ಮಹಾ ಮಾಜಿಗಳೂ ದೇವರನ್ನು ಬಿಡಲಿಲ್ಲ. ಹೇಳಿದರವರು— "ದೇವನೆಂಬವನೊಬ್ಬನಿದ್ದರೆ ಸತ್ಯಕ್ಕೆ ಜಯವಾದೀತು" ಒಂದೆಡೆಯಲ್ಲಿ ಗಾಂಧಿಜಯವರ ಸತ್ಯ - ಮತ್ತೊಂದೆಡೆಯಲ್ಲಿ ಖಾರೆಯವರ ಸತ ಒಟ್ಟಿನ್ನುವಾಗ ಇದು "ದೇವಮಂಥನ"

೦೦೦

**ಜಪಾನಿನ ನಗ್ನ ಸೈನ್ಯ!**

ಮಂಚೂರಿಯದಲ್ಲಿ ಹ್ವಾಂಗಾ ಷಾಹ್ಯೂ ಎಂಬ ಧಾರ್ಮಿಕ ಸನಾ

ತನೀ ಚೀನೀಯರಿದ್ದಾರಂತೆ. ಇವರಿಗೆ ಗುಂಡು, ಬಾಂಬು ಅಥವಾ ಯಾವುದರಿಂದಲೂ ಮರಣವುಂಟಾಗಲಾರದೆಂದು ಒಂದು ವಿಶ್ವಾಸ. ಆದರೆ ನಗ್ನ ಸ್ತ್ರೀಯರನ್ನು ಕಂಡೊಡನೆಯೇ ಈ ದಿವ್ಯ ಶಕ್ತಿಯು ನಾಶವಾಗುವುದೆಂಬುದೇ ಆ ನಂಬುಗೆಯ ಒಂದು ವೈಶಿಷ್ಟ್ಯ.

ಜಪಾನಿಯರಿಗೆ ಈ ರಹಸ್ಯವರಿತಿದ್ದುದರಿಂದ ಅವರು ಗೈಷಾ ಸ್ತ್ರೀಯರ ಒಂದು ನಗ್ನ ಸೈನ್ಯವನ್ನು ಮಾಡಿ ಮಂಚೂರಿಯದ ಈ ವಿಚಿತ್ರ ಸನಾತನಿಗಳೆದುರು ತಮ್ಮ "ಅಪರಾವತಾರ"ವನ್ನು ತೋರಿಸುವ ಏರ್ಪಾಡು ಮಾಡಿದರು. ನಗ್ನ ಸ್ತ್ರೀಯರನ್ನು ಕಂಡೊಡನೆಯೇ ಆ ಸನಾತನಿಗಳು ನಿರಾಶರಾಗಿ ಅವರಿಗೆ ಶರಣುಹೋಗಿ ಜಪಾನಿಯರ ಕೈವಶರಾಗುತ್ತಾರೆ. ಈ ನಗ್ನ ಸೈನ್ಯವು ಇನ್ನೊಂದು ಮಹತ್ವದ ಕೆಲಸವನ್ನು ಮಾಡುತ್ತದೆ. ಮೊರ್ಫಾಯ್ನ್ ಎಂಬ ವಿಷವಸ್ತುವನ್ನು ಚೀನೀಯರಿಗೆ ತಿನಿಸಿ ಅವರನ್ನು ನಾಶಗೊಳಿಸುವುದು ಜಪಾನಿನ ನವರಾಜತಂತ್ರವಿದು.

೦ ೦ ೦

ಫ್ಯಾಸಿಸ್ಟರು ಅನುಕರಿಸುವುದಿಲ್ಲ!

ಪೋಪ್‌ಸಾಹೇಬರು ಸೀನರ್ ಮುಸ್ಸೋಲಿನಿಯರ ಇತ್ತೀಚೆಗಿನ ಯೆಹೂದಿ-ವಿರುದ್ಧ ಚಳವಳವನ್ನು ಖಂಡಿಸಿದ್ದಕ್ಕೆ ಮುಸ್ಸೋಲಿನಿ ಸಾಹೇಬರು ಫ್ಯಾಸಿಸ್ಟ್ 'ತತ್ವಾನುಯಾಯಿಗಳು ಅನುಸರಿಸುವುದೆಂದೇ ಇಲ್ಲ' ಎಂದು ಉತ್ತರವಿತ್ತಿದ್ದಾರೆ. ಅಕ್ಷರಶಃ ಸತ್ಯ. ಮುಸ್ಸೊ ಸಾಹೇಬರು ಹಿಟ್ಲರರನ್ನು ಮೆಚ್ಚಿಸುವುದಕ್ಕಾಗಿ ಯೆಹೂದಿಯರನ್ನು ವಿರೋಧಿಸಲು ತೊಡಗಿದ್ದಲ್ಲದೆ ಅನ್ಯಥಾ ಅಲ್ಲ. ಅವರಿಗೆ ಅದರಲ್ಲಿ ನಂಬುಗೆಯೇ ಇಲ್ಲ. ಹಿಟ್ಲೊ-ಮುಸ್ಸೋಲೀರವರು ಕೂಡಿ ಯುರೋಪಿನಲ್ಲೊಂದು ಬುಗರಿ ಆಟ ಮಾಡಲಾರಂಭಿಸಿದ್ದಾರೆ. ಪೋಪ್ ಸಾಹೇಬರಿಗೆ ಇಷ್ಟೂ ಅರ್ಥವಾಗುವುದಿಲ್ಲವೆ?

---


**ದಿ ಮೊಡರ್ನ್ ಬಿಸಿನೆಸ್ ಬ್ಯೂರೋ, ಉಡುಪಿ, ದ. ಕ.**

ಇದರ ಅರ್ಥಾಣೆ ಸ್ಕೀಮ್ ಪಾಸ್ ಪುಸ್ತಕವನ್ನು ಪ್ರತಿಯೊಬ್ಬರೂ ತಪ್ಪದೆ ಸಂಗ್ರಹಿಸಿರಿ.

☞ ಇಂದಿನ ಆರ್ಥಿಕ ಮುಗ್ಗಟ್ಟಿನಲ್ಲಿ (ಹನಿಗೂಡಿ ಹಳ್ಳವೆಂಬಂತೆ) ದ್ರವ್ಯವನ್ನು ಸಂಗ್ರಹಿಸಲು ಇದರಷ್ಟು ಅನುಕೂಲ ಸಂದರ್ಭವು ಬೇರೊಂದಿಲ್ಲ. ವಿಶೇಷ ಮಾಹಿತಿಗೆ ಬರೆಯಿರಿ ಅಥವಾ ಮುಖತಃ ವಿಚಾರಿಸಿರಿ.

**ದಿ ಮೊಡರ್ನ್ ಬಿಸಿನೆಸ್ ಬ್ಯೂರೋ, ಕಾರ್ ಸ್ಟ್ರೀಟ್, ಉಡುಪಿ, ದ. ಕ.**



☞ **ನಮ್ಮಲ್ಲಿ** ☜

ಚಿನ್ನ ಮುತ್ತು ಬೆಳ್ಳಿಯ ಆಭರಣಗಳ ಈಡಿನ ಮೇಲೆ ಕಡಿಮೆ ದರದ ಬಡ್ಡಿಯಲ್ಲಿ ಸಾಲ ಕೊಡಲಾಗುವುದು. ಅಲ್ಲದೆ ಆರ್ಡರ್ ಕೊಟ್ಟಲ್ಲಿ ಗಿರಾಕಿಗಳ ಮನಸ್ಸಿಗೊಪ್ಪುವ ಅಪ್ ಟು ಡೇಟ್ ಫೇಶನಿನ ಆಭರಣಗಳನ್ನು ಕ್ಲಪ್ತ ಕಾಲದಲ್ಲಿ ನಾಜೂಕಾಗಿ ತಯಾರಿಸಿಕೊಡುವೆವು.

**ಯು. ಕೆ ಗೋವಿಂದ ನಾಯಕ್**

ಸರಾಫ್ ದಿ. ಕೆನರಾ ಬ್ಯಾಂಕಿಂಗ್ ಕೊರ್ಪೋರೇಶನಿನ ಸಮೀಪ ಉಡುಪಿ.



**AMALAKI HAIR OIL ಆಮಲಕೀ ತೈಲ**

ವಿದ್ಯಾರ್ಥಿಗಳಿಗೂ, ಸಕಲ ಸ್ತ್ರೀಪುರುಷರಿಗೂ, ನಿತ್ಯ ಕೇಶಪ್ರಸಾದನಾರ್ಥ ಪುಷ್ಪಗಂಧೋಪೇತ ಉತ್ಕೃಷ್ಟ ಕೇಶವರ್ಧಕ ತೈಲ ಮೆದುಳಿನ ಸ್ವಾಸ್ಥ್ಯಕ್ಕೂ ನೇತ್ರಾರೋಗ್ಯರಕ್ಷಣೆಗೂ, ಕೇಶಕಲಾಪದ ಬೆಳವಣಿಗೆಗೂ, ಸೌಂದರ್ಯ ವರ್ಧನೆಗೂ ಸಹಾಯಕವಾಗಿದೆ. ಈ ತೈಲವನ್ನು ನಿತ್ಯವೂ ಉಪಯೋಗಿಸುತ್ತಿದ್ದರೆ, ಶಾರೀರಿಕ ಹಾಗೂ ಮಾನಸಿಕ ಶ್ರಮೆಯಿಂದ ಪುರುಷರಿಗೂ, ಪ್ರಸವಾನಂತರದಲ್ಲಿ ಸ್ತ್ರೀಯರಿಗೂ ಸಾಮಾನ್ಯವಾಗಿ ಕೇಶಮೂಲಗಳು ನಿಸ್ಸತ್ವಹೊಂದಿ ಕೂದಲುಗಳ ಉದುರುವಿಕೆ, ಅಕಾಲದಲ್ಲಿ ನರೆಯುಂಟಾಗುವಿಕೆ ಇವೇ ಮೊದಲಾದ ದೋಷಗಳು ದೂರವಾಗಿ ಕೇಶಮೂಲಗಳು ದೃಢವಾಗುವುದರಿಂದ ಅಚ್ಚಕಪ್ಪಾದ ಕೂದಲುಗಳು ನಿಬಿಡವಾಗಿ ಬೆಳೆಯುವುದಲ್ಲದೆ ಮೊದಲೇ ನರೆತ ಕೂದಲುಗಳು ಸಹ ಕಪ್ಪಾಗಿ ಮುಖಶ್ರೀಯು ಲಾವಣ್ಯಪೂರ್ಣವಾಗುವುದು. ತಲೆನೋವು, ಸೂರ್ಯಾವರ್ತ ಅಥವಾ ಅರೆತಲೆನೋವು, ನೇತ್ರಜ್ವಾಲೆ, ಮೆದುಳಿನ ಉಷ್ಣತೆ, ತಲೆತಿರುಕ, ದುಃಸ್ವಪ್ನಪೂರ್ಣವಾದ ನಿದ್ರಾಭಂಗ ಮೊದಲಾದ ವಾತ, ಪಿತ್ಥ, ಜನಿತ ಶಿರೋದೋಷಗಳೂ ನಿವೃತ್ತವಾಗಿ ಸುಖವಾದ ನಿದ್ರೆಯು ಹತ್ತುವುದು. ಇಂತಹ ಸುಖನಿದ್ರೆಯಿಂದ ಸ್ಮೃತಿ, ಮೇಧಾ, ಉತ್ಸಾಹ, ವಿಚಾರಶಕ್ತಿ ಮೊದಲಾದ ಮಾನಸಿಕ ಶಕ್ತಿಗಳು ವಿಕಾಸಹೊಂದಿ ಚಿರಾರೋಗ್ಯ ಲಾಭವಾಗುವುದು.

4 ಔನ್ಸಿನ ಸೀಸೆ ಒಂದರ 0—11—0. 2 ಔನ್ಸಿನ ಸೀಸೆ ಒಂದರ 0—6—0

**Swadeshi Oushadhi Bhandara, Kunjal,**
***P. O. BRAHMAVAR, S. India.***

# BEST——CHEAP——AND RELIABLE.

Our 'M' Brand **PURE MUSK**, packed in 1/96th TOLA bottles, price Rs. 4—8—0 per dozen (F. O. R. any station) is a boon to humanity and can be used in all cases of emergency. Highly appreciated and recommended by Doctors, Hakims & Vaids.

Our 'M' Brand **KASTURI PILLS** packed in bottles containing 300 Pills costing annas three (F. O. R. any station) is the best tonic of the day and is highly recommended in cases of impotency, nervous debility and all other diseases of heart weakness.

Our **KRISHANA BRAND HINGOO** packed in 3 tola packets costing 1-14-0 per dozen (F. O. R. any station) is best, fragrant for daily uses. Highly recommended by all who use it.

We also supply best Musk, Saffron, Silver and Gold leaves, Pachakarpur, Goulochin etc. Best Crystal SHILAJIT recommended by all Vaids, Doctors and guaranteed to be pure and best by all who have once used it, packed in beautiful packets of tola one each costing 0—8—0 per bottle F. O. R.

**ALL OTHER MEDICINAL ARTICLES AND JODI BATHIS CAN ALSO BE HAD. ONCE TRIED ALWAYS PATRONISED.**

*PLEASE ORDER ONCE AND OBLIGE.*

## S. D. METHA & CO., *(REGISTERED)*

**Purani Kanak Mandi, AMRITSAR.**

ಪ್ರಭುಪ್ರಜೆಗಳ ಹೋರಾಟ!
ಪೋಲೀಸರ ಅತ್ಯಾಚಾರ!!
ಸ್ವಾತಂತ್ರ್ಯ ಸಂಗ್ರಾಮದ
ಕ್ರಾಂತಿಕಾರಕ ಚಿತ್ರ
ಹೊಸ ನಾಟಕ ಪುಸ್ತಕ

## 'ದೇಶಭಕ್ತ'

ಬೆಲೆ ಆಣೆ ಹತ್ತು
ಪ್ರತಿಯೊಬ್ಬ ಕನ್ನಡಿಗನೂ
ಓದಬೇಕು.


ವಿಚಾರ ಜ್ಯೋತಿಯನ್ನು
ಬೆಳಗಿಸುವ
ಆನಂದ ಲಹರಿಯನ್ನೆಬ್ಬಿಸುವ
ಹೊಸ ಪುಸ್ತಕ

## 'ನಂದಾದೀಪ'

ಕೊರಡ್ಕಲ್ಲರ 11 ಕತೆಗಳ ಸಂಗ್ರಹ
ಕರ್ನಾಟಕದಲ್ಲಿ
ಇಂತಹ ಸಂಗ್ರಹ ತೀರಾ ಕಡಿಮೆ

## ನವಭಾರತ ಬುಕ್ ಡಿಪೊ -- ಉಡುಪಿ.

ನವಯುಗಕ್ಕೆ ಏಜಂಟರು ಇಲ್ಲದ ಸ್ಥಳಗಳಲ್ಲಿ
ಏಜಂಟರು ಬೇಕು.
ನವಯುಗ ಆಫೀಸು, ಉಡುಪಿ.




ಹಿಟ್ಲರ್-ಮುಸ್ಸೋಲಿನಿಯರ ಮೈತ್ರಿಯು ಯುರೋಪಿನ ಎಲ್ಲಾ ರಾಷ್ಟ್ರಗಳನ್ನು ದಿಗಿಲುಗೊಳಿಸಿದೆ. ಸರ್ವಾಧಿಕಾರಿಗಳ ಸುದರ್ಶನವು ಆಸ್ಟ್ರಿಯವನ್ನು ಜರ್ಮನಿಗೆ ಸೇರಿಸಿತು. ಮುಂದೆ ಪೋರ್ಚುಗಲ್ ರಾಷ್ಟ್ರವನ್ನು ಸದ್ದಿಲ್ಲದೆ ಹಿಡಿದು ನುಂಗುವಾಗ ಇತರ ರಾಷ್ಟ್ರಗಳು ಸುದರ್ಶನ ತಿರುಗುವುದನ್ನು ನೋಡುತ್ತಾ ಸುಮ್ಮಗಾಗಲಿವೆ.

[ಚಿತ್ರಕಾರ:- "ತೀರ್ಥ".

# ಜಾಗೃತ ಭಾರತದಲ್ಲಿ

## ಬಂಗಾಳದ ರಾಜಕೀಯ ಉತ್ಪಾತ.

ಬಂಗಾಳದ ರಾಜಕೀಯ ವಾತಾವರಣದಲ್ಲಿ ಪ್ರಚಂಡ ಉತ್ಪಾತಗಳ ಸಂಜ್ಞೆಯು ಎಚ್ಚತ್ತು ಕಾಣುತ್ತಿದೆ. ಈಗಾಗಲೆ ವಿರೋಧಪಕ್ಷದಲ್ಲಿ ಕಾಂಗ್ರೆಸ್, ಕೃಷಿಕ ಪ್ರಜಾಪಕ್ಷ, ಸ್ವತಂತ್ರ ಪ್ರಜಾಪಕ್ಷ; ಸ್ವತಂತ್ರ ಶೆಡ್ಯೂಲ್ಡ್ ಪಂಗಡದವರು ಒಟ್ಟುಗೂಡಿರುವುದರಿಂದ ಸದಸ್ಯರ ಸಂಖ್ಯೆಯು ೧೧೦ಕ್ಕಿಂತಲೂ ಮಿಕ್ಕಿದೆ. ಸದ್ಯದಲ್ಲಿಯೇ ಸ್ವತಂತ್ರ ಹಿಂದೂ ಸದಸ್ಯರೂ ಇವರೊಡನೆ ಸೇರಲಿದ್ದಾರೆ. ಕಾಂಗ್ರೆಸ್ ಮತ್ತು ಇತರ ಪಕ್ಷದವರು ಈಗಿನ ಮಂತ್ರಿಮಂಡಲಕ್ಕೆ ವಿರೋಧವಾಗಿ ಮಹತ್ವದ ಚಳವಳವನ್ನು ನಡೆಸುತ್ತಿದ್ದಾರೆ. ಈಗಿನ ಪ್ರಧಾನ ಮಂತ್ರಿಗಳಾದ ಫಜ್ಲುಲ್‌ಹಕ್ಕರು ಈ ಉತ್ಪಾತ ಸಂಜ್ಞೆಗಳನ್ನು ಕಂಡು ತಬ್ಬಿಬ್ಬಾಗಿ ಬಂಗಾಳ ಕಾಂಗ್ರೆಸಿನವರು ಈಗಿನ ಮಂತ್ರಿಮಂಡಲದ ಕಾರ್ಯರಂಗದಲ್ಲಿ ತೊಡಕನ್ನುಂಟುಮಾಡದಂತೆ ಬುದ್ಧಿ ಹೇಳಬೇಕೆಂದು ಗಾಂಧಿಜಿಯವರೊಡನೆ ಮೊರೆಯಿಟ್ಟಿದ್ದಾರೆ. ಮೊನ್ನೆ ಮೊನ್ನೆ ಎರಡು ವಿಧಾಯಕ ಸಭೆಗಳಲ್ಲಿ ಮಂಜೂರಾದ ಒಕ್ಕಲು ತನ ಮಸೂದೆಗೆ ಗವರ್ನರರು ಸಮ್ಮತಿಯನ್ನೀಯದೆ ಹಲಕೆಲವು ವ್ಯತ್ಯಾಸಗಳನ್ನು ಮಾಡಬೇಕೆಂದಿದ್ದಾರೆ. ಮಿ. ಫಜ್ಲುಲ್‌ಹಕ್ಕರು ಸ್ವಲ್ಪ ಸಮಯದ ಹಿಂದೆ ಈ ಮಸೂದೆಗೆ ಗವರ್ನರರು ಪೂರ್ಣ ಸಮ್ಮತಿಯನ್ನು ಕೊಡದಿದ್ದರೆ ತನ್ನ ಮಂತ್ರಿಮಂಡಲವು ರಾಜಿನಾಮೆಯೀಯುವುದೆಂದು ಜನತೆಗೆ ಭರವಸೆಯನ್ನು ಕೊಟ್ಟಿದ್ದರೂ, ಅದನ್ನು ಪಾಲಿಸಲು ಹಿಂಜರಿದುದರಿಂದ ಇತರ ಪಕ್ಷದವರು ಇವರನ್ನು ಪ್ರಜಾಹಿತ ಘಾತುಕರೆಂದು ಕರೆಯಲಾರಂಭಿಸಿರುವುದಲ್ಲದೆ, ಜನಹಿತವನ್ನು ಪಾಲಿಸದ ಮಂತ್ರಿಮಂಡಲವು ಅಧಿಕಾರದಲ್ಲಿರಬಾರದೆಂಬ ಅಭಿಪ್ರಾಯವು ಜನತೆಯಿಂದ ಈಗ ಸ್ಪಷ್ಟವಾಗಿ ಹೇಳಲ್ಪಡುತ್ತಿದೆ. ಪ್ರಾಯಶಃ ಫಜ್ಲುಲ್ ಹಕ್ಕರು ಬೇಸರದಿಂದ ತಮ್ಮ ಅಧಿಕಾರದಿಂದ ದೂರವಾಗಿ, ಕಾಂಗ್ರೆಸಿಗೆ ತನ್ನ ಸ್ಥಾನವನ್ನು ಕೊಡುವ ಕಾಲವು ಬಹಳ ದೂರದಲ್ಲಿಲ್ಲವೆಂದು ಭಾವಿಸಬಹುದು.

೦ ೦ ೦

## ಸಿಂಧ ಪ್ರಾಂತ್ಯದಲ್ಲಿಯೂ ಅದೇ ಕತೆಯೆ?

ಸಿಂಧ ಮಂತ್ರಿಮಂಡಲದ ಭವಿಷ್ಯವೂ ಆಶಾಜನಕವಾಗಿದಿಲ್ಲ. ಸರ್. ಜಿ. ಯಚ್. ಹಿದಾಯತುಲ್ಲರ ಪಕ್ಷವು ಈಗಿನ ~~ಇತ್ತಾಹಿಜಕ್~~ ಮಂತ್ರಿಮಂಡಲದ ಮೇಲೆ ಅವಿಶ್ವಾಸಠರಾವನ್ನು ತರುವುದರಲ್ಲಿತ್ತು. ಆದರೆ ಕಾಂಗ್ರೆಸು ಮಾತ್ರ ಎರಡು ಪಕ್ಷಗಳೊಡನೆ ಮಾತುಕತೆಗಳನ್ನು ನಡೆಸಿ, ಒಂದು ವರುಷದ ತನಕ ಹೊಸ ತೆರಿಗೆಯನ್ನು ಯಾವ ಮಂತ್ರಿಮಂಡಲವು ಹೊರಿಸುವುದಿಲ್ಲವೆಂದು ಭರವಸೆಯನ್ನೀಯುವುದೋ ಆ ಪಕ್ಷಕ್ಕೆ ತನ್ನ ಬೆಂಬಲವನ್ನು ಕೊಡುವುದರಲ್ಲಿತ್ತು. ಆದರೆ ಈಗಿನ ಮಂತ್ರಿಮಂಡಲವು ಒಂದು ವರುಷದ ತನಕ ಹೊಸತೆರಿಗೆ ಹೊರಿಸುವುದಿಲ್ಲವೆಂದು ಕಾಂಗ್ರೆಸಿಗೆ ಆಶ್ವಾಸನೆಯಿತ್ತಿರುವುದರಿಂದ ತತ್ಕಾಲಕ್ಕೆ ಬಿಕ್ಕಟ್ಟಿನ ಭಯವಿಲ್ಲ.

೦ ೦ ೦

## ಮಧ್ಯಪ್ರಾಂತ್ಯದ ನವಮಂತ್ರಿಮಂಡಲ.


ಮೊದಲಿನ ಪ್ರಧಾನಮಂತ್ರಿಗಳಾಗಿದ್ದ ಡಾ| ಯನ್. ಬಿ. ಖಾರೆಯವರು ತತ್ಕಾಲಕ್ಕೆ ರಾಜಕಾರಣದಿಂದ ದೂರವಾಗಿ ತಮ್ಮ ವೈದ್ಯಕೀಯ ವೃತ್ತಿಯನ್ನು ಕೈಗೊಳ್ಳುತ್ತೇನೆಂದು ಹೇಳುತ್ತಿರುವಾಗ ಶ್ರೀ. ರವಿಶಂಕರ ಶುಕ್ಲರವರು ತಮ್ಮ ಹೊಸ ಮಂತ್ರಿಮಂಡಲದೊಡನೆ ರಾಜಪ್ರಮಾಣಮಾಡಿ ಅಧಿಕಾರವನ್ನು ಸ್ವೀಕರಿಸಿದ್ದಾರೆ. ವರ್ಕಿಂಗ್ ಕಮಿಟಿಯ ನಿರ್ಣಯದ ಕುರಿತು ಅತೃಪ್ತಿಯನ್ನು ನಾಗಪುರದ ಮಹಾರಾಷ್ಟ್ರ ಪಂಗಡದವರು ಸಭೆ, ಮೆರವಣಿಗೆ ಇವೇ ಮೊದಲಾದುವುಗಳ ಮೂಲಕ ಸೂಚಿಸುತ್ತಿದ್ದಾರೆ. ಈಗಿನ ಮಂತ್ರಿಮಂಡಲದಲ್ಲಿರುವ ಶ್ರೀಗಳಾದ ಆರ್. ವಿ. ಶುಕ್ಲ, ಡಿ. ಪಿ. ಮಿಶ್ರ, ಡಿ. ಕೆ. ಮೆಹಥಾ, ಸಿ. ಜೆ. ಸಿ. ಬರೂಖಾ ಮತ್ತು ಯಸ್. ವಿ. ಗೋಖಲೆಯವರಲ್ಲದೆ ಇನ್ನೊಬ್ಬ ಮಂತ್ರಿಯನ್ನು ಸೇರಿಸಿಕೊಳ್ಳುವ ಸೂಚನೆಯು ಮುಂದೆ ಬಂದಿರುತ್ತದೆ. ಆ ಸ್ಥಾನವನ್ನು ಹರಿಜನರಲ್ಲೊಬ್ಬರಿಗೆ ಕೊಡಲೇಬೇಕೆಂದು ಗಾಂಧಿಜಿ

ಯವರಿಗೆ ಒತ್ತಾಯ ಪತ್ರವು ಹೋಗಿರುವುದಲ್ಲದೆ, ಅವರ ಬೇಡಿಕೆಯು ಅಲಕ್ಷಿಸಲ್ಪಟ್ಟರೆ ಸತ್ಯಾಗ್ರಹವನ್ನು ಆರಂಭಿಸುವೆವೆಂದು ಹರಿಜನ ಧುರೀಣರು ಈಗಾಗಲೆ ತಿಳಿಸಿದ್ದಾರೆ. ಡಾ| ಖಾರೆಯವರು ನುರಿತ ದೇಶಪ್ರೇಮಿಗಳು, ಅವರು ಶಿಸ್ತಿಗನುಗುಣವಾಗಿ ನಡೆದರೆ ಅವರ ಭವಿಷ್ಯವು ಇನ್ನೂ ಭವ್ಯವಾಗಿಯೇ ಇದೆಯೆಂದು ರಾಷ್ಟ್ರಪತಿ ಸುಭಾಷ ಬೋಸರು ಹೇಳಿಕೆಯನ್ನು ಹೊರಡಿಸಿದ್ದಾರೆ ಇನ್ನೊಂದೆಡೆಯಲ್ಲಿ ಡಾ| ಯನ್. ಬಿ. ಖಾರೆಯವರು ಶ್ರೀ. ಶುಕ್ಲರ ಮಂತ್ರಿ ಮಂಡಲವು ಮೂರು ತಿಂಗಳುಗಳ ತನಕ ಬಾಳುವುದು ಕೂಡಾ ಸಂಶಯಾಸ್ಪದವೆಂದು ಹೇಳಿದ್ದಾರೆ. ಇವೆಲ್ಲವನ್ನು ನೋಡುವಾಗ ಮಧ್ಯಪ್ರಾಂತ್ಯದ ಜ್ವಾಲಾಮುಖಿಯು ಒಮ್ಮೆಗೆ ತಣಿದಂತೆ ಕಂಡು ಬಂದರೂ, ಒಳಗೆ ಕುದಿಯುತ್ತಲಿದೆಯೆಂಬುದರಲ್ಲಿ ನಿರ್ವಿವಾದ.

೦ ೦ ೦

**'ಅಧಿಕಾರ ಮತ್ತು ಕಾಂಗ್ರೆಸ್'**

ಮುಸ್ಲಿಮ್ ಲೀಗಿನ ಧುರೀಣರಾದ ಮಿ| ಮಹಮ್ಮದಾಲಿ ಜಿನ್ನರವರು ಡಿಲ್ಲಿಯಲ್ಲಿ ಕಾಂಗ್ರೆಸಿನ ಕುರಿತು ತನ್ನ ಹೃದ್ಗತವನ್ನು ವಿಶದಪಡಿಸಿದ್ದಾರೆ. ಮಿ| ಜಿನ್ನರು ಕಾಂಗ್ರೆಸನ್ನು ಟೀಕಿಸುತ್ತಾ, ಅದು ಅಧಿಕಾರದಿಂದ ಮತ್ತವಾಗಿದೆ. ಈ ಪರಿಸ್ಥಿತಿಯು ಹೀಗೆ ನಡೆಯುತ್ತಾ ಬಂದರೆ ರಾಷ್ಟ್ರಕ್ಕೆ ಸ್ವಾತಂತ್ರ್ಯವೇ ಇರಲಾರದು ಎಂದು ಹೇಳಿದ್ದಾರೆ. ಮುಸ್ಲಿಮ್ ಲೀಗ್ ಜಾತೀಯ ಸಂಸ್ಥೆಯೆಂಬ ದುರಭಿಪ್ರಾಯದಿಂದ ಅದನ್ನು ಮಣ್ಣುಗೂಡಿಸಲು ಕಾಂಗ್ರೆಸಿನವರು ಕೈಲಾದ ಯತ್ನಗಳನ್ನು ಮಾಡುತ್ತಿದ್ದಾರೆಂದು ಹೇಳಿದರವರು. ನಿರಾಶೆಯಿಂದ ಉತ್ಪನ್ನವಾದ ಉದ್ಗಾರಗಳಿವು. ಅಧಿಕಾರಲಾಲಸೆಯು ತುಂಬಿ ತುಳುಕುವ ಮಿ| ಜಿನ್ನರು ಹೀಗೆ ಹೇಳಿರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ ಕಾಂಗ್ರೆಸಿಗೆ ಇರುವಷ್ಟು ವರ್ಚಸ್ಸು ಈಗ ಮುಸ್ಲಿಮ್ ಲೀಗಿಗಿದ್ದಲ್ಲಿ ಅದರ ಪರಿಸ್ಥಿತಿಯು ತೀರಾ ವ್ಯತ್ಯಾಸವಾಗುತ್ತಿತ್ತೆಂಬುದು ಸ್ವಯಂ ವ್ಯಕ್ತವಾಗಿದೆ. ಹಿಂದೂ ಮುಸ್ಲಿಮ್ ಐಕ್ಯದ ಕುರಿತು ಕಾಂಗ್ರೆಸಿನ ಧುರೀಣರಿಗೂ ಮಿ| ಜಿನ್ನರಿಗೂ ನಡೆದ ಪತ್ರವ್ಯವಹಾರದಿಂದ ಮಿ| ಜಿನ್ನರು ಎಷ್ಟರತನಕ ಐಕ್ಯಸಾಧನೆಯನ್ನು ಬಯಸುತ್ತಾರೆಂದು ಸ್ಪಷ್ಟವಾಗುತ್ತದೆ. ಮುಸ್ಲಿಮ್ ಲೀಗು ಜಾತೀಯ ಸಂಸ್ಥೆಯೆಂದು ಹೇಳುವುದರಲ್ಲಿ ಎರಡಭಿಪ್ರಾಯಗಳಿಲ್ಲ. ರಾಜಕೀಯದಲ್ಲಿ ಧರ್ಮಕ್ಕೆಡೆಯಿರಬಾರದೆಂದು ಹೇಳುತ್ತಿದ್ದ ಮಿ| ಜಿನ್ನರು ಇಂದು ಧರ್ಮದ ಸೋಗಿನಲ್ಲಿ ತನ್ನ ಪಕ್ಷವನ್ನು ಬಲಗೊಳಿಸಲೆತ್ನಿಸುತ್ತಿರುವುದೂ, ಅವರದು ರಾಜಕೀಯ ಮತ್ತು ಧಾರ್ಮಿಕ ಪಕ್ಷವೆನ್ನುತ್ತಿರುವುದು ಮಿ| ಜಿನ್ನರ ಈಗಿನ ಧೋರಣೆಯ ಒಂದು ವೈಶಿಷ್ಟ್ಯವೆನ್ನಬೇಕು. ಅಬಲರು ಸಬಲರೊಳಗೆ ಮೈತ್ರಿಯು ಅಸಾಧ್ಯವೆಂದು ಮಿ| ಜಿನ್ನರು ಹೇಳಿರುವುದನ್ನು ನೋಡುವಾಗ ಕಾಂಗ್ರೆಸಿನ ರಾಜೀ ಪ್ರಸ್ತಾಪವು ಅರ್ಥರಹಿತವಾದುದೆಂದೇ ಹೇಳಬೇಕಾಗಿದೆ. ಎಂದಿನಂತೆ ಜನತಾಸಂಪರ್ಕವಿಲ್ಲದ ಧುರೀಣರೊಡನೆ ಐಕ್ಯಸಾಧನೆಯ ಚರ್ಚೆಗಳನ್ನು ಮಾಡುವುದಕ್ಕಿಂತ ಕಾಂಗ್ರೆಸ್ ಜನತಾಸಂಪರ್ಕ ಕಾರ್ಯವನ್ನು ಭರದಿಂದ ಸಾಗಿಸಿದರೆ ಮುಸ್ಲಿಮ್ ಲೀಗಿನ ನಿಜವಾದ ಬಣ್ಣವು ಬಯಲಾಗಿ ಇತರ ಜನತೆಯಂತೆಯೇ ಮುಸ್ಲಿಮ್ ಜನತೆಯೂ ರಾಷ್ಟ್ರದ ಏಕಮಾತ್ರ ರಾಜಕೀಯ ಸಂಸ್ಥೆಯಾದ ಕಾಂಗ್ರೆಸನ್ನು ತಮ್ಮದನ್ನಾಗಿ ಮಾಡಿಕೊಳ್ಳುವುದು ಖಂಡಿತವೆಂಬುದನ್ನು ಕಾಂಗ್ರೆಸ್ ಮರೆಯದಿರುವುದು ಪ್ರಾಮುಖ್ಯವಾಗಿದೆ.



ಮಧ್ಯಪ್ರಾಂತ್ಯದ ಹೊಸ ಪ್ರಧಾನ ಮಂತ್ರಿಗಳಾದ
**ಶ್ರೀ. ರವಿಶಂಕರ ಶುಕ್ಲರು**
ವರ್ಕಿಂಗ್ ಕಮಿಟಿ ಮತ್ತು ಗಾಂಧಿಜಿಯವರ ಆಶೀರ್ವಾದವನ್ನು ಪಡೆದು ಪ್ರಾಂತ್ಯದ ಆಡಳಿತೆಯನ್ನು ಪ್ರಾರಂಭಿಸಿದ್ದಾರೆ.

೦ ೦ ೦

**ಭಾಷಾವಾರು ಪ್ರಾಂತರಚನೆಯ ಕುರಿತು ವರ್ಕಿಂಗ್ ಕಮಿಟಿಯ ನಿರ್ಣಯ.**

ಕಳೆದ ವಾರ ಕರ್ನಾಟಕಾಂಧ್ರ, ಕೇರಳ ಪ್ರಾಂತ್ಯಗಳ ಒಂದು ಡೆಪ್ಯುಟೇಶನು ವಾರ್ಧಕ್ಕೆ ಕಳುಹಿಸಲ್ಪಟ್ಟಿತು. ವರ್ಕಿಂಗ್ ಕಮಿಟಿಯ ಸದಸ್ಯರೂ ಡೆಪ್ಯುಟೇಶನಿನವರೂ

ಭಾಷಾವಾರು ಪ್ರಾಂತರಚನೆಯ ವಿವಿಧ ವಿಷಯಗಳ ಕುರಿತು ಚರ್ಚಿಸಿದರು. ಕೊನೆಗೆ ವರ್ಕಿಂಗ್ ಕಮಿಟಿಯು -"ಇಂಡಿಯಾ ಸರಕಾರದ ಮುಂದಿನ ಯಾವ ಯೋಜನೆಯಲ್ಲಿಯೂ ಭಾಷಾವಾರು ಪ್ರಾಂತ್ಯಗಳ ಪ್ರಶ್ನೆಯು ಕಾಂಗ್ರೆಸಿಗೆ ಅಧಿಕಾರವಿದ್ದರೆ ಲಕ್ಷಿಸಲ್ಪಡುವುದು" ಎಂಬ ಸಾರಾಂಶದ ನಿರ್ಣಯವನ್ನು ಮಾಡಿದೆ. ಈ ನಿರ್ಣಯವು ಡೆಪ್ಯುಟೇಶನಿನವರಿಗೆ ಹೆಚ್ಚಿನ ಉಪಕಾರವನ್ನು ಮಾಡಿರುವುದಲ್ಲದೆ, ಸುಸ್ಪಷ್ಟವಾದ ಭರವಸೆಯನ್ನು ಏಕೀಕರಣಕ್ಕಾಗಿ ಚಳವಳ ಮಾಡುತ್ತಿರುವ ಪ್ರಾಂತ್ಯಗಳಿಗೆ ಕಾಂಗ್ರೆಸು ಕೊಟ್ಟಿದೆಯೆಂಬ ಅಭಿಪ್ರಾಯವನ್ನು ಡೆಪ್ಯುಟೇಶನಿನವರಲ್ಲೊಬ್ಬರಾದ ಡಾ| ಪಟ್ಟಾಭಿ ಸೀತಾರಾಮಯ್ಯನವರು ಹೇಳಿದ್ದಾರೆ. ಈ ನಿರ್ಣಯದ ವೈಶಿಷ್ಟ್ಯವೆಂದರೆ ಕಾಂಗ್ರೆಸಿಗೆ "ಹಕ್ಕು" ದೊರೆಯಬೇಕೆಂದಿಲ್ಲ, ಕೇವಲ "ಅಧಿಕಾರ" ವಿದ್ದರೆ ಅದು ಭಾಷಾವಾರು ಪ್ರಾಂತ ರಚನೆಗೆ ಸಹಾಯ ಮಾಡುವುದೆಂಬದಾಗಿದೆ. ವರ್ಕಿಂಗ್ ಕಮಿಟಿಗೆ ಇದಕ್ಕಿಂತ ಹೆಚ್ಚಿನದೇನೂ ಮಾಡಲು ಸಾಧ್ಯವಿಲ್ಲ. ಭಾರತದ ಸೆಕ್ರೆಟರಿ ಆಫ್ ಸ್ಟೇಟರಿಗೆ ಆಜ್ಞೆಯನ್ನು ಕೊಟ್ಟರೆ ಅವರು ಕೇಳುವಂತಿಲ್ಲ. ಅಲ್ಲದೆ ಈ ಪ್ರಶ್ನೆಯು ಕೇಂದ್ರ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚಿಸಲ್ಪಟ್ಟು ಅದರ ಬೆಂಬಲವು ಸಿಗಬೇಕು. ಕಾಂಗ್ರೆಸ್ ಸದಸ್ಯರ ಬೆಂಬಲವು, ವರ್ಕಿಂಗ್ ಕಮಿಟಿಯ ನಿರ್ಣಯದಂತೆ ಭಾಷಾವಾರು ಪ್ರಾಂತ ರಚನೆಯ ಕುರಿತು ತರಬಹುದಾದ ನಿರ್ಣಯಕ್ಕೆ ಸಿಗಲೇಬೇಕಾಗಿರುವುರಿಂದ ಪ್ರಾಯಶಃ ಕೇಂದ್ರ ವಿಧಾಯಕ ಸಭೆಯಲ್ಲಿ ಈ ಪ್ರಶ್ನೆಯು ಯಶಸ್ವೀ ಬೆಂಬಲವನ್ನು ಪಡೆಯಬಹುದು. ಆ ಬಳಿಕ ಮಾಡಬೇಕಾದ ಯತ್ನವೆಂದರೆ ಬ್ರಿಟಿಷ್ ಸರಕಾರದೊಡನೆ ಏಕೀಕರಣ ಪ್ರಶ್ನೆಗಾಗಿ ಹೋರಾಟ. ಕಾಂಗ್ರೆಸು ಮುಂದೆ ಜಾರಿಗೆ ಸಿಗುವುದೆಂದು ಹೇಳಲ್ಪಡುವ ಫೆಡರೇಶನಿನಲ್ಲಿ ತಿದ್ದುಪಡಿಗಳನ್ನು ಮಾಡಿಸುವಾಗ, ತನ್ನ ಠರಾವಿನಂತೆ ಈ ಭಾಷಾವಾರು ಪ್ರಾಂತರಚನೆಯ ಕುರಿತು ಅವಶ್ಯವಿರುವ ಆಶ್ವಾಸನೆಯನ್ನು ಪಡೆಯಲಿರುವುದರಿಂದ ಏಕೀಕರಣ ಚಳವಳದವರ ಕೆಲಸವು ಸುಲಭವಾದಂತಾಯಿತು. ಇದು ಡಾ| ಪಟ್ಟಾಭಿಯವರ ಅಭಿಪ್ರಾಯವಾಯಿತು. ಆದರೆ ವರ್ಕಿಂಗ್ ಕಮಿಟಿಯು "ಹಕ್ಕು" ಮತ್ತು "ಅಧಿಕಾರ" *(authority and power)* ಗಳ ವ್ಯತ್ಯಾಸವನ್ನು ಮನಗಂಡೇ ತನ್ನ ಠರಾವನ್ನು ಮಾಡಿದೆಯೋ ಎಂದು ಹೇಳಲಾಗುವುದಿಲ್ಲ. ಪಟ್ಟಾಭಿಯವರ ವಿವರಣೆಯಂತಿದ್ದರೆ ಆ ಠರಾವನ್ನು ಮಾಡಿರುವುದಕ್ಕಾಗಿ ವರ್ಕಿಂಗ್ ಕಮಿಟಿಯನ್ನು ಅಭಿನಂದಿಸಬೇಕಾಗಿದೆ.

## ಮೈಸೂರಿನಲ್ಲಿ ಪಿ. ಇ. ಯುನ್. ಕಾಂಗ್ರೆಸ್

### ೧೯೪೦ರಲ್ಲಿ ಅಧಿವೇಶನ

ಮಹಾರಾಜರು ಸ್ವಾಗತಿಸಿದರು.



ಜಗತ್ತಿನ ಸುಪ್ರಸಿದ್ಧ ಸಾಹಿತಿಗಳ ಪರಿಷತ್ತು ೧೯೪೦ನೆ ಇಸವಿಯಲ್ಲಿ ಮೈಸೂರಿನಲ್ಲಿ ಜರಗಲಿದೆ. ಈ ಪರಿಷತ್ತನ್ನು ಮೈಸೂರಲ್ಲಿ ನಡೆಸಲು ಮಹಾರಾಜರು ತಮ್ಮ ಅಪ್ಪಣೆಯನ್ನಿತ್ತಿದ್ದಾರೆ. ಸಮಗ್ರ ಏಸ್ಯಾ ಖಂಡದಲ್ಲಿ ಈ ಪರಿಷತ್ತು ಜರಗುವುದು ಇದೇ ಮೊದಲನೆ ಬಾರಿ.

# ಸಾಲನಿವಾರಣಾ ಕಾನೂನಿನ ಪರಿಣಾಮ.

## ಮಂಗಳೂರು ಡಿ. ಮುನ್ಸಿಫ್ ಕೋರ್ಟಿನ ತೀರ್ಮಾನ.

ಮಂಗಳೂರಿನ ಡಿಸ್ಟ್ರಿಕ್ಟ್ ಮುನ್ಸೀಫರಾದ ಶ್ರೀ. ಎ. ಎಮ್. ಎಸ್. ಟಾಗಟರವರು, ಸಾಲ ನಿವಾರಣಾ ಕಾನೂನಿಗನುಸಾರವಾಗಿ, ಜುಲಾಯಿ ತಾ ೨೮ರಲ್ಲಿ ಒಂದು ವ್ಯವಹರಣೆಯ ತೀರ್ಪು ಕೊಟ್ಟರು.

ಪೂನಾರ್ ನರ್ಸಪ್ಪಯ್ಯನವರಿಗೆ ಶ್ರೀ ಕೆ. ರಘುಚಂದ್ರ ಬಲ್ಲಾಳರು ಆಸ್ತಿ ಅಡವಿನ ಮೇಲೆ, ಸೇಕಡಾ ೫|೭ ಸಲೆಯ ಬಡ್ಡಿಯಲ್ಲಿ ೧೯೧೭ನೇ ಜುಲಾಯಿ ತಾ ೧೬ರಲ್ಲಿ ೧೬೦೦ ರೂ. ಗಳ ಸಾಲ ಕೊಟ್ಟಿದ್ದರು. ವರ್ಷಂಪ್ರತಿ ಜುಲಾಯಿ ೧೬ರ ಒಳಗೆ ಬಡ್ಡಿ ಕೊಡುತ್ತಾ ಬರಬೇಕೆಂದೂ ಅದಕ್ಕೆ ತಪ್ಪಿದಲ್ಲಿ ಬಡ್ಡಿಯ ಮೇಲೆ ೧೨|| ಸಲೆ ಬಡ್ಡಿ ಹಿಡಿಯತಕ್ಕದ್ದೆಂದೂ, ಅಸಲು ಹಣವನ್ನು ೧೯೨೧ ರಿಂದ ೧೯೨೫ನೇ ಇಸವಿಯೊಳಗಿನ, ಜುಲಾಯಿ ೧೬ ರೊಳಗೆ ತೆರಲಿಕ್ಕೆ ತಪ್ಪಿದಲ್ಲಿ ಅಸಲಿಗೂ ೧೨|| ಸಲೆಯ ಬಡ್ಡಿ ಹಿಡಿಯಬೇಕೆಂದೂ ಶರ್ತವಿತ್ತು. ೧೯೨೨ನೇ ಆಗಸ್ಟ ೨೧ ರಲ್ಲಿ ೨,೦೦೦ರೂ. ಗಳನ್ನು ಪ್ರತಿವಾದಿಯರು ವಾದಿಗೆ ಸಲಾಯಿಸಿದ್ದರು. ೧೯೨೮ನೇ ಆಗೋಸ್ತು ೨೭ರಲ್ಲಿ ಆ ಕರಾರಿನ ಲೆಕ್ಕಾಚಾರ ನಡೆದು ಅಸಲು ಹಣದಲ್ಲಿ ರೂ. ೩೨೫ ಬಾಕಿಯೆಂದು ನಿರ್ಧರಿಸಲಾಗಿತ್ತು. ಆ ಐವೇಜನ್ನು ಪ್ರತಿವಾದಿಯು ತೆರಲು ತಪ್ಪಿದ್ದರಿಂದ ಕರಾರು ಪ್ರಕಾರ ಬಡ್ಡಿ ಸೇರಿಸಿ ರೂಪಾಯಿ ೫೭೩-೧೨-೦ಕ್ಕೆ ವಾದಿಯು ಮಂಗಳೂರು ಮುನ್ಸಿಫ್ ಕೋರ್ಟಿನಲ್ಲಿ ದಾವೆ ತಂದಿದ್ದರು.

ಪ್ರತಿವಾದಿಯರು ಈಗಿನ ಸಾಲ ನಿವಾರಣಾ ಕಾನೂನಿಗನುಸಾರವಾಗಿ ತಾನು ಈ ವರೆಗೆ ಕೊಟ್ಟ ಹಣವನ್ನೆಲ್ಲಾ ಲೆಕ್ಕಕ್ಕೆ ಹಿಡಿದು ಬಾಕಿ ಉಳಿಯುವ ಹಣಕ್ಕೆ ಮಾತ್ರ ಡಿಕ್ರಿ ಕೊಡತಕ್ಕದೆಂದು ಉದಾಹರಣೆ ಕೊಟ್ಟಿದ್ದರು. ೧೯೨೮ರಲ್ಲಿ ಇತ್ತಂಡದವರೂ ಆ ಮೊದಲಿನ ಲೆಕ್ಕಾಚಾರವನ್ನೆಲ್ಲಾ ಗಣಿಸಿ ರೂ. ೩೬೫ನ್ನು ಅಸಲು ಹಣವೆಂದು ಒಪ್ಪಿಕೊಂಡದ್ದರಿಂದ ಕರಾರು ಪ್ರಕಾರ ಡಿಕ್ರಿ ಕೊಡಬೇಕೆಂದು ವಾದಿಯರ ಕಡೆಯಿಂದ ಸಾಧಿಸಲಾಯಿತು. ಪ್ರತಿವಾದಿಯರ ಹೇಳಿಕೆಯಂತೆ ಮೊಬಲಗು ೧೯೩ ರೂ. ಮಾತ್ರವಾಗುವಾಗ, ವಾದಿಯ ದಾವಾ ಹಣವು ರೂ. ೫೭೩-೧೨-೦ ಆಗಿತ್ತು.

ಮಂಗಳೂರು ಡಿ. ಮುನ್ಸೀಫರು ಈ ವ್ಯಾಜ್ಯದ ತೀರ್ಪು ಬರೆಯುವಾಗ 'ಸಾಲ ನಿವಾರಣಾ ಕಾನೂನಿನ ೮ನೇ ಸೆಕ್ಷನಿನ ೧ನೇ ಪಾರ ಮತ್ತು ೨-೩ನೇ ಪಾರಗಳು ಯಾವ ಯಾವ ಸಂದರ್ಭಗಳಲ್ಲಿ ಅನ್ವಯಿಸಬೇಕೆಂಬುದು ಕಾನೂನಿನಲ್ಲಿ ಸ್ಪಷ್ಟವಾಗಿ ನಮೂದಿಸಲ್ಪಟ್ಟಿಲ್ಲ; ಸಾಮಾನ್ಯವಾಗಿ ತಿಳಿದು ಬರುವಂತೆ, ಒಂದನೇ ಪಾರವು, ಸಾಲದಲ್ಲಿ ಏನೂ ಸಂದಾಯವಾಗದಿರುವಲ್ಲಿಯೂ, ೨ ಮತ್ತು ೩ನೇ ಪಾರಗಳು ಸಾಲಗಾರನು ಸ್ವಲ್ಪ ಅಂಶಗಳನ್ನು ಪಾವತಿ ಮಾಡಿರುವಲ್ಲಿಯೂ ಅನ್ವಯಿಸುವುದು. (ii) ಮತ್ತು (iii)ನೇ ಕಲಮುಗಳು, ಮೊದಲಿನ ಕರಾರನ್ನು ಪುನರಾವರ್ತಿಸಿದ ಕರಾರುಗಳಿದ್ದಲ್ಲಿ—ಹಾಗೆ ಪುನರಾವರ್ತಿಸುವಾಗ ಸಾಲದ ಅಂಶವು ಪಾವತಿಯಾಗದಿರುವಲ್ಲಿ—ಮಾತ್ರ ಅನ್ವಯಿಸುವವು" ಎಂದು ಉಲ್ಲೇಖಿಸಿರುವರು.

ಇತ್ತಂಡದವರ ಹೇಳಿಕೆಗಳನ್ನೂ ಮುನ್ಸೀಫರು ವಿಮರ್ಶಿಸಿ, ಸಾಲ ನಿವಾರಣಾ ಕಾನೂನಿನ ಉದ್ದೇಶ ಮತ್ತು ರಚನೆಯ ದೃಷ್ಟಿಯಿಂ ಇಂತಹ ಸಂದರ್ಭಗಳಲ್ಲಿ ಸಾಲಗಾರನು ಆದಷ್ಟು ರಿಯಾಯತಿ ಹೊಂದಬೇಕಾಗುವದೆಂದು ತಿಳಿಸಿ, ಪ್ರತಿವಾದಿಯು ಪ್ರಾರ್ಥಿಸಿಕೊಂಡಂತೆ ರೂ. ೧೯೩ಕ್ಕೆ ಮಾತ್ರ ಡಿಕ್ರಿ ಕೊಟ್ಟರು.

---

# ಅಂತರಂಗ

ಉಡುಪಿ, ಆಗೋಸ್ತು ೭, ೧೯೩೮.


## ಭಾರತೀಯ ಸೈನ್ಯ

ಹಲವು ತಿಂಗಳುಗಳಿಂದ ಇಂಗ್ಲೆಂಡಿನ ಯುದ್ಧ ಕಚೇರಿ ಮತ್ತು ಭಾರತಕಚೇರಿಗಳೊಳಗೆ ಭಾರತೀಯ ಸೈನ್ಯದ ಖರ್ಚಿನ ಕುರಿತು ನಡೆಯುತ್ತಿದ್ದ ಚರ್ಚೆಯು ಕೊನೆಗೊಂಡಂತಾಯಿತು. ಸೈನ್ಯದಲ್ಲಿ ಹಲವು ಸುಧಾರಣೆಗಳನ್ನು ತಂದೊಡ್ಡಿ, ಭಾರತೀಯ ಸೈನಿಕರನ್ನು ಬ್ರಿಟಿಷ್ ಸೈನಿಕರ ಮಟ್ಟಕ್ಕೆ ತಂದು, ಅವರನ್ನು ಯುರೋಪಿನಲ್ಲಿ ಹೋರಾಡಲುಪಯೋಗಿಸುವಂತೆ ಮಾಡುವುದರಿಂದ ಭಾರತದ ಆಯವ್ಯಯ ಪಟ್ಟಿಯಲ್ಲಿ ಸೈನ್ಯದ ಖರ್ಚನ್ನು ಮತ್ತಷ್ಟು ಹೆಚ್ಚಿಸಬೇಕಾಗುತ್ತದೆ. ಈಗಲೇ ಇಂಡಿಯಾ ಸರಕಾರವು ೪೫ ಕೋಟಿ ರೂಪಾಯಿಗಳನ್ನು ಸ್ವರಕ್ಷಣೆಗೆಂದು ಕೊಡುವುದಿದ್ದರೂ ಇದರಿಂದ ಭಾರತಕ್ಕೆ ಎಳ್ಳನಿತು ಪ್ರಯೋಜನವು ಸಿಕ್ಕುವುದಿಲ್ಲ. ಅಲ್ಲದೆ ಆ ಸೈನ್ಯದಲ್ಲಿ ಬ್ರಿಟಿಷ್ ಅಧಿಕಾರಿಗಳು ಅಧಿಕವಾಗಿರುವುದರಿಂದ ಭಾರತೀಯರಿಗೆ ಎಡೆಯಿಲ್ಲದಂತಾಗಿದೆ. ಯಾವ ಸೈನ್ಯವನ್ನಾದರೂ ಭಾರತೀಯ ಸೈನ್ಯವೆಂದು ಕರೆಯಬೇಕಾದರೆ ಅದರಲ್ಲಿ ಭಾರತದ ಅಧಿಕಾರಿಗಳಿರಬೇಕು, ಅದು ನಮ್ಮ ದೇಶದ ಸಂರಕ್ಷಣೆಗಾಗಿ ಹೋರಾಡುವ ನಿಜವಾದ ರಾಷ್ಟ್ರೀಯ ಸೈನ್ಯವಾಗಿರಬೇಕು. ಆದರೆ ಇಂದಿನ ಸೈನ್ಯವು ಹಾಗಿಲ್ಲ. ಬ್ರಿಟಿಷ್ ಸರಕಾರವು ಭಾರತದೊಡನೆ ಕೇಳದೆ ತನ್ನಿಚ್ಛೆಯಂತೆ ವರ್ತಿಸಿ, ಭಾರತೀಯರು ತೆರುವ ತೆರಿಗೆಯನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಯ ರಕ್ಷಣೆಗಾಗಿರುವ ಸೈನ್ಯಕ್ಕಾಗಿ ವ್ಯಯಿಸುತ್ತಿದೆ. ಯುದ್ಧ ಮತ್ತು ಭಾರತ ಕಚೇರಿಗಳೊಳಗಣ ತೀರ್ಮಾನಕ್ಕೆ ಭಾರತೀಯರು ಸೈಗುಟ್ಟುವುದು ಆತ್ಮಹತ್ಯಾಪ್ರಾಯವಾಗಿರುವುದರಿಂದ ನಾವು ನಮ್ಮ ನಿಷೇಧವನ್ನು ವ್ಯಕ್ತಪಡಿಸಿ ಬ್ರಿಟಿಷ್ ಸರಕಾರದ ನಿರಂಕುಶ ಧೋರಣೆಗಾಗಿ ಅದನ್ನು ಖಂಡಿಸಬೇಕಾಗಿದೆ. ಈ ಕುರಿತು ಕೇಂದ್ರ ನ್ಯಾಯ ವಿಧಾಯಕ ಸಭೆಯಲ್ಲಿ ಚರ್ಚೆಗಾಗಿ ಶ್ರೀ. ಸತ್ಯಮೂರ್ತಿಯವರು ಒಂದು ನಿಲುವಳಿಯ ಸೂಚನೆಯನ್ನು ಕೊಟ್ಟಿರುತ್ತಾರೆ. ಬ್ರಿಟಿಷ್ ಸರಕಾರದ ಈ ಹಾನಿಕಾರಕ ವ್ಯವಸ್ಥೆಗೆ ಭಾರತವು ತನ್ನ ಸಮ್ಮತಿಯನ್ನು ಕೊಡಲು ಸರ್ವಥಾ ಒಪ್ಪದಿರುವುದು ಪ್ರಾಮುಖ್ಯವಾಗಿದೆ.

---

# ಔದ್ಯೋಗೀಕರಣದಿ

## ಕಾಂಗ್ರೆಸಿಗೆ ಸುಸ್ಪಷ್ಟ

ಡಾ| ಮೇಘನಾಥ ಷಾರವರು "ಮೊಡರ್ನ್ ರಿವ್ಯು" ಪತ್ರಿಕೆಯಲ್ಲಿ "ಭಾರತದ ಔದ್ಯೋಗೀಕರಣ"ವೆಂಬೊಂದು ಮಹತ್ವದ ಲೇಖನವನ್ನು ಬರೆದಿದ್ದಾರೆ. ಅದರ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ: —

ದೊಡ್ಡ ಯೋಜನೆಯ ಔದ್ಯೋಗೀಕರಣದಿಂದ ಭಾರತದ ಧರ್ಮವು ಕೆಟ್ಟುಹೋಗಿ ಕೇವಲ ಧರ್ಮವನ್ನೇ ಪೂಜಿಸುವ ಮನೋವೃತ್ತಿಯುಂಟಾಗುವುದೆಂಬ ಅಭಿಪ್ರಾಯವು ಹಲವರಲ್ಲಿ ಉಂಟಾಗಿರುವುದರಿಂದ ಪ್ರೊ. ಷಾರವರು ಈ ಲೇಖನವನ್ನು ಬರೆದರು.

ಮಹಾತ್ಮಾಜಿಯವರು ಲಂಡನಿಗೆ ದುಂಡು ಮೇಜಿನ ಪರಿಷತ್ತಿಗಾಗಿ ಹೋಗುವಾಗ ಅವರೊಡನಿದ್ದವರಲ್ಲಿ ಜಗದ್ವಿಖ್ಯಾತ ಹಾಸ್ಯಗಾರರಾದ ಚಾರ್ಲಿ ಚಾಪ್ಲಿನರೊಬ್ಬರು. ಈ ಪ್ರಭೃತಿಗಳೊಳಗೆ ನಡೆದ ಮಾತುಕತೆಯು ಸ್ವಾರಸ್ಯದ್ದಾಗಿದೆ.

ಚಾರ್ಲಿ ಚಾಪ್ಲಿನರು ಮಹಾತ್ಮಾಜಿಯರೊಡನೆ ಮಾತಾಡುತ್ತಾ—ನೀವು ಯಂತ್ರಗಳ ಉಪಯೋಗಕ್ಕೆ ಪೂರ್ಣ ವಿರೋಧವಾಗಿದ್ದಾರೆಂದು ತಿಳಿಯುತ್ತೇನೆ. ಅಂತಹ ತತ್ವವನ್ನು ನೀವು ಬೋಧಿಸುವುದೇಕೆ? —ಎಂದು ಕೇಳಿದರು. ಮಹಾತ್ಮಾಜಿಯರು ಅಷ್ಟರ ತನಕ ಚಾರ್ಲಿ ಚಾಪ್ಲಿನರ ಹೆಸರನ್ನೇ ಕೇಳಿ

ಡಾ| ಮೇಘ

ದ್ದಿಲ್ಲವಂತೆ. ಸಾಮಾನ್ಯ
ನಿಗೆ ಉತ್ತರವೀಯುವಂತೆ
ಯವರು — ಯಂತ್ರಗಳ
ಗದಿಂದ ಭಾರತದ ಎಷ್ಟೊ
ರಿಕೆಗಳು ಅಳಿದು ಹೋಗಿ
ಯರು ದಾರಿದ್ರ್ಯಕ್ಕೊ

ಸ್ಪೈನಿಗ



"ಪ್ರಜಾಸತ್ತಾತ್ಮಕ"
ತಮ್ಮ ಬೆಂಬಲವನ್ನು
ಸೇರಿ ತಮ್ಮ ಪಾಲಿನ "
ವೃ

ರೆ. ಆದುದರಿಂದ ಯಂ
ಯೋಗವನ್ನು ನಿಲ್ಲಿಸಿದ
ರಿಗೂ ಕೆಲಸ ಸಿಕ್ಕಿದಂತ
ಎಂದರಂತೆ.

ಆಗ ಚಾಪ್ಲಿನ
ರಾಷ್ಟ್ರದಲ್ಲಿ ಆಳರಸ
ದಾರಿದ್ರ್ಯವನ್ನು ಲಕ್ಷ

# ಭಾರತದ ಉನ್ನತಿ!

## ಯ ಧೋರಣೆಯಿಲ್ಲ

### ರ ನಿವೇದನೆ

ಮ್ಮದೇ ರಾಷ್ಟ್ರೀಯ ಸರಕಾರ ದು ಎಲ್ಲರಿಗೂ ಕೆಲಸ ಸಿ ಕೊಟ್ಟರೂ ನೀವು ಳ ಉಪಯೋಗವನ್ನು ಸುವಿರಿ?—ಎಂದು ಕೇಳಿ

**ು ಕತ್ತಿ!**



ನ್ಸ ರಾಷ್ಟ್ರಗಳು ಸ್ಪೈನಿಗೆ ರಲ ಫ್ರೇಂಕನೊಡನೆ ತ್ತಿವೆ. ಆದರೆ ಸ್ಪಾನಿಷ್ ಯುತ್ತಿದೆ.

ದಕ್ಕೆ ಗಾಂಧಿಜಿಯವರು ವಾದ ಉತ್ತರವನ್ನು ವಂತೆ. ಇದರಿಂದ ಕಾಂ ಧುರೀಣರಿಗೆ ರಾಷ್ಟ್ರೀಯ ರದ ಸರಿಯಾದ ಕಾರ್ಯ ರಿವಿಲ್ಲವೆಂದು ಸ್ಪಷ್ಟವಾ ಕಾಂಗ್ರೆಸಿನವರು ಗ್ರಾಮ ಗಳಲ್ಲಿ ವಿದ್ಯುಚ್ಛಕ್ತಿ, ನೂಲುವುದು, ನೇಯಿಗೆ ಇವೇ ಮೊದಲಾದುವುಗಳ ಕುರಿತು ಮಾತಾಡುವುದಿದ್ದರೂ ವಿದ್ಯುಚ್ಛಕ್ತಿಗಾಗಿ ಯಂತ್ರೋಪ ಕರಣಗಳನ್ನುಪಯೋಗಿಸ ಬೇಕಾಗು ತ್ತದೆಂಬುದನ್ನು ಅವರು ಲೆಕ್ಕಿಸುವು ದಿಲ್ಲ. ಒಟ್ಟಿನ ಮೇಲನ್ನುವುದಿದ್ದರೆ ಕಾಂಗ್ರೆಸಿನವರು ಸ್ಪಷ್ಟವಾದ ರಾಷ್ಟ್ರೋದ್ಧಾರ ಯೋಜನೆಯನ್ನು ಮಾಡುವುದು ಅವಶ್ಯವಾಗಿದೆ. ಕೇಂದ್ರಾಧಿಕಾರವಿಲ್ಲದೇನೇ ಸ್ಪಷ್ಟ ವಾದ ಕಾರ್ಯಕ್ರಮವಿದ್ದರೆ ಪ್ರಾಂ ತೀಯಾಧಿಕಾರದಿಂದಲೇ ಮಹತ್ವದ ಕೆಲಸಗಳನ್ನು ಮಾಡಬಹುದು

ಡಾ| ಮೇಘನಾಥ ಷಾರ ವರು ಆಧುನಿಕ ಔದ್ಯೋಗಿಕ ವಿಧಾ ನವನ್ನು ವಿವರಿಸಿ— ಭಾರತವು ಹೊಸ ವಿಧಾನಕ್ಕನುಸಾರವಾಗಿ ಸಮಗ್ರ ಭಾರತದಲ್ಲಿ ಔದ್ಯೋಗಿಕ ಯೋಜನೆಯೊಂದನ್ನು ತಯಾರಿಸ ಬೇಕೆಂದು ಸೂಚಿಸಿದ್ದಾರೆ. ಅಲ್ಲದೆ ಭಾರತದಲ್ಲಿ ಎಲ್ಲಾ ತರದ ಸೌಕ ರ್ಯಗಳಿರುವುದರಿಂದ ರಷ್ಯ, ಯುನೈಟೆಡ್ ಸ್ಟೇಟ್ಸ್‌ಗಳಂತೆ ಈ ಯೋಜನೆಯು ಇಲ್ಲಿಯೂ ಯಶಸ್ವಿ ಯಾಗುವುದರಲ್ಲಿ ಸಂಶಯವಿಲ್ಲ. ಮೈಸೂರಿನ ಮಾಜಿ ದಿವಾನ ರಾದ ಸರ್. ಯಂ. ವಿಶ್ವೇಶ್ವರಯ್ಯ ನವರೂ "ಇಕೊನಾಮಿಕ್ ಪ್ಲಾನಿಂ ಗ್" ಎಂಬ ತನ್ನ ಪುಸ್ತಕದಲ್ಲಿ ಈ ಕ್ರಾಂತಿಯು ಯಶಸ್ವಿಯಾಗುವು ದೆಂದು ಹೇಳಿದ್ದಾರೆ. ನಾವು ನಮ್ಮ ಹಿಂದಿನ ವೈಭವವನ್ನು ನೆನಸಿ ಹಳೆ ವಿಧಾನಗಳನ್ನನುಸರಿಸುತ್ತಾ ಬಂದರೆ ನಮ್ಮ ರಾಷ್ಟ್ರೀಯ ಉನ್ನತಿಯು ಖಂಡಿತವಾಗಿಯೂ ಆಗುವಂತಿಲ್ಲ— ವೆಂದು ಡಾ. ಷಾರವರು ಅಭಿ ಪ್ರಾಯಪಟ್ಟಿದ್ದಾರೆ.

---

# ವಿಚಾರ ತರಂಗ

ಕೇಂದ್ರ ನ್ಯಾಯವಿಧಾಯಕ ಸಭೆಯ ಸಿಲೆಕ್ಟ್ ಕಮಿ ಟಿಯಲ್ಲಿ ಹೊಸ ಆದಾಯ ತೆರಿಗೆ ಮಸೂದೆಯು ಚರ್ಚಿ ಸಲ್ಪಡುತ್ತಿದೆ. ಈ ವಿಚಾರಕ್ಕೆ ಪತ್ರಿಕೆಗಳಾಗಲಿ, ಧುರೀಣ ರಾಗಲಿ ಈ ತನಕ ಪ್ರಾಮುಖ್ಯತೆಯನ್ನು ಕೊಡಲಿಲ್ಲ. ಈ ಮಸೂದೆಗನುಸಾರವಾಗಿ ಪರದೇಶಗಳಲ್ಲಿ ವ್ಯಾಪಾರಮಾಡು ತ್ತಿರುವ ಭಾರತೀಯರ ಆದಾಯದ ಮೇಲೆ ತೆರಿಗೆ ಹೊರಿ ಸಿದರೆ ಅವರ ಸಂಬಂಧಿಕರಾದ ಭಾರತೀಯರಿಗೆ ಸಿಗುವ ಹಣಕ್ಕೆ ಕೊಡಲಿಪ್ರಯೋಗ ಮಾಡಿದಂತಾಗುತ್ತದೆ. ಇಷ್ಟು ಮಾತ್ರವಲ್ಲ, ಪರದೇಶಗಳಲ್ಲಿ ವ್ಯಾಪಾರಮಾಡುವ ಭಾರತೀಯರು ಇಲ್ಲಿಯ ಅಧಿಕಾರಿಗಳಿಗೆ ತಮ್ಮ ಲೆಖ್ಖ ವನ್ನು ತೋರಿಸುವುದು ಕಷ್ಟದ ಕೆಲಸವಾಗಿದೆ. ಜಪಾನಿ ನಲ್ಲಿ ಯಾವತ್ತೂ ಹಣವನ್ನೂ ಈಗ ಹೊರಗೆ ಕೊಂಡೊ ಯ್ಯಲು ಬಿಡುವುದಿಲ್ಲ. ಹಾಗಿದ್ದರೆ ಈ ತೆರಿಗೆಯು ಅವರ ಮೇಲೆ ಹೊರಿಸಲ್ಪಡುವುದಾದರೂ ಹೇಗೆ? ಒಟ್ಟಿನ ಮೇಲೆ ಭಾರತೀಯರ ವಿದೇಶ ವ್ಯಾಪಾರದಿಂದ ಎಷ್ಟೋ ಕುಟುಂಬಗಳು ಸುಖದಲ್ಲಿವೆ. ಕೇಂದ್ರ ಸರಕಾರವು ಭಾರ ತೀಯ ಕೈಗಾರಿಕೆಗಳಿಗೆ ಬೆಂಬಲವನ್ನೀಯದೆ ದೊಡ್ಡ ಅಪರಾಧವನ್ನು ಮೊದಲೇ ಮಾಡಿದೆ. ಆದುದರಿಂದ ಈ ಅನ್ಯಾಯದ ತೆರಿಗೆಯನ್ನು ಹೊರಿಸದಿರುವಂತೆ ಮಾಡಲು ಕೇಂದ್ರ ವಿಧಾಯಕ ಸಭೆಯ ಸದಸ್ಯರು ಯತ್ನಿಸಬೇಕಾ ಗಿದೆ.

oo oo oo oo oo

**ಸತ್ಯಮೂರ್ತಿಗಳ "ಸೀಟು"!**

ಹಿಂದೀ ವಿರೋಧ ಚಳವಳದವರು ತಮ್ಮ ಆಂದೋಲ ನಕ್ಕೆ ಬಹುಮತವನ್ನು ತೋರಿಸಿದರೆ ತಾನು ಎಸೆಂಬ್ಲಿಯ ಸದಸ್ಯತನಕ್ಕೆ ರಾಜಿನಾಮೆಯಿತ್ತು ಪುನಃ ಚುನಾಯಿ ಸಲ್ಪಡುವೆನೆಂದು ಶ್ರೀ. ಸತ್ಯಮೂರ್ತಿಯವರು ಇತ್ತೀಚೆಗೆ ಹೇಳಿ ಹಿಂದೀ ವಿರೋಧಿಗಳನ್ನು ಬೆದರಿಸಿದರು. ಆದರೆ ಶ್ರೀಮತಿ ಶಿವರಾಜ ಎಂಬ ಮಹಿಳೆಯು ಸತ್ಯಮೂರ್ತಿ ಗಳ ಬೆದರಿಕೆಗೆ ಉತ್ತರವಾಗಿ ತಾನೇ ಅವರಿಗೆ ವಿರೋಧ ವಾಗಿ ನಿಂತು, ಸತ್ಯಮೂರ್ತಿಯವರು ಕಟ್ಟುವ ಚುನಾ ವಣಾ ಹಣ ಕೂಡಾ ಅವರಿಗೆ ಸಿಗದಂತೆ ಮಾಡುವೆನೆಂದು ಎದೆ ತಟ್ಟಿ ಹೇಳಿದ್ದಾರೆ. ಆದರೆ ಸತ್ಯಮೂರ್ತಿಯವರು ಶ್ರೀಮತಿ ಶಿವರಾಜರಿಗೆ ಯಾವ ಉತ್ತರವನ್ನೂ ಕೊಡದೆ ಮೌನವಾಗಿದ್ದಾರೆ.

# ವಿಶ್ವ ವಿಚಾರ

## ಚೀನೀಯರ ಗೊರಿಲ್ಲಾ ಯುದ್ಧ ವಿಧಾನ.

ಜಪಾನಿಯರು ಚೀನದಲ್ಲಿ ವಿಜಯಿಗಳಾಗಿದ್ದಾರೆಂಬ ವಾರ್ತೆಯು ದಿನೇ ದಿನೇ ಬರುತ್ತಿರುವುದಿದ್ದರೂ ಅವುಗಳಲ್ಲಿ ಹೆಚ್ಚಿನವುಗಳು ನಿರಾಧಾರವಾಗಿವೆಯೆಂದು ತಿಳಿದುಬರುತ್ತದೆ. ಚೀನದಿಂದ ವರ್ತಮಾನಗಳನ್ನು ಕಳುಹಿಸುವ ಪ್ರತಿಯೊಂದು ಏಜನ್ಸಿಯ ತಂತಿ, ಪತ್ರ ಮೊದಲಾದುವುಗಳನ್ನು ಜಪಾನಿಯರು ಪರೀಕ್ಷಿಸಿ ಅನಂತರ ಕಳುಹಿಸುತ್ತಾರೆ. ಯಾವ ಪತ್ರಗಳಲ್ಲಾದರೂ ಜಪಾನಿಯರಿಗೆ ವಿರೋಧವನ್ನು ಬಯಸುವ ಅಂಶವಿದ್ದರೆ ಅಂಥವುಗಳನ್ನು ಜಪಾನ್ ಅಧಿಕಾರಿಗಳು ಕಳುಹಿಸುವುದೇ ಇಲ್ಲ.

ಅಂತರ್‌ರಾಷ್ಟ್ರೀಯ ವಸತಿಯು ಜಪಾನಿನವರ ಅಧೀನದಲ್ಲಿರುವುದಿದ್ದರೂ ಚೀನೀಯ ಗೊರಿಲ್ಲಾ ಯುದ್ಧವಿಧಾನವನ್ನನುಸರಿಸುವ ಸೈನಿಕರಿಂದಾಗಿ ಜಪಾನಿಯರ ಪರಿಸ್ಥಿತಿಯು ಸುಧಾರಿಸುವಂತಿಲ್ಲ. ಶಾಂಘಾಯಿಯ ಬಳಿಯಲ್ಲಿ ಕೂಡಾ ಅವರ ಉಪಟಳದಿಂದಾಗಿ ಪ್ರತಿದಿನ ಹಲವಾರು ಜಪಾನಿಯರು ಮೃತ್ಯುವಶರಾಗುತ್ತಾರೆ ಕರಾವಳಿ ಪ್ರದೇಶಗಳಲ್ಲಿರುವ ಜಪಾನ್ ಪಟ್ಟಣಗಳಲ್ಲೆಲ್ಲಾ ಇದೇ ಅವಸ್ಥೆಯು ದಿನನಿತ್ಯದ ಕತೆಯಾಗಿದೆಯೆಂದು ಮುಂಬಾಯಿ ಕ್ರಾನಿಕ್ಲ್ ಪತ್ರಿಕೆಯ ವಿಶೇಷ ಪ್ರತಿನಿಧಿಗಳು ಬರೆಯುತ್ತಾರೆ. ಮಧ್ಯರಾತ್ರಿಗಳಲ್ಲಿ ಜಪಾನೀ 'ಎಂಬ್ಯುಲೆನ್ಸ್ ಕಾರ್' ಗಳಲ್ಲಿ ರಾಶಿ ರಾಶಿಯಾಗಿ ಗಾಯಹೊಂದಿದವರನ್ನು ಜಪಾನ್ ಆಸ್ಪತ್ರೆಗೆ ಅಂತರ್‌ರಾಷ್ಟ್ರೀಯ ವಸತಿಯಿಂದಾಗಿ ಕೊಂಡೊಯ್ಯುವುದು ಅಲ್ಲಿಯ ನಿವಾಸಿಕರ ದಿನಚರಿಯ ನೋಟವಾಗಿದೆ.

## ಹ್ಯಾಂಕೋ ಸಮರ

ಹ್ಯಾಂಕೋ ಪಟ್ಟಣವು ಚೀನದ ಅತಿ ಭದ್ರ ಪಟ್ಟಣಗಳಲ್ಲೊಂದಾಗಿದೆ. ಚೀನದ ಸೈನ್ಯಾಧಿಪತಿ ಚಿಯಾಂಗ್ ಕೈ ಶೇಕರ ಸ್ವಂತ ಸೈನ್ಯದ ಅತ್ಯುಚ್ಚ ಸೈನಿಕರು ಆ ನಗರವನ್ನು ಕಾಯುತ್ತಿದ್ದಾರೆ. ಈ ಸೈನ್ಯವು ಹ್ಯಾಂಕೋ ನಗರದ ರಕ್ಷಣೆಗಾಗಿಯೇ ಈತನಕ ಕಾದಿಡಲ್ಪಟ್ಟಿರುವುದರಿಂದ ಜಪಾನಿಯರನ್ನು ಹಿಮ್ಮೆಟ್ಟಿಸುವ ಸಂಭವವಿದೆ. ಒಂದೆಡೆಯಲ್ಲಿ ನೆರೆಯಿಂದ ತುಂಬಿದ ಯಾಂಗ್ಟ್ಸ ನದಿ,ಇನ್ನೊಂದೆಡೆಯಲ್ಲಿ ಗುಡ್ಡಗಾಡು, ಇವೇ ಮೊದಲಾದ ನೈಸರ್ಗಿಕ ಕಾರಣಗಳಿಂದ ಜಪಾನಿಯರ ಕೆಲಸವು ಮತ್ತಷ್ಟು ಕಠಿನವಾಗಿದೆ.

## ಕ್ಯಾಂಟನಿನಲ್ಲಿ

ಜಪಾನಿಯರು ಕ್ಯಾಂಟನ್ ನಗರವನ್ನು ಮುತ್ತಬಹುದೆಂದು ಸೈನಿನಂತೆಯೇ ಜನರ ಸೈನ್ಯವೊಂದನ್ನು ಅಲ್ಲಿ ತಯಾರಿಸುತ್ತಿದ್ದಾರೆ. ಗ್ರಾಮಗ್ರಾಮಗಳಲ್ಲಿ ಸ್ತ್ರೀಪುರುಷರು, ಮಕ್ಕಳೆನ್ನದೆ ಸೈನಿಕ ಶಿಕ್ಷಣವು ಕೊಡಲ್ಪಡುತ್ತಿದೆ. ಶಾಲಾಕಾಲೇಜುಗಳ ೧೫೦ಕ್ಕೂ ಮಿಕ್ಕಿದ ತರುಣಿಯರು ಅತ್ಯಂತ ಉತ್ಸಾಹದಿಂದ ತಮ್ಮ ಮಾತೃಭೂಮಿಗಾಗಿ ಹೋರಾಡುತ್ತಿದ್ದಾರೆ.

## ಭಾರತಕ್ಕೆ ಅಭಿವಂದನೆ.

ಕಾಂಗ್ರೆಸ್ ವೈದ್ಯಕೀಯ ಮಂಡಲಿಯನ್ನು ಚೀನೀಯರು ಅತ್ಯಂತ ಉತ್ಸಾಹದಿಂದ ಕಾಯುತ್ತಿದ್ದಾರೆ. ಅಲ್ಲಿಯ ಪತ್ರಿಕೆಗಳಲ್ಲಿ ಭಾರತೀಯ ವರ್ತಮಾನವು ಈಗ ಪ್ರಕಟವಾಗುವುದು ಬಹಳ ಅಪರೂಪವಾಗಿದೆ.

## ಚೀನಕ್ಕೆ ವಿಜಯ?

ಚೀನೀಯರು ಜಪಾನಿಯರ ಪ್ರಬಲ ಸೈನ್ಯವನ್ನೆದುರಿಸುತ್ತಾ ಜಪಾನಿಯರನ್ನು ಹಿಮ್ಮೆಟ್ಟಿಸಲು ಕ್ಯಾಕಿವಾಂಗ್ ರಂಗದಲ್ಲಿ ಯತ್ನಿಸುತ್ತಿರುವುದನ್ನು ನೋಡುವಾಗ ವರ್ತಮಾನ ಪತ್ರಿಕೆಗಳಲ್ಲಿ ಬರುತ್ತಿರುವ 'ವಿಜಯ' ವಾರ್ತೆಯ ಸತ್ಯಾಸತ್ಯತೆಯು ಬಯಲಾಗುತ್ತದೆ. ಜಪಾನಿಯರಿಗೆ ಒಂದು ವೇಳೆ ಸಿಗುವುದಿದ್ದರೆ ಭಸ್ಮೀಭೂತವಾದ ನಗರಗಳು ದೊರಕುತ್ತವೆ. ಚೀನದ ಈಗಿನ ಗೊರಿಲ್ಲಾ ಯುದ್ಧವಿಧಾನದಿಂದ ಜಪಾನಿಯರು ತಬ್ಬಿಬ್ಬಾಗಿದ್ದಾರೆ. ಒಂದು ನಗರವು ಜಪಾನಿಯರ ಕೈಸೇರುವುದೆಂದೊಡನೆಯೇ ಚೀನೀಯ ನಿವಾಸಿಕರು ಸದ್ದಿಲ್ಲದೆ ಅಲ್ಲಿಂದ ತಪ್ಪಿಸಿಕೊಂಡು ಒಳಪ್ರದೇಶಗಳಲ್ಲಿ ಅಡಗಿಕೊಳ್ಳುವಾಗ ಸೈನಿಕರು ಅಲ್ಲಲ್ಲಿ ಅಡಗಿಕೊಂಡು ಜಪಾನಿಯರನ್ನು ಸುಲಭವಾಗಿ ಗುಂಡಿನ ಬಾಯಿಗೆ ಸಿಲುಕಿಸುತ್ತಾರೆ. ಜಪಾನಿಯರು ಇನ್ನೊಂದು ನಗರದಲ್ಲಿ ಯುದ್ಧ ಮಾಡುವುದಿದ್ದರೂ ಮೊದಲಿನ ಯುದ್ಧರಂಗದಲ್ಲಿ ಯುದ್ಧವು ಮುಗಿಯುವುದಿಲ್ಲ. ಇತ್ತೀಚೆಗೆ ಚೀನದಲ್ಲಿರುವ ಒಬ್ಬ ಜರ್ಮನ್ ಜನರಲರನ್ನುವಂತೆ ಕಟ್ಟಕಡೆಗೆ ಜಪಾನಿಯರು ಪರಾಜಯ ಹೊಂದುವುದು ಖಂಡಿತವಾಗಿದೆಯೆಂದು ಈಗಿನ ಪರಿಸ್ಥಿತಿಯಿಂದ ಸ್ಪಷ್ಟವಾಗುತ್ತದೆ.

೦ ೦ ೦

## ಜೆಕೊಸ್ಲೊವೇಕಿಯಾದ ವಿಭಜನೆ.

ಜೆಕೊಸ್ಲೊವೇಕಿಯದ ಪ್ರಜಾಸತ್ತಾತ್ಮಕ ಸರಕಾರವು ಹಿಟ್ಲರನ ಬೋಧೆಯಿಂದ ಪ್ರೇರಿತರಾದ ಸುಡೇಟನ್ ಜರ್ಮನರ ಉಪಟಳವನ್ನು ಸಹಿಸದೆ ವಿವಿಧ ಭಾಷೆಗಳನ್ನಾಡುವ ಪ್ರಾಂತ್ಯಗಳನ್ನು ವಿಭಜಿಸಿ, ಪ್ರಾಂತಿಕ ಸ್ವಾಯತ್ತೆಯನ್ನು ಅವರಿಗೆ ಕೊಡುವ ಒಂದು ಮಸೂದೆಯನ್ನು ತರಲಿದೆ. ಈ ಪ್ರಶ್ನೆಯಿಂದುತ್ಪನ್ನವಾಗಿರುವ ಅವ್ಯವಸ್ಥೆಯನ್ನು ನಿವಾರಿಸಿ, ರಾಜಿ ಮಾಡಿ ಹಾಕಲು ಬ್ರಿಟಿಷ್ ಸರಕಾರವು ಲಾರ್ಡ್ ರನ್ಸಿಮೇನ್ ಎಂಬವರನ್ನು ಕಳುಹಿಸಿದ್ದಾರೆ. ಬ್ರಿಟನಿನ ಈ ಸೂಚನೆಯನ್ನು ಜೆಕೊಸ್ಲೊವೇಕಿಯವು ಮನ್ನಿಸಿದೆ. ಯುರೋಪಿನಲ್ಲಿ ಪ್ರಜಾಸತ್ತೆಯ ಸೋಗಿನಲ್ಲಿರುವ ಬ್ರಿಟನ್ ಮತ್ತು ಫ್ರಾನ್ಸುಗಳು ಅನುಸರಿಸುವ ಧೋರಣೆಯ ಮೇಲೆ ಜೆಕೊಸ್ಲೊವೇಕಿಯದ ಭವಿತವ್ಯವು ಹೊಂದಿಕೊಂಡಿದೆ. ಬ್ರಿಟನಿಗೆ ಹಿಟ್ಲರನ ಸಖ್ಯವೂ ಬೇಕು, ಜೆಕೊಸ್ಲೊವೇಕಿಯದ ಸದಭಿಪ್ರಾಯವೂ ಬೇಕು. ಹೀಗೆ ಒಂದು ತರದ ರಾಜಿಪ್ರಸ್ತಾಪವನ್ನು ಮಾಡಿ ತತ್ಕಾಲಕ್ಕೆ ಅವ್ಯವಸ್ಥೆಯು ಸಾಗಾಲೋಟದಿಂದ ಮುನ್ನಡೆಯದಂತೆ ಜಾಗ್ರತೆಯನ್ನು ತೆಗೆದುಕೊಂಡು ತಮ್ಮ ಯುದ್ಧ ಸಾಮುಗ್ರಿಗಳನ್ನೂ ವಿಮಾನ ಪಡೆಯನ್ನೂ ಹೆಚ್ಚಿಸಿ, ಇತರ ರಾಷ್ಟ್ರಗಳು ಎದೆ ತಟ್ಟುವಾಗ ಬ್ರಿಟಿಷ್ ಸಿಂಹವೂ ತನ್ನ ಬಾಲವೆತ್ತಿ ಬಲಯುತ ರಾಷ್ಟ್ರವೆಂಬುದನ್ನು ಸಾರಲು ಈ ವಿಧಾನವನ್ನು ಬ್ರಿಟನು ಅನುಸರಿಸಿದೆಯೆಂದು ರಾಜನೀತಿಜ್ಞರಭಿಮತವಾಗಿದೆ. ಪ್ರಾಯಶಃ ಲಾರ್ಡ್ ರನ್ಸಿಮೇನರು ಡಾ| ಬೆನೆಷ್‌ರವರೊಡನೆ ಬ್ರಿಟನಿನ ಧೋರಣೆಯನ್ನು ವಿವರಿಸಿ ಸುಡೇಟನ್ ಜರ್ಮನರಿಗೆ ಆ ಪ್ರಾಂತ್ಯದ ಸ್ವಾಯತ್ತೆಯನ್ನು ಕೊಡಿಸಬಹುದು. ಸುಡೇಟನ್ ಜರ್ಮನಿಗೆ ಸ್ವಾಯತ್ತೆಯು ದೊರಕಿತೆಂದೊಡನೆಯೇ ಅದು ಜರ್ಮನಿಗೆ ಸೇರಿದಂತಾಯಿತೆಂದೂ ಹೇಳಬಹುದು. ಅರಬಿ



ಇಂಗ್ಲೆಂಡಿನ ಚೇಂಬರ್ ಆಫ್ ಕಾಮರ್ಸಿನ ಅಧ್ಯಕ್ಷರಾದ
**ಲಾರ್ಡ್ ಸ್ಟಾನ್ಲಿಯವರು**

ಯವನ ಡೇರೆಯೊಳಗೆ ಮೊದಲು ತಲೆಯನ್ನಿಡಲು ಅಪ್ಪಣೆಯನ್ನು ಪಡೆದು ಕೊನೆಗೆ ಅವನನ್ನು ಡೇರೆಯಿಂದ ಹೊರಗೆ ಅಟ್ಟಿ ಬೆಚ್ಚಗೆ ಮಲಗಿದ ಒಂಟೆಯ ಕತೆಯು ಜೆಕೊಸ್ಲೊವೇಕಿಯ ಮತ್ತು ಹಿಟ್ಲರನ ಸುಡೇಟನ್ ಜರ್ಮನರಿಗೆ ಸಮನ್ವಯಿಸುತ್ತದೆ. ಬ್ರಿಟಿಷ್ ವಿದೇಶ ಧೋರಣೆಯು ತಾತ್ಕಾಲಿಕ ಶಾಂತಿಯನ್ನು ಪಡೆಯುವುದಿದ್ದರೂ, ಅಲ್ಪ ಕಾಲದಲ್ಲಿಯೇ ಪುನಃ ಅವ್ಯವಸ್ಥೆಯುಂಟಾಗುವಂತೆ ಮಾಡುವುದು ಅದರ "ವೈಶಿಷ್ಟ್ಯ"ಗಳಲ್ಲೊಂದಾಗಿದೆ.

○ ○ ○

## ಮಿಸ್ ಮೇಯೋ ಪಡೆ!

ಮಿಸ್. ಮೇಯೋ ಎಂಬ ಅಮೇರಿಕನ್ ತರುಣಿಯು ಭಾರತವನ್ನು ನಿಂದಿಸಿದ್ದು ಸಾಲದುದೆಂಬಂತೆ ಅಲಹಾಬಾದಿನ ಕ್ರಿಶ್ಚಿಯನ್ ಕಾಲೇಜಿನ ಅಧ್ಯಕ್ಷನಾಗಿದ್ದ ಡಾ| ಸ್ಯಾಮ್ ಹಿಗ್ಗಿನ್‌ಬಾತಮ್ ಎಂಬವನು ಅಮೇರಿಕದಲ್ಲಿ ಭಾರತದ ಕುರಿತು ದುಷ್ಪ್ರಚಾರಮಾಡುತ್ತಿದ್ದಾನೆ. ಇವನ ಹೇಳಿಕೆಯು 'ನ್ಯೂಯಾರ್ಕ್ ಟೈಮ್ಸ್" ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇವನ ವಾದಕ್ಕನುಸಾರವಾಗಿ -- ಅರೆಮರುಳು ಧರ್ಮಾನುಸರಣೆಯೇ ಭಾರತದ ದಾರಿದ್ರ್ಯಕ್ಕೆ ಕಾರಣ-ಮುಸ್ಲಿಮರ ದೇವರಿಗೆ ೯೯ ಹೆಸರುಗಳಿದ್ದರೂ ಒಂದೂ ದೇವರ ಹೆಸರೆಂದು ಹೇಳಲಾಗುವುದಿಲ್ಲ. ಗೋಪೂಜೆಯಿಂದಾಗಿ ಜನರು ಹಾಲು ಕರೆಯುವುದೇ ಇಲ್ಲ-೨೨೪ ಮಿಲಿಯ ದನಗಳು ಹುಲ್ಲು ನೀರುಗಳಿಲ್ಲದೆ ಸಾಯುತ್ತಿವೆ-ಪೈರಿಗೆ ಹಾನಿಕಾರಕವಾಗಿರುವ ಕ್ರಿಮಿಗಳನ್ನು ಅಹಿಂಸಾತತ್ವದಿಂದಾಗಿ ನಾಶಮಾಡುವುದಿಲ್ಲ—ಇವೇ ಮೊದಲಾದ ಶುದ್ಧ ಸುಳ್ಳುಗಳನ್ನು — ಭಾರತದ ನಿಜಪರಿಸ್ಥಿತಿಯೆಂದು ಇವನು ಹೇಳುತ್ತಿದ್ದಾನೆ. ಪ್ರಾಯಶಃ ಇವನು ಮಿಸ್ ಮೇಯೋ ಪಡೆಯವನಾಗಿರಬೇಕು.

○ ○ ○

## ಸೋವಿಯೆಟ್ ಜಪಾನ್ ಯುದ್ಧ?

ಟೋಕಿಯೊದಿಂದ ಕಳುಹಿಸಲ್ಪಟ್ಟ ವಾರ್ತೆಗನುಸಾರವಾಗಿ

ಮಂಚೂಕುವೊ ಗಡಿನಾಡಿಗಾಗಿ ಜಪಾನ್ ಮತ್ತು ರಷ್ಯದ ಸೈನ್ಯಕ್ಕೆ ಭೀಕರ ಯುದ್ಧವು ನಡೆಯುತ್ತಿದೆ. ಸೋವಿಯಟ್ ರಷ್ಯ ಮತ್ತು ಮಂಚೂಕೋವನ್ನು ಪ್ರತ್ಯೇಕಿಸುವ ಗಡಿನಾಡು ಈಗ ಜಪಾನಿಯರ ಕೈಯ್ಯಲ್ಲಿದೆಯೆಂದೂ, ರಷ್ಯದ ಸೈನಿಕರು ಹೊಡೆದೋಡಿಸಲ್ಪಟ್ಟರೆಂದೂ ಜಪಾನ್ ವಾರ್ತೆಯ ಸಾರ. ಇದರಲ್ಲಿ ಸತ್ಯಾಂಶವೆಷ್ಟೆಂಬುದು ಅರಿಯದಿದ್ದರೂ, ಮೋಸ್ಕೋವಿನ ಅಧಿಕಾರಿಗಳು 'ಜಪಾನಿನವರು ಎಚ್ಚರಿಕೆಯನ್ನೀಯದೆ ಯುದ್ಧ ಮಾಡಿದರು' ಎಂಬುದನ್ನು ಹೇಳಿರುವಾಗ ಈ ಯುದ್ಧವು ಇನ್ನಷ್ಟು ಪ್ರಬಲವಾಗುವುದೆಂದು ಕಾಣುತ್ತದೆ. ಈ ಸಂದರ್ಭದಲ್ಲಿ ಒಂದು ಪ್ರಾಮುಖ್ಯ ವಿಚಾರವನ್ನು ಹೇಳಬೇಕಾಗಿದೆ. ಜಪಾನ್ ಸೈನ್ಯಾಧಿಕಾರಿಗಳಲ್ಲಿ ಜಪಾನಿಯರಿಗೆ ಪೂರ್ಣಾಧಿಕಾರವಿರದೆ ಅವರೊಳಗೆ ಅಭಿಪ್ರಾಯ ವ್ಯತ್ಯಾಸಗಳುಂಟಾಗಿ ಸೈನ್ಯವೇ ಇಂದು ಜಪಾನಿನಲ್ಲಿ ಅಧಿಕಾರವನ್ನು ನಡೆಸುತ್ತಿದೆ. ಆದುದರಿಂದಲೇ ಜಪಾನ್ ಪತ್ರಿಕೆಗಳು ರಷ್ಯ-ಜಪಾನ್ ಯುದ್ಧದ ಯೋಗ್ಯಾಯೋಗ್ಯತೆಯ ಕುರಿತು ವಿಮರ್ಶಿಸಬಾರದೆಂದು ಅಲ್ಲಿಯ ಸರಕಾರವು ಆಜ್ಞೆಮಾಡಿರುವುದಾಗಿದೆ. ಚೀನದಲ್ಲಿ ಯುದ್ಧಮಾಡುತ್ತಿರುವಾಗ ಜಪಾನಿನ ಶಕ್ತಿಯನ್ನು ಹರಿದು ಹಂಚಿಹಾಕಿ ಪರಾಜಯವನ್ನಾಲಿಂಗಿಸುವುದು ವಿಹಿತವಲ್ಲವೆಂದು ಕಳೆದ ವಾರ ರಷ್ಯ-ಜಪಾನ್‌ಗಳು ಗಡಿನಾಡಿನ ತೀರ್ಮಾನ ಸಮಿತಿಯೊಂದನ್ನು ನೇಮಿಸಿದ ರಹಸ್ಯವಾಗಿದೆ. ಆದರೆ ಸೈನ್ಯವು ಸರಕಾರದ ಹತೋಟಿಯಲ್ಲಿಲ್ಲದಿರುವುದರಿಂದ ಈ ಅವ್ಯವಸ್ಥೆಯು ಮಂಚೂಕುವೊ ಗಡಿನಾಡಿನಲ್ಲಿ ತಲೆದೋರುವಂತಾಯಿತು. ಚೀನದ ಕಮ್ಯೂನಿಸ್ಟ್ ಸಂಗಡದವರು ಮಂಚೂಕುವೊದಲ್ಲಿ ಜಪಾನಿಗೆ ವಿರುದ್ಧವಾಗಿ ದಂಗೆಯೇಳುವ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಕಳೆದ ಎರಡು ಮೂರು ವಾರಗಳಿಂದ ರೈಲ್ವೇಸಾಲುಗಳು ಕಡಿದು ಹಾಕಲ್ಪಟ್ಟಿವೆ. ಜಿಹೋಲ್ ಎಂಬಲ್ಲಿ ಜಪಾನಿನ ಎರಡು ವಿಮಾನಗಳು ಗುಂಡೆಸೆಯಲ್ಪಟ್ಟುವೆಂದು ರಾಯಿಟರ್ ತಂತಿಯು ಹೇಳುತ್ತಿದೆ.

ಈ ಯುದ್ಧವು ಇನ್ನಷ್ಟು ಪ್ರಬಲವಾಗುತ್ತಾ ಬಂದರೆ ಯುರೋಪಿನ ರಾಷ್ಟ್ರಗಳೂ ಇದರಲ್ಲಿ ಕೈಹಾಕುವಂತಾಗಿ ಜಪಾನ್ ಎರಡು ವೈರಿ ರಾಷ್ಟ್ರಗಳೊಡನೆ ಯುದ್ಧ ಮಾಡುವ ಪ್ರಸಂಗವು ಬಂದೊದಗಬಹುದು. ಹೀಗಾದರೆ ಇದರಿಂದ ಚೀನಕ್ಕೆ ಸ್ವಲ್ಪ ಮಟ್ಟಿಗೆ ಪ್ರಯೋಜನವಿದೆಯೆಂದು ಹೇಳುವುದಕ್ಕೆ ಅಡ್ಡಿಯಿಲ್ಲ.

## ಪೆಲೆಸ್ಟೈನಿನ ವಿಭಜನಾ ಮಂಡಲ

ಪೆಲೆಸ್ಟೈನಿನ ಪರಿಸ್ಥಿತಿಯ ಕುರಿತು ವಿಚಾರಣೆ ಮಾಡಲು ಅಲ್ಲಿಗೆ ತೆರಳಿದ ಪೆಲೆಸ್ಟೈನ್ ವಿಭಜನಾ ಮಂಡಲಿಯು "ಪರಿಸ್ಥಿತಿಯ ಪರಿಪಾಠ" ಮಾಡಿಕೊಂಡು ಸೆಪ್ಟೆಂಬರ ೧೫ರೊಳಗೆ ಲಂಡನಿಗೆ ತೆರಳಲಿದೆ. ಬ್ರಿಟನಿನ ಈಗಿನ ಯೋಜನೆಗನುಸಾರವಾಗಿ ಬ್ರಿಟಿಷ್ ಸೈನ್ಯವು ಸರಕಾರದ ಪ್ರಭಾವವನ್ನು ಅರಬರಿಗೆ ಪೂರ್ಣವಾಗಿ ತೋರಿಸಿ, ಅಲ್ಲಲ್ಲಿಯ "ದಂಗೆ"ಗಳನ್ನು ನಿಲ್ಲಿಸಿ ಪೂರ್ಣಾಧಿಕಾರವನ್ನು ಹಹಿಸುವುದೆಂದು ಪ್ರಕಟಿಸಿದೆ. ಅರಬರು ಆ ಬಳಿಕವೂ ಯುದ್ಧ ಮಾಡಿದರೆ ಮತ್ತಷ್ಟು ಸೈನ್ಯವನ್ನು ಕಳುಹಿಸಿ "ಉಪಟಳ"ವನ್ನು ಸೈನ್ಯ ಬಲದಿಂದ ನಿಲ್ಲಿಸಲಾಗುವುದೆಂದೂ ಹೇಳಲಾಗಿದೆ. ಪೆಲೆಸ್ಟೈನಿನಲ್ಲಿ ಬ್ರಿಟಿಷರು ಅನುಸರಿಸಿದ ಧೋರಣೆಯು ಪ್ರಜಾಸತ್ತಾತ್ಮಕ ಸರಕಾರಕ್ಕೆ ಹೇಳಿಸಿದುದಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಅಖಿಲ ಭಾರತ ಮುಸ್ಲಿಮ್ ಲೀಗಿನವರು ಆಗೋಸ್ತು ೨೬ರಂದು ಪೆಲೆಸ್ಟೈನ್ ದಿನಾಚರಣೆಯನ್ನಾಚರಿಸಿ, ಬ್ರಿಟಿಷರ ದಬ್ಬಾಳಿಕೆಯ ಧೋರಣೆಯನ್ನು ಖಂಡಿಸಬೇಕೆಂದು ಬಿನ್ನವಿಸಿಕೊಂಡಿದ್ದಾರೆ. ಇಷ್ಟಲ್ಲದೆ ಪೆಲೆಸ್ಟೈನಿಗೂ ಇಂಗ್ಲೆಂಡಿಗೂ ಒಂದು ಪ್ರಬಲವಾದ ಡೆಪ್ಯುಟೇಶನನ್ನು ಕಳುಹಿಸಲಿದ್ದಾರೆ.

## ಚೀನಕ್ಕೆ ಭಾರತದ ವೈದ್ಯಕೀಯ ಮಂಡಲ.

ಡಾ|| ಮದನಮೋಹನ ಅಟಾಲರು ಸದ್ಯದಲ್ಲಿಯೇ ಚೀನಕ್ಕೆ ಭಾರತದ ವೈದ್ಯಕೀಯ ಮಂಡಲವನ್ನು ಕರೆದೊಯ್ಯಲಿದ್ದಾರೆ. ಸ್ಪೈನಿನಲ್ಲಿ ಹನ್ನೊಂದು ತಿಂಗಳುಗಳಿದ್ದು ಪ್ರಜಾಸತ್ತಾತ್ಮಕ ಸ್ಪೈನಿಗೆ ತನ್ನ ಕೈಲಾದ ಸಹಾಯವನ್ನು ಮಾಡಿದ್ದಾರೆ. ಯುದ್ಧರಂಗದಲ್ಲಿರುವ ಡಾಕ್ಟರರು ಬಾಂಬಿನ ಸ್ಫೋಟನವನ್ನು ಸದಾ ನಿರೀಕ್ಷಿಸಬೇಕಾಗುತ್ತದೆ. ಡಾ. ಅಟಾಲರು ನಿರ್ಭಯ ಸ್ವಭಾವದವರೆಂಬುದು ಅವರ ಸ್ಪೈನಿನ ಚಟುವಟಿಕೆಗಳಿಂದ ವ್ಯಕ್ತವಾಗುತ್ತದೆ. ಚೀನಕ್ಕೆ ವೈದ್ಯಕೀಯ ಮಂಡಲದೊಡನೆ ಅವರು ಕೆಲವು ಯಾಂತ್ರಿಕರನ್ನು, ಒಂದು ಶಸ್ತ್ರ ಕ್ರಿಯೆಯ ಮೋಟಾರನ್ನೂ ಕೊಂಡೊಯ್ಯಲಿದ್ದಾರೆ. ಈ ಮಂಡಲವನ್ನು ಕಳುಹಿಸುವುದರಿಂದ ಭಾರತವು ಚೀನಕ್ಕೆ ತನ್ನ ಸಹಾನುಭೂತಿಯನ್ನು ಕಾರ್ಯರೂಪದಲ್ಲಿ ತೋರಿಸಿದಂತಾಗುತ್ತದೆ.

# ಸ್ಪೈನ್ ವಿದ್ರೋಹಿಗಳ ಪರಾಜಯ

ಮುಸ್ಸೋಲಿನಿ ಹಿಟ್ಲರರ ಕೈಗೊಂಬೆಯಾದ ಜನರಲ್ ಫ್ರೇಂಕನು ತನ್ನ ಕೈಲಾದ ಯತ್ನವನ್ನು ಮಾಡುವುದಿದ್ದರೂ ಸ್ಪೈನಿನ ಪ್ರಜಾಸತ್ತಾತ್ಮಕ ಸರಕಾರವು ವಿದ್ರೋಹಿಗಳ ಧಾಳಿಯನ್ನು ಸಹಿಸಿಕೊಂಡು ಯಶಸ್ಸಿನ ಪಥದಲ್ಲಿ ಮುನ್ನಡೆಯುತ್ತಿರುವ ವಾರ್ತೆಯು ಎಲ್ಲಾ ಪ್ರಜಾಸತ್ತಾತ್ಮಕ ಜನರಿಗೆ ಸಂತೋಷದ ಸಂಗತಿಯಾಗಿದೆ. ನಿರಾಶರಾದ ವಿದ್ರೋಹಿಗಳ ಬೆಂಬಲಕ್ಕೆ ಇಟಲಿ ಜರ್ಮನಿಗಳಿಂದ ಸೈನ್ಯ ಸರಂಜಾಮುಗಳು ಎಡೆಬಿಡದೆ ಕಳುಹಿಸಲ್ಪಡುತ್ತಿವೆ. ಪ್ರಜಾಸತ್ತೆಯ ರಕ್ಷಕರೆಂದು ಹೇಳಿಕೊಳ್ಳುತ್ತಿರುವ ಬ್ರಿಟನ್ ಮತ್ತು ಫ್ರಾನ್ಸಿನ ಮುತ್ಸದ್ದಿಗಳು ರೋಮ್-ಬರ್ಲಿನ್ ಸಖ್ಯದ ಹೊಳಪಿಗೆ ಮರುಳಾಗಿ, ಅಯಥಾರ್ಥ ಧೋರಣೆಯನ್ನು ಅನುಸರಿಸಿ ಸುಮ್ಮಗಾಗಿವೆ. ಸ್ಪೈನಿನ ವಿದೇಶಾಂಗ ಮಂತ್ರಿಗಳಾದ ಸೀನರ್ ಡೆಲ್ ವಯೋರವರು ಸ್ಪಾನಿಷ್ ಜನರ ದೃಢ ಪ್ರತಿಜ್ಞೆಯನ್ನು ಈ ಕೆಳಗಿನಂತೆ ಸ್ಪಷ್ಟಗೊಳಿಸಿದ್ದಾರೆ. "ಪರದೇಶಗಳಿಂದ ಒಬ್ಬನೇ ಒಬ್ಬ ಬರುತ್ತಿರುವ ತನಕ ನಾವು ಹೋರಾಡುವುದು ಖಂಡಿತ. ವೆಲೆನ್ಸಿಯಾ ನಗರವಿದ್ದರೂ ಇಲ್ಲದಿದ್ದರೂ ನಮ್ಮ ಹೋರಾಟವನ್ನು ನಾವು ನಿಲ್ಲಿಸಲಾರೆವು. ಸ್ಪಾನಿಷ್ ಸರಕಾರದ ಪರವಾಗಿ ಮಿಕ್ಕುಳಿದವರೆಲ್ಲರೂ ಯುದ್ಧರಂಗದಲ್ಲಿ ವಿನಾಶಹೊಂದಿ ಒಬ್ಬನೇ ಒಬ್ಬ ಯೋಧನುಳಿದರೂ ಅವನು ಹೋರಾಡಿಯೇ ಮಡಿಯುವುದು ಖಂಡಿತ"

ಇತ್ತೀಚೆಗೆ ಸ್ಪಾನಿಷ್ ಸರಕಾರದವರು ಒಬ್ಬ ಇಟೇಲಿಯನ್ ಕೆಪ್ಟನನನ್ನು ಸೆರೆ ಹಿಡಿದು ಅವನಿಂದ ಇಟಲಿಯ ರಹಸ್ಯಗಳನ್ನು ತಿಳಿದಿದ್ದಾರೆ. ವೆಲೆನ್ಸಿಯ ಯುದ್ಧಕ್ಕಾಗಿ ಇಟಲಿ ಜರ್ಮನಿಗಳಿಂದ ಅಪಾರ ಯುದ್ಧಸಾಮಗ್ರಿಗಳು ಕಳುಹಿಸಲ್ಪಟ್ಟಿವೆಯೆಂದು ಅವನಿಂದ ಸರಕಾರಕ್ಕೆ ತಿಳಿದಿದೆ. ಸ್ಪೈನನ್ನು



ಸ್ಪೈನಿನ ಚತುರ ವಿದೇಶಾಂಗ ಮಂತ್ರಿಗಳಾದ
ಸೀನರ್ ಡೆಲ್‌ವಯೋರವರು
ಸ್ಪೈನ್ ಯುದ್ಧದಲ್ಲಿ ಸರಕಾರವು ಖಂಡಿತವಾಗಿಯೂ ವಿಜಯಹೊಂದುವುದೆಂದು ಹೇಳಿದ್ದಾರೆ.

ಎರಡು ವಿಭಾಗಗಳನ್ನಾಗಿ ಮಾಡಿದರೆ ನಂತರ ಸರಕಾರವು ಸೋಲುವುದು ನಿಶ್ಚಯವೆಂದು ಸರ್ವಾಧಿಕಾರಿಗಳ ಅಭಿಮತ. ಸೀನರ್ ಡೆಲ್‌ವಯೊರೊಡನೆ ವಿದೇಶದ ಸುದ್ದಿಗಾರರು ನಡೆಸಿದ ಮಾತುಕತೆಯನ್ನು ನೋಡುವಾಗ ಸರಕಾರಕ್ಕೆ ಜಯವು ಖಂಡಿತವಾಗಿಯೂ ಸಿಗುವುದೆಂದು ಹೇಳಬೇಕಾಗಿದೆ. ಅವರ ಅಭಿಪ್ರಾಯದಂತೆ ಸರಕಾರೀ ಪಕ್ಷದಲ್ಲಿ ಐಕ್ಯವು ಹೆಚ್ಚುತ್ತಿರುವಾಗ ವಿದ್ರೋಹಿಗಳೊಳಗೆ ಜಗಳವು ದಿನೇ ದಿನೇ ವರ್ಧಿಸುತ್ತಿದೆ. ಸ್ಪೈನ್ ಸರಕಾರವು ರಷ್ಯದ ಕೈಗೊಂಬೆಯಲ್ಲ,—ಜನತೆಗೆ ಚುನಾವಣೆಯ ಹಕ್ಕನ್ನು ಕೊಟ್ಟು ಅವರಿಗೆ ಬೇಕಾದ ಸರಕಾರವನ್ನು ರಚಿಸಲು ಅಧಿಕಾರವನ್ನೀಯುವುದು—ಆದುದರಿಂದ ಬ್ರಿಟಿಷರೇ ಮೊದಲಾದವರು ಸ್ಪೈನಿನ ಕುರಿತು ಅನ್ಯಥಾ ಭಾವಿಸಬಾರದೆಂದು ಡೆಲ್‌ವಯೋರವರು ವಿನಂತಿ ಮಾಡಿದ್ದಾರೆ. ಸೈನಿಕರಿಗೆ ಯುದ್ಧರಂಗದಲ್ಲಿಯೂ ವಿದ್ಯಾಭ್ಯಾಸವನ್ನು ಸರಕಾರವು ಒದಗಿಸುತ್ತಿದೆ. "ಯುದ್ಧದಲ್ಲಿ ಜಯಹೊಂದುವುದಕ್ಕಾಗಿ ಗುಂಡು, ವಿಜಯದ ಫಲವನ್ನುಣ್ಣುವುದಕ್ಕಾಗಿ ವಿದ್ಯೆ" ಎಂಬುದೇ ಅವರ ದಿನನಿತ್ಯದ ಮಾತಾಗಿದೆ. ಎರಡು ವರುಷಗಳಿಂದ ಸ್ಪೈನಿನಲ್ಲಿ ಯುದ್ಧವು ಎಡೆಬಿಡದೆ ನಡೆಯುತ್ತಿದ್ದರೂ ಸ್ಪೈನ್ ಸರಕಾರವು ಇಂದು ಜೀವಂತವಾಗಿದೆ. ಬಾರ್ಸೆಲೋನಾ, ವೆಲೆನ್ಸಿಯಾ, ಮೇದ್ರಿದ್" ಈ ಮೂರು ಪಟ್ಟಣಗಳು ಸರಕಾರದಲ್ಲಿ ಜನರಿಗಿರುವ ಅಭಿಮಾನವನ್ನು ವ್ಯಕ್ತಪಡಿಸುತ್ತಿವೆ. ಬ್ರಿಟನು ತನ್ನ ಅರೆಜೀವಾವಸ್ಥೆಯ ವಿದೇಶ ಧೋರಣೆಯನ್ನು ಬದಲಾಯಿಸಿ, ನ್ಯಾಯಬದ್ಧವಾದ ಸ್ಪೈನ್ ಸರಕಾರಕ್ಕೆ ಬೆಂಬಲವಿತ್ತರೆ ಯುರೋಪಿನ ಶಾಂತಿಗೆ ಕುಠಾರಪ್ರಾಯವಾದ ಶಕ್ತಿದ್ವಯವನ್ನು ಹಿಮ್ಮೆಟ್ಟಿಸಿದಂತಾಗುತ್ತದೆ.

# ಶಾಂತಿನಿಕೇತನ ಹಾಯರ್ ಎಲಿಮೆಂಟರಿ ಶಾಲೆ

ಕುರಾಡಿ (ದ. ಕನ್ನಡ.)

ನಿಮ್ಮ ಮಕ್ಕಳನ್ನು ನವಯುಗದ ನವೀನ ವಿದ್ಯೆಯು, ನವತರುಣರನ್ನಾಗಿ ಮಾಡಲು ನವೀನ ರೀತಿಯು ವೈಜ್ಞಾನಿಕ ವಿದ್ಯೆಯು, ವೈಭವದ ಬೀಡಾದ

ಶಾಂತಿನಿಕೇತನ ಹಾಯರ್ ಎಲಿಮೆಂಟರಿ ಶಾಲೆ ಕುರಾಡಿ

ಇಲ್ಲಿಗೆ ಇಂದೇ ಕಳುಹಿಸಿರಿ.

**ಹೊಸ ಕ್ಲಾಸುಗಳು ಪ್ರಾರಂಭವಾಗಿವೆ.**

---

***BROTHERLY LOVE*** ***HOMELY FEELINGS***

***AND***

***ELDERLY INSTRUCTIONS***

**is what you find in**

# Shanthinikethana School, Kurady

(S. Kanara)

Hence the most suitable and the best place for the education of your youngesters. For particulars writes to:

***MANAGER***

**SHANTHINIKETHANA, KURADY**

**BRAHMAVAR P. O.** (S. Kanara.)

---

# ಶಾಂತಿ ಸಂಗ್ರಹಾಲಯ

**ತ್ವರೆ ಮಾಡಿರಿ!** **ಒಮ್ಮೆ ಸಂದರ್ಶಿಸಿರಿ!!**

ಜೀವಮಾನದೊಳಗಾದರೂ ಕುರಾಡಿ ಶಾಂತಿನಿಕೇತನ ಶಾಲೆಯ ವಸ್ತುಸಂಗ್ರಹಾಲಯವನ್ನು ಒಮ್ಮೆ ಸಂದರ್ಶಿಸಿ ಜೀವನದ ದೃಷ್ಟಿ ಸಂಪತ್ತನ್ನು ಪಡೆಯಿರಿ.

---

# ಶಾಂತಿ ಸಮಸ್ಯೆ

ಇಂದೇ ಬರೆಯಿರಿ! ಬಂದೇ ಬರುವುದು!!

ಅಪಾರದ್ರವ್ಯ!!!

ಪ್ರತಿ ತಿಂಗಳೂ ಪ್ರಯತ್ನದಿಂದ ಶಾಂತಿ ಸಮಸ್ಯೆಗಳನ್ನು ತಪ್ಪದೆ ಬಿಚ್ಚಿರಿ.

**ಶಾಂತಿ ಸರ್ವಿಸ್, ಕುರಾಡಿ**

ಬ್ರಹ್ಮಾವರ ಪೋಸ್ಟ್ (ದ. ಕನ್ನಡ.)

# ಮಧ್ಯಪ್ರಾಂತ್ಯದ ನಾಟಕದ ನಾಟಕ.

## ಪ್ರಾಂತಿಕ ಸ್ವಾಯತ್ತೆಯ ಒಳಿತು--- ಕೆಡುಕುಗಳು.

**ಪಾತ್ರ ವಿವರ:-**

ಹೊಟ್ಟೆತುಂಬಾ ಊಟಮಾಡಿ ಆರಾಮ ಕುರ್ಚಿಯಲ್ಲಿ ಮಲಗಿಕೊಂಡ

**ಗಂಡ.**

ಸಮೀಪದಲ್ಲಿಯೇ ಇನ್ನೊಂದು ಆರಾಮ ಕುರ್ಚಿಯಲ್ಲಿ ಕುಳಿತುಕೊಂಡಿರುವ

**ಹೆಂಡತಿ.**

ಇವರಿಬ್ಬರೊಳಗೆ ನಡೆದ ಸಂಭಾಷಣೆಯ "ಏಕಾಂಕ ನಾಟಕ"ವಿದು.

ನಾಟಕಕಾರರು:-

**ಶ್ರೀ. ಹಯವದನರಾಯರು.**

●

(ಗಂಡಹೆಂಡಿರಿಬ್ಬರು ಊಟ ಮುಗಿಸಿ ಕುರ್ಚಿಯಲ್ಲಿ ಕುಳಿತುಕೊಂಡಿದ್ದಾರೆ ಆಗ ನಡೆಯುವ ಮಾತುಕತೆಯಿದು.)

ಶಾಂತಿ:— ಇತ್ತೀಚೆಗೆ ಮಂತ್ರಿಮಂಡಲಗಳ ಬಿಕ್ಕಟ್ಟು ಒಂದರ ಹಿಂದೊಂದು ಉಂಟಾಗುತ್ತಲೇ ಇದೆ.

ಶ್ಯಾಮ:— ಅಧಿಕಾರವು ಇದ್ದಲ್ಲಿ ಕಲಹವು ಇದ್ದೇ ಇದೆ. ಎಷ್ಟು ಸ್ವಾರ್ಥತ್ಯಾಗವೆಂದರೂ ಸ್ವಾರ್ಥದ ಕೈ ಯಾವಾಗಲೂ ಮೇಲಲ್ಲದೆ ಕೆಳಗಾಗುವಂತಿಲ್ಲ.

ಶಾಂತಿ:— ಹೌದಂತೇನೆ. ಮೊನ್ನೆ ಬಂಗಾಳದಲ್ಲಿ ಫಜ್ಲುಲ್ ಹಕ್ಕರು ನೌಶೇರ್ ಅಲಿಯವರನ್ನು ಹೊರಗೆ ಹಾಕಿದರು. ಸಿಂಧ ಪ್ರಾಂತ್ಯದಲ್ಲಿ ಈಗ ಬಿಕ್ಕಟ್ಟಿನ ಬಂಧವು ಸ್ವಲ್ಪ ಸಡಿಲಾಗಿದೆ. ಈಗ ಕಾಂಗ್ರೆಸ್ ಪ್ರಾಂತ್ಯವಾದ ಮಧ್ಯಪ್ರಾಂತ್ಯದಲ್ಲಿ ಕೂಡಾ ಬಿಕ್ಕಟ್ಟು.

ಶ್ಯಾಮ:— ಕಾಂಗ್ರೆಸ್ ಪ್ರಾಂತ್ಯವಾದರೇನು? ಕಾಂಗ್ರೆಸಿನಲ್ಲಿರುವವರು ಮನುಷ್ಯರಲ್ಲವೆ?

ಶಾಂತಿ:— ಅವರು ಮನುಷ್ಯರಾದರೆ ಕಾಂಗ್ರೆಸ್ ಶಿಸ್ತನ್ನು ಮುರಿದು ಹಾಕಬೇಕೆಂದಿಲ್ಲ. ಡಾ| ಖಾರೆಯವರು ಮಾಡಿದ್ದು ಶುದ್ಧ ಅನ್ಯಾಯವಲ್ಲವೆ?

ಶ್ಯಾಮ:—ನಿನಗೇನು ಗೊತ್ತು ಶಾಂತಿ. ವರ್ತಮಾನ ಪತ್ರಿಕೆಗಳಲ್ಲಿ ಬಂದದ್ದನ್ನೇ ನಂಬಿ ಸುಮ್ಮನೆ ಕುಳಿತರೆ ನಿಜಸ್ಥಿತಿಯು ತಿಳಿಯುವುದುಂಟೆ? ಸ್ವಲ್ಪ ತಲೆ ಖರ್ಚು ಮಾಡಬೇಕು.

ಶಾಂತಿ:—ಹೌದು, ನೀವು ಗಂಡಸರು ಭಾರೀ ತಲೆಯಿದ್ದವರು. ನಮಗೆ ತಲೆಯೇ ಇಲ್ಲ. ಅಲ್ಲ. ಡಾ| ಖಾರೆಯವರು ಮಾಡಿದ್ದು ಪೂರಾ ಯೋಗ್ಯವಾದ್ದು!

ಶ್ಯಾಮ:—ಕಾಂಗ್ರೆಸಿನ ಧುರೀಣರು ಕಾಂಗ್ರೆಸ್ ಪಕ್ಷದ ಕಾರ್ಯಕಲಾಪಗಳಲ್ಲಿ ಹಾಗೆ ಕೈಹಾಕಿದರೆ ಆಗುವುದೇ ಹಾಗೆ. ನೋಡು. ಯಾವುದಾದರೊಂದು ಮಸೂದೆಯಾಗಬೇಕಾದರೆ ಅವರನ್ನು ಕೇಳಬೇಕು. ಮೊನ್ನೆ ಸಂಯುಕ್ತ ಪ್ರಾಂತ್ಯದ ಜಮೀನಾರೀ—ಸರಕಾರೀಚರ್ಚೆಯನ್ನು ಮುಗಿಸಲು ಅವರಿಗೆ ಸಾಧ್ಯವಿಲ್ಲ. ಅದಕ್ಕೆ ಆಝಾದರೋ ವಲ್ಲಭ್ಭಾಯವರೋ ಬರಬೇಕಾಯಿತು. ಹೀಗಾದರೆ ಪ್ರಜಾಸತ್ತೆಯೆಲ್ಲಿ? ಎಸೆಂಬ್ಲಿಯಲ್ಲಿ ಜವಾಬ್ದಾರೀ ಸದಸ್ಯರಿಲ್ಲವೇ? ತಮ್ಮ ಆಳ್ವಿಕೆಯನ್ನು ಅವರಿಗೆ ನಡೆಸಲಾಗದಿದ್ದರೆ ಅವರಿಗೆ ಸದಸ್ಯತನವೇಕೆ? ಹೀಗೆಲ್ಲಾ ಧುರೀಣರು ವರ್ತಿಸುವುದಕ್ಕೆ ಅರ್ಥವಿದೆಯೇ? ಅಲ್ಲ, ಅವರು ಯೋಗ್ಯಭಾವನೆಯಿಂದಲೇ ಹಾಗೆ ವರ್ತಿಸುತ್ತಾರಾದರೂ ಯಾವಾಗಲೂ ಅವರಂಥವರು ರಾಜಿ ಮಾಡಲು ಬರುತ್ತಾರೆಯೇ? ಹಿಟ್ಲರ್ ಮುಸ್ಸೋಲಿನಿಯರನ್ನು ಬೈಯ್ಯುವ ನಾವು ಈ ತರದ ಶಾಂತ ಸರ್ವಾಧಿಕಾರವನ್ನು ಸಹಿಸುವುದೆ?

ಶಾಂತಿ:— ಹೌದು. ಅವರು ಪಾರ್ಲಿಮೆಂಟರಿ ಸಬ್ ಕಮಿಟಿಯ ಸದಸ್ಯರಲ್ಲವೆ? ಅವರಿಗೆ ಆ ಹಕ್ಕುಗಳಲ್ಲದೆ ಮತ್ತಾರಿಗಿರುವುದು?

ಶ್ಯಾಮ:— ಶಾಂತೀ, ನಿನಗೆ ಹುಚ್ಚು. ಈ ಕಮಿಟಿಗಳನ್ನು ಮಾಡುವರಾರು? ಅವರೆ! ಪ್ರಜಾಸತ್ತೆಯ ಹೆಸರಲ್ಲಿ ಆಳುವುದು ಕೆಲವರು. ಅದು ಭಾರತದಲ್ಲಿ ಮಾತ್ರವಲ್ಲ. ಎಲ್ಲಾ ರಾಷ್ಟ್ರಗಳಲ್ಲೂ ಹಾಗೆಯೆ.

ಶಾಂತಿ:— ನಿಮ್ಮ ಆ ತತ್ವ ಹಾಗಿರಲಿ, ಮಧ್ಯಪ್ರಾಂತವು ಇವತ್ತಿನದಲ್ಲ. ಯಾವಾಗಲೂ ಹಾಗೆಯೇ. ಮೊದಲು ಡಾ| ಇ. ರಾಘವೇಂದ್ರರಾಯರು, ಡಾ| ಮೂಂಜಿಯವರೇ ಮೊದಲಾದವರು ಅಲ್ಲಿ ಕಾಂಗ್ರೆಸಿಗೆ ಮೋಸ ಕೊಟ್ಟು ಅದರ ಗೌರವಕ್ಕೆ ಹಾನಿಯನ್ನುಂಟುಮಾಡಿದ್ದಾರೆ. ಇತ್ತೀಚೆಗೆ ಡಾ| ಖಾರೆಯವರೂ ಅವರ ಸಾಲಿಗೆ ಸೇರಿದರು.

ಶ್ಯಾಮ:— ನೀನು ಡಾ| ಖಾರೆಯವರನ್ನು ಮಾತ್ರ ಬೈದು ಪ್ರಯೋಜನವಿಲ್ಲ. ಮಧ್ಯಪ್ರಾಂತ್ಯದ ಮಂತ್ರಿಮಂಡಲವು ಇಷ್ಟರತನಕ ಶಾಂತವಾಗಿ ನಡೆಯುತ್ತಿದ್ದಿಲ್ಲ. ಪ್ರತಿಯೊಬ್ಬ ಮಂತ್ರಿಗಳೂ ಒಬ್ಬರನ್ನೊಬ್ಬರು ಬೈದುಕೊಳ್ಳುತ್ತಿದ್ದರು. ಪ್ರತಿಯೊಬ್ಬರಿಗೂ ಪ್ರಾಧಾನ್ಯತೆಬೇಕಿತ್ತು. ಒಬ್ಬರು ಹೇಳಿದ್ದಕ್ಕೆ ಮತ್ತೊಬ್ಬರ ವಿರೋಧ.

ಶಾಂತಿ:— ಹಾಗಾಗಲು ಕಾರಣವೇನು? ಅವರೊಳಗೆ ಅಷ್ಟು ವೈಷಮ್ಯವಿದ್ದರೆ ಮಂತ್ರಿಮಂಡಲವನ್ನು ರಚಿಸುವಾಗಲೆ ಅದನ್ನು ಯೋಚಿಸಬೇಡವಿತ್ತೆ?

ಶ್ಯಾಮ.— ಹೌದು. ಯೋಚಿಸಬೇಕಿತ್ತು. ಆದರೆ ಪ್ರಾಂತೀಯತೆಯೇ ಮೊದಲಾದ ಹಲವು ತೊಂದರೆಗಳು ಆಗಾಗ ತಲೆಯೆತ್ತುತ್ತಿರುತ್ತವೆ. ಕಳೆದ ಬಾರಿ ವೈಷಮ್ಯವುಂಟಾದಾಗ ಪಾಚ್ಮಾರಿಯಲ್ಲಿ ಸರ್ದಾರ್ ಪಟೇಲರು ಈ ಕುರಿತು ಯೋಚಿಸಬೇಕಿತ್ತು. ಪಾಚ್ಮಾರಿಯ ಚರ್ಚೆಯಿಂದಾಗಿ ಹಲವು ಮಂತ್ರಿಗಳ ಮನನೊಂದಿದೆ.

ಶಾಂತಿ:— ಪಾಚ್ಮಾರಿಯಲ್ಲಿ ಏನಾಯಿತು?

ಶ್ಯಾಮ:— ಪಾಚ್ ಮಾರಿಯಲ್ಲಿ ಆದದ್ದೇನ – ಸರ್ದಾರ್ ಪಟೇಲರು ಮಂತ್ರಿಗಳೊಳಗೆ ರಾಜಿಮಾಡಿಹಾಕಿದ್ದು. ಆ ರಾಜಿಯಿಂದ ಹೊರಗಿನವಟ್ಟಿಗೆ ಪರಿಸ್ಥಿತಿಯು ಶಾಂತವಾದರೂ ಅವರೊಳಗಿನ ಜಗಳವು ಮಾತ್ರ ನಿಲ್ಲಲಿಲ್ಲ. ಸರ್ದಾರ್ ಪಟೇಲರ ಸರ್ವಾಧಿಕಾರಿತ್ವದಿಂದ ಕೆಲವು ಮಂತ್ರಿಗಳ ಮುಖಕ್ಕೆ ಕರಿಬಳಿದಂತಾಯಿತು. ಪತ್ರಿಕೆಗಳು ಕೂಡಾ ಹಾಗೆಯೇ. "ಈ ಮಂತ್ರಿಗಳು ಅವರ ಸಂಬಂಧಿಕರಿಗೆ ಕೆಲಸ ಕೊಟ್ಟರು.—" ಎಂದು ಬೆಟ್ಟೆತ್ತಿ ತೋರಿಸಲಾರಂಭಿಸಿದುವು. ಇತರರೊಡನೆ ಮಾತಾಡುವಾಗ ಅವರು ನಿದರ್ಶನಗಳಾಗಿ ಉಪಯೋಗಿಸಲ್ಪಟ್ಟರು. ಹೀಗೆ ಜಗಳವುಂಟಾಯಿತು. ಇಷ್ಟುಮಾತ್ರವಲ್ಲ, ಕೆಲವು ಮಂತ್ರಿಗಳು ಹೀಗೆ ಭಾವಿಸಲಾರಂಭಿಸಿದರು. ನಾವು ಪ್ರಜಾಸತ್ತಾತ್ಮಕ ವಿಧಾನವನ್ನನುಸರಿಸುವಾಗ ಹೊರಗಣ ಆಜ್ಞೆಗೆ ತಲೆಯನ್ನೇಕೆ ತಗ್ಗಿಸಬೇಕು. ಸಮಸ್ತಭಾರತವನ್ನೇ ತಮ್ಮ ಆಳ್ವಿಕೆಗೊಳಪಡಿಸಿದ ಮರಾಠರು, ಧೀರಮರಾಠರಾದ ನಾವು ಅವರಿಗೇಕೆ ಬಗ್ಗಬೇಕು? ಗುಜರಾತಿನ ಸರ್ವಾಧಿಕಾರಿಗೆ ಅದೇಕೆ ತಲೆತಗ್ಗಿಸಬೇಕು? ನಮ್ಮ ಪ್ರಾಂತ್ಯದಲ್ಲಿ ನಾವು ಸ್ವತಂತ್ರರಾಗಿರಬಾರದೆ? ಬ್ರಿಟಿಷರಂತೆ ಗುಜರಾತೀ ಸರ್ವಾಧಿಕಾರಿಗಳಿಗೆ ನಮ್ಮ ಪರಿಸ್ಥಿತಿಯು ತಿಳಿಯುವುದಿಲ್ಲ. ಆದುದರಿಂದ ಒಬ್ಬಿಬ್ಬರಿಗೆ ನಾವೇಕೆ ಬಗ್ಗಬೇಕು? ಬೆದರಬೇಕು? ಹೀಗೆ ಭಾವಿಸಿದರು ಕೆಲವರು.

ಶಾಂತಿ:— ಇದಕ್ಕೆ ಡಾ| ಖಾರೆಯವರು ಹಾಗೆಮಾಡಿದ್ದೇಕೆ? ಹಾಗಾದರೆ ಪಾಚ್ ಮಾರಿಯ ನಿರ್ಣಯವು ಅವರಿಗೆ ವಿರೋಧವಾಗಿತ್ತೆ?

ಶ್ಯಾಮ:— ಪರಿಸ್ಥಿತಿಯು ಹಾಗಿಲ್ಲದಿದ್ದರೂ ಪಾಚ್ ಮಾರಿಯ ಸಭೆಯಿಂದಾಗಿ ಅಂದಿನ ಕಾರ್ಯಕ್ರಮಗಳು ಡಾ| ಖಾರೆಯವರ ಖಂಡನೆಗಾಗಿಯೇ ಮಾಡಲ್ಪಟ್ಟವುಗಳೆಂದು ಅವರು ತಿಳಿದುಕೊಂಡರು. ಅವರಿಗೆ ಯಾವ ಕೆಲಸವನ್ನೂ ಕೊಡದೆ ಕೇವಲ ಮೇಲ್ವಿಚಾರ ನಡೆಸುವ ಪ್ರಧಾನಮಂತ್ರಿಯನ್ನಾಗಿ ಮಾಡುವುದೆಂದು ಇತರರು ಯೋಚಿಸಿದರು. ಡಾ| ಖಾರೆಯವರೇ ಹೀಗೆ ಯೋಚಿಸಿದರೆ ಚಿಂತೆಯಿದ್ದಿಲ್ಲ. ಆದರೆ ಇತರರು ಡಾ| ಖಾರೆ ಹಾಗೆ ಮಾಡಬೇಕು, ಹೀಗೆಮಾಡಬೇಕು ಎನ್ನುವುದರ ಅರ್ಥವೇನು? ಅವರು ಕೇಳಲಿಲ್ಲ. ಈ ಸೂಚನೆಯನ್ನು ಕೇಳಿದೊಡನೆಯೇ ಅವರಿಗೆ ಕೋಪಬಂತು. ಇತ್ತಂಡಗಳಲ್ಲಿ ಹಳೆ ಮರಾಠಾ, ಮಹಾಕೋಸಲ ಪ್ರಶ್ನೆಯುತ್ಪನ್ನವಾಯಿತು. ಪ್ರಾಂತೀಯತೆಯು ಜಾತೀಯತೆಯು ತಮ್ಮ ಎಂದೆನ್ನುವಂತೆ, ಪ್ರಾಂತೀಯತೆಯ ಭೂತವು ಮಾಟಮಾಡಲಾರಂಭಿಸಿತು. ಇದರಿಂದಾಗಿ ರಾಷ್ಟ್ರೀಯತೆಯ ಮರಳ ಮನೆಯು ಕಲಹದ ಬಿರುಗಾಳಿಯಿಂದ ಉರುಳಿ ಬಿತ್ತು. ಬಿಕ್ಕಟ್ಟುಂಟಾಯಿತು.

ಶಾಂತಿ:— ಹಾಗಾದರೆ ಇತ್ತಂಡದವರದೂ ತಪ್ಪಿದೆ.

ಶ್ಯಾಮ:— ಹೌದು. ನವರಾಜ್ಯ ಘಟನೆಯ ಅಧಿಕಾರದ ಮಹಿಮೆಯಿದು. ಪ್ರತಿಯೊಬ್ಬರಲ್ಲಿಯೂ ಅಧಿಕಾರಲಾಲಸೆಯು ಇದ್ದೇ ಇದೆ. ಹನುಮಂತನು ವಾನರಸೇನೆಯ ಬಲದಿಂದ, ಅವರೊಳಗಿದ್ದ ಐಕ್ಯದ ದೆಸೆಯಿಂದ ಮಹತ್ಕಾರ್ಯಗಳನ್ನು ಮಾಡಿರುವುದನ್ನು ರಾಮಾಯಣ ವಾಚನದ ಬಳಿಕ ಕೇಳಿ ಭಾರತೀಯರು "ಓಹೋ" ಎನ್ನಬಹುದು. ಆದರೆ ನಮ್ಮಲ್ಲಿ ನಿಜವಾಗಿಯೂ ಒಟ್ಟುಗೂಡಿ ಕೆಲಸಮಾಡುವ ಸ್ವಭಾವವಿದೆಯೆ? ಸರ್ದಾರ್ ವಲ್ಲಭಭಾಯಿಯವರು ಶುದ್ಧ ಸರ್ವಾಧಿಕಾರಿಗಳಂತೆಯೇ ವರ್ತಿಸುತ್ತಾರೆ.

ಶಾಂತಿ:— ಸುಮ್ಮನೆ ಹೇಳಿದರಾಯಿತೆ? ಅವರು ಎಲ್ಲಿ ಸರ್ವಾಧಿಕಾರಿಗಳಂತೆ ವರ್ತಿಸಿದ್ದಾರೆ.

ಶ್ಯಾಮ:— ಅದಕ್ಕೆ ಉದಾಹರಣೆಗಳನ್ನು ಕೊಡಬೇಕೆಂದಿಲ್ಲ, ಸರ್ವಾಧಿಕಾರಿಗಳಂತಲ್ಲದೆ ಬೇರಾವ ವಿಧದಲ್ಲಿ ವರ್ತಿಸಲೂ ಅವರಿಗರಿಯುವುದಿಲ್ಲ. ಇಲ್ಲದಿದ್ದರೆ ಮೊನ್ನೆ ವಾರ್ಧದಲ್ಲಿ ಗವರ್ನರರು ಡಿಸ್‌ಮಿಸ್ ಮಾಡಿದ ಮೂರು ಮಂತ್ರಿಗಳ ಪೈಕಿ ಶ್ರೀ. ರವಿಶಂಕರ ಶುಕ್ಲರನ್ನು ಅದೇಕೆ ಪ್ರಧಾನ ಮಂತ್ರಿಗಳಾಗಿ ಮಾಡಲೆತ್ನಿಸಿದ್ದು?

ಶಾಂತಿ:— ಓಹೋ ನಿಮಗದು ಗೊತ್ತಿಲ್ಲ. ನಿಮ್ಮ ಡಾ| ಖಾರೆಯವರು ಗವರ್ನರ್ ವಯ್ಲಿಯವರು ಹೇಳಿದಂತೆ ಕುಣಿಯುತ್ತಿದ್ದರು. ಯುರೋಪಿಯನ್ ಆಫೀಸರರು ಹೇಳಿದರೆಂದರೆ ಮುಗಿಯಿತು. ಅದು ಜಾರಿಗೆ ಬಂದಂತೆಯೆ! ಕಾಂಗ್ರೆಸ್ ಮಂತ್ರಿ ಹೀಗಿರುವುದೇ? ಅದಂತಿರಲಿ.

ಶ್ಯಾಮ:— ಸುಮ್ಮನೆ ಸಿಕ್ಕಿದ್ದಕ್ಕೆಲ್ಲಾ ಹೊಡಿಯುವುದು ಬೇಡ. ನಿನಗೆ ಮತ್ತೇನು ಗೊತ್ತಿದೆ. ವಾದಿಸಿದರೆ ಸಾಲದು. ಅದಕ್ಕೆ ಅರ್ಥವಿರಬೇಕು.

ಶಾಂತಿ:— ಹೌದು. ನಿಮಗೆ ಮಾತ್ರ ಅರ್ಥವಿದ್ದು ವಾದಿಸಲಿಕ್ಕೆ ತಿಳಿಯುವುದು. ಮೊನ್ನೆಯ ಖಾರೆ ನಾಟಕ ಮಾಡಿಸಿದವರೇ ಅಲ್ಲಿಯ ಗವರ್ನರ್ ವಯ್ಲಿಯವರು. ಈ ಸಾಮ್ರಾಜ್ಯಶಾಹಿಯ ಏಜಂಟರು ಗವರ್ನರರ ಹಾದಿಯಲ್ಲಿ ಕುಳಿತುಕೊಂಡು, ಮಂತ್ರಿಗಳೊಳಗಿನ ಜಗಳವನ್ನು ಮತ್ತಷ್ಟು ಹೆಚ್ಚಿಸಿ, ಮೆಲ್ಲನೆ ಮೂರು ಜನರನ್ನು ಡಿಸ್‌ಮಿಸ್ ಮಾಡಿ, ಸವಿಮಾತುಗಳನ್ನಾಗಿ ನಾನು ಘಟನಾತ್ಮಕವಾಗಿ ನಡೆದೆನೆಂದು ಅವರೊಡನೆ ಹೇಳಿ ಗಾಂಧಿಜಿಯವರು ಮಾಡುವಂತಹ ಪ್ಲೇನನ್ನೇ ಮಾಡಿಬಿಟ್ಟಿದ್ದಾರೆ. ಕಾಂಗ್ರೆಸಿನ ಪರವಾಗಿ ಆ ಗವರ್ನರರು ತನ್ನ ವಿಶೇಷಾಧಿಕಾರವನ್ನು ಉಪಯೋಗಿಸಿದರು! ಇದಕ್ಕಿಂತಲೂ ದೊಡ್ಡ ಆಶ್ಚರ್ಯವಿದೆಯೆ? ಕಾಂಗ್ರೆಸಿನ ಪ್ರಧಾನರು ರಾಜಿಕೊಡುವಾಗ ಇವರೊಡನಿದ್ದ ಮೂರು ಮಂದಿ ರಾಜಿ ಕೊಡಬೇಡವೆ? ಈ ಕುಯುಕ್ತಿ, ಈ ಕಹಿಗುಳಿಗೆಯನ್ನು ಕಾಂಗ್ರೆಸಿಗೆ ನುಂಗುವುದು ಬಹಳ ಕಷ್ಟವಾಗಿದೆ.

ಶ್ಯಾಮ:—ಏನಾಯಿತು. ನಿನ್ನ ಲೆಕ್ಚರ್ ಬೇಡ.

ಶಾಂತಿ:—ಲೆಕ್ಚರಲ್ಲ, ಆ ಗವರ್ನರರಿಗೆ ಬುದ್ಧಿ ಕಲಿಸಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಡಿಸ್‌ಮಿಸ್ ಮಾಡಿದ ಮೂರು ಮಂತ್ರಿಗಳ ಪೈಕಿ ಒಬ್ಬರಾದ ಶ್ರೀ–ರವಿಶಂಕರರ ಶುಕ್ಲರನ್ನೇ ಪ್ರಧಾನ ಮಂತ್ರಿಗಳನ್ನಾಗಿ ಮಾಡುವಂತೆ ಅವರನ್ನೇ ಸ್ವಾಗತಿಸಬೇಕೆಂದು ಡಾ| ಖಾರೆಯವರ ಮೂಲಕ ತಿಳಿಸಿದರು. ಇದರಿಂದ ಗವರ್ನರರಿಗೆ ಬುದ್ಧಿಕಲಿಸಿದಂತಾಗಲಿಲ್ಲವೆ?

ಶ್ಯಾಮು:—ಓ್ಹ! ಎಂಥ ಬುದ್ಧಿಯಿದು! ಇಂಗ್ಲಿಷ್ ಜನರು ಆನೆಗಳಂತೆ ದಪ್ಪ ಚರ್ಮದವರು. ಅವರಿಗೆ ಥಕ್ಕನೆ ಯಾವುದೂ ನಾಟುವುದಿಲ್ಲ. ಡಾ| ಖಾರೆಗೆ ಬಹುಮತವಿರುವಾಗ—

ಶಾಂತಿ:—ಏನಂದಿರಿ! ಬಹುಮತ! ಎಲ್ಲಿಯ ಬಹುಮತ? ವಾರ್ಧದಲ್ಲಿ ಅವರಿಗೆ ಬಹುಮತ ದೊರಕಿತೇ? ೪೬ ಮಂದಿ ಶುಕ್ಲರಿಗೆ ಲೀಡರರಾಗಲು ಮತಕೊಡಲಿಲ್ಲವೆ?

ಶ್ಯಾಮು:— ಓ್ಹ. ಭಾರಿ ಮತ. ಮತ! ಎಂಥ ಮತ. ಅವರ ಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷರಾದ ಬೋಸರು ಬಂದು ಕೂತುಕೊಳ್ಳುವುದೆ? ಮಹತ್ಮಾಗಾಂಧಿಯವರು ಕೂತುಕೊಳ್ಳಬಾರದಿತ್ತೆ? ಯಾಕೆ? ಶ್ರೀಮತಿ ದುರ್ಗಾಬಾಯಿ ಜೋಶಿಯವರು ಎದ್ದುನಿಂತು— ಕಾಂಗ್ರೆಸ್ ಅಧ್ಯಕ್ಷರು ಅಧ್ಯಕ್ಷರಾದರೆ ಅದು ಸರಿಯಾಗುವುದಿಲ್ಲ. ಸ್ವತಂತ್ರವಾಗಿ ಮತಗಳನ್ನು ಕೊಡಲು ತೊಂದರೆಯಾಗುತ್ತದೆಂದು ಹೇಳಲಿಲ್ಲವೆ? ಅದಕ್ಕೆ ಅಧ್ಯಕ್ಷರು ಪಾರ್ಲಿಮೆಂಟರಿ ಸಬ್ ಕಮಿಟಿಗೆ ಮೇಲ್ವಿಚಾರ ನಡೆಸುವ ಅಧಿಕಾರವಿದೆಯೆಂದು ಹೇಳಲಿಲ್ಲವೆ? ಇದು ವರ್ಕಿಂಗ್ ಕಮಿಟಿಯ ಪ್ಲೇನ್! ಇಲ್ಲದಿದ್ದರೆ ಸುಭಾಷ ಬೋಸರು ಅದರ ಅಧ್ಯಕ್ಷರಾದುದೇಕೆ?

ಶಾಂತಿ:— ಛೆಛೆ! ಸುಭಾಷಬೋಸರು ಹಾಗೆ ವಲ್ಲಭ್ಭಾ ಮೊದಲಾದವರು ಹೇಳುವ ಹಾಗೆ ಕುಣಿಯುವವರಲ್ಲ.

ಶ್ಯಾಮು:— ಸಾಕು ಸಾಕು. ಸುಭಾಷ ಬೋಸರಲ್ಲ. ಕೆಂಡದಂತಿರುವ ಜವಾಹರಲಾಲರ ತಲೆಯ ಮೇಲೆ ಕೈಯಿಟ್ಟದ್ದೇ ತಡ. ಅವರು ಹಿಮಗಡ್ಡೆಯಂತೆ ತಣ್ಣಗಾಗಿದ್ದಾರೆ. ಬೋಸರೂ ಹಾಗೆಯೇ! ಫೆಡರೇಶನಿನ ಕುರಿತು ಮೊನ್ನೆ ಮಾತಾಡುವಾಗ ಹಾಗೆ ಮಾಡ್ತೇನೆ, ಹೀಗೆ ಮಾಡ್ತೇನೆಂದು ಹೇಳಿರಬಹುದು. ನೋಡು, ನಾಡದು ಕೆಲವು ವ್ಯತ್ಯಾಸಗಳೊಂದಿಗೆ ಫೆಡರೇಶನ್ನು ಕೊಡುವಾಗ ಎಲ್ಲರೂ ಪ್ರಾಂತಿಕ ಸ್ವಾಯತ್ತೆಯಂತೆ ಸುಮ್ಮನೆ ಕೊತುಕೊಂಡು ತೆಗೆದುಕೊಳ್ಳಲಿಕ್ಕುಂಟು.

ಶಾಂತಿ:—ಹೌದಲ್ಲಾ, ಆ ವಿಠಲಭ್ಭಾ ಪಟೇಲರ ವೀಲಿನ ವಿಚಾರವೇನಾಯಿತು.

ಶ್ಯಾಮು:—ಆಗುವುದೇನು? ಸುಭಾಷ ಬೋಸರ ಕಡೆಯವರು ಅದು ವಿದೇಶಗಳಲ್ಲಿ ಕಾಂಗ್ರೆಸಿನ ಪ್ರಚಾರ ಮಾಡಲಿಕ್ಕಾಗಿ ವಿಠಲಭ್ಭಾಯವರು ಅದನ್ನು ವೀಲ್ ಮಾಡಿ ಸುಭಾಷರಿಗೆ ಕೊಟ್ಟಿದ್ದೆನ್ನುತ್ತಾರೆ. ಆದರೆ ವಲ್ಲಭ್ಭಾಯಿಗಳ ಕಡೆಯವರು ಅದು ಕಾಂಗ್ರೆಸಿಗೆ ಕೊಟ್ಟದ್ದು. ಅದನ್ನು ಹರಿಜನ ಫಂಡಿಗೆ ಕೊಡಬೇಕೆಂದೆನ್ನುತ್ತಾರೆ. ಒಟ್ಟಾರೆ ಗಡಿಬಿಡಿ.

ಶಾಂತಿ:—ಹಾಗಾದರೆ ಇದರ ವಿಮೋಚನೆ ಹೇಗೆ?

ಶ್ಯಾಮು:—ವರ್ಕಿಂಗ್ ಕಮಿಟಿಯು ಇದರ ನಿಶ್ಚಯಮಾಡಬಹುದು. ಎಲ್ಲದಕ್ಕೂ ವರ್ಕಿಂಗ್ ಕಮಿಟಿ. ಆದರೆ ಮಧ್ಯಪ್ರಾಂತ್ಯದ ಪ್ರಶ್ನೆ ಮಾತ್ರ ಮುಗಿಯುವಂತಿಲ್ಲ.

ಶಾಂತಿ:—ಅದೇಕೆ ಮುಗಿಯಲಿಕ್ಕಿಲ್ಲ? ವರ್ಕಿಂಗ್ ಕಮಿಟಿಯು ಬೇರೆ ಲೀಡರರನ್ನು ನೇಮಿಸಲಿಲ್ಲವೆ?

ಶ್ಯಾಮು:— ನೇಮಿಸಿದರೇನಾಯಿತು? ಶುಕ್ಲ ಮಂತ್ರಿಮಂಡಲವು ಮೂರು ತಿಂಗಳುಗಳಿಗಿಂತ ಹೆಚ್ಚು ಬಾಳಲಾರದೆಂದು ಡಾ| ಖಾರೆಯವರು ಮೊನ್ನೆ ಪತ್ರಿಕೋದ್ಯಮಿಯೊಡನೆ ಹೇಳಲಿಲ್ಲವೇ?

ಶಾಂತಿ:—ಏನಾಯಿತು ಹೇಳಿದರೆ?

ಶ್ಯಾಮು:—ಆಗುವುದೇನು? ಬೆಂಕಿ ಇಲ್ಲದೆ ಹೊಗೆ ಬರುವುದಿಲ್ಲ. ತತ್ಕಾಲಕ್ಕೆ ಧುರೀಣರು ತಮ್ಮ ವರ್ಚಸ್ಸಿನಿಂದ ಈ ಪ್ರಶ್ನೆಗೆ ಇತಿಶ್ರೀ ಹಾಕಿದರೆ ಪ್ರಾಂತ್ಯದೊಳಗಿನ ಜಗಳ ಮುಗಿಯುತ್ತದೆಯೇ? ಗಾಂಧಿಜಿಯವರ ಮಾತು ಕೂಡಾ ಆ ಖಾರೆಯವರು ಕೇಳಲಿಲ್ಲ. ಆದರೆ ಅವರಿಗೆ ಮಧ್ಯಪ್ರಾಂತ್ಯದಲ್ಲಿ ಬಹುಮತವಿದೆಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ವಾರ್ಧದಲ್ಲಿ ನಡೆದ ಎಸೆಂಬ್ಲಿ ಕಾಂಗ್ರೆಸ್ ಪಾರ್ಟಿಯ ಸಭೆಯಿಂದಲೇ ಪೂರ್ಣ ವ್ಯಕ್ತವಾಗುತ್ತದೆ.

ಶಾಂತಿ:—ಏನಿಲ್ಲ, ಕಾಂಗ್ರೆಸ್ ವರ್ಕಿಂಗ್ ಕಮಿಟಿ ಎಲ್ಲವನ್ನೂ ಯೋಗ್ಯವಾಗಿಯೇ ತೀರ್ಮಾನಿಸುತ್ತದೆ.

ಶ್ಯಾಮು:—ಹೌದೇ, ನಿಂಗೆ ಭಾರೀ ಗೊತ್ತು. ಏನಾದರೂ ಗಲಾಟೆಮಾಡದೆ ಬಿಡುವವರು ಖಾರೆಯವರು!

ಶಾಂತಿ:—ಖಂಡಿತವೇ?

ಶ್ಯಾಮು:—ಖಂಡಿತ.

ಶಾಂತಿ:—ಹಾಗಾದರೆ ಪಂಥಕಟ್ಟಿರಿ.

ಶ್ಯಾಮು:—ನೀನೇ?

ಶಾಂತಿ:—ಆಯ್ತು (ನಗುತ್ತಾ) ಗಡಿಬಿಡಿಯಾದರೆ ನಾನು, ನಿಮ್ಮನ್ನು ಬಿಟ್ಟು ಒಂದು ತಿಂಗಳತನಕ ನನ್ನ ತಾಯಿಮನೆಯಲ್ಲಿಯೇ ಇರ್ತೇನೆ.

ಶ್ಯಾಮು:—ಒಪ್ಪಿದೆ. ಗಡಿಬಿಡಿಯಾಗದಿದ್ದರೆ ನಾನೂ ನನ್ನ ಅತ್ತೆಮನೆಯಲ್ಲಿ ಒಂದು ತಿಂಗಳು ಇರುತ್ತೇನೆ.



ಮಧ್ಯಪ್ರಾಂತ್ಯದ ಮಾಜಿ ಪ್ರಧಾನಮಂತ್ರಿಗಳಾದ
**ಡಾ ಎನ್. ಬಿ. ಖಾರೆಯವರು.**
ರಾಜಕೀಯದಿಂದ ರಜೆಪಡೆದುಕೊಂಡು ವೈದ್ಯಕೀಯ ರಂಗಕ್ಕೆ ಕಾಲಿಡಲು ಏನೂ ತೊಂದರೆಯಿಲ್ಲವೆಂದು ಹೇಳಿದ್ದಾರೆ.

# ವಾರದ ಪಂಚಾಂಗ

## ಬಹುಧಾನ್ಯ ಸಂ|ರದ ಶ್ರಾವಣ ಶುಕ್ಲ - ಕೃಷ್ಣಪಕ್ಷ ದಕ್ಷಿಣಾಯನಂ ವರ್ಷರ್ತುಃ

**ಕರ್ಕಟಕ (ಆಟಿ) ೨೨ರಿಂದ ೨೮ರ ವರೆಗೆ. ಮಹಾನಕ್ಷತ್ರ ಆಶ್ಲೇಷಾ**

### ಆರ್ಯಭಟ ವಾಕ್ಯಕರಣರೀತ್ಯಾ ನಿತ್ಯಪಂಚಾಂಗಂ

| ಆಗೋಸ್ತು ತಾರೀಕು | ತಿಥಿ | ವಾರ | ನಕ್ಷತ್ರ | ಯೋಗ | ಕರಣ | ವಿಷ | ಅಮೃತ | ವಿಶೇಷಾಂಶ |
|---|---|---|---|---|---|---|---|---|
| 7 | ೧೨ | ರ೬೦ | ಮೂ೫೦॥ | ವೈ೨೮। | ಬ೨೯||| | ವಿ೬। | ಅ೩೨||| | ಲ್ಲ೧ಕುಂಅತಿರಿಕ್ತ೧೯ಉಪ. ಮಾ. ವ್ಯ. ಪ್ರೊ |
| 8 | ೧೨ | ಚ೨-೫ | ಪೂ.ಷಾ೫೭ | ವ್ಯ೨೯॥ | ಬಾ೨ | ವಿ೧೭ | ಅ೪೩॥ | ಹು೨ಬುಂಘ್ತು೪ಶು೫೭ ದಧಿವೃತಾರಂಭ ಪ್ರದೋಷಃ |
| 9 | ೧೩ | ಕು೭ | ಉ.ಷಾ೬೦ | ಪ್ರೀ೩೧। | ತೈ೭ | ವಿ೧೯ | ಅ೪೫॥ | ಲ್ಲ೩ರ೪೫ಮಕರೆಚ೪೬||| ಮಂಗಳಗೌರಿವ್ರತಂ |
| 10 | ೧೪ | ಬು೧೧॥ | ಉ.ಷಾ೩| | ಆ೩೨॥ | ವ೧೧॥ | ವಿ೧೪। | ಅ೪೦|| | |
| 11 | ೧೫ | ಗು೧೬ | ಶ್ರ೯ | ಸೌ೩೩| | ಬ೧೬ | ವಿ೨೦ | ಅ೪೫॥ | ಹಯ. ಜ ಚಾಂ. ಋಗ್ಯಜುರುಪಾಕರ್ಮ ○ ಪೂರ್ಣಿಮಾ |
| 12 | ೧ | ಶು೧೯| | ಧ೧೪ | ಶೋ೩೩। | ಕೌ೧೯| | ವಿ೩೧। | ಅ೨೯ | ಕುಂಭೇಚ೪೧||ಹ್ತ೧ಶು೫೮ ಲ್ಲ೨ಕರ್ಮಮಾಸ. ಹೃಕೇಶಃ |
| 13 | ೨ | ಶ೨೧| | ಶ್ತ೧೮ | ಅ್ರ೩೨|| | ಗ೨೧| | ವಿ೩೪॥ | ಅ ಶೆ೩ ಅ೬೦ } | ಲ್ಲ೪ರ೧೬ ಶ್ರಾ. ಶನಿವಾರ |

### ಕೇತಕೀ ದೃಕ್ಸಿದ್ಧರೀತ್ಯಾ ನಿತ್ಯಪಂಚಾಂಗಂ

| ಆಗೋಸ್ತು ತಾರೀಕು | ತಿಥಿ | ವಾರ | ನಕ್ಷತ್ರ | ಯೋಗ | ಕರಣ | ವಿಷ | ಅಮೃತ | ವಿಶೇಷಾಂಶ |
|---|---|---|---|---|---|---|---|---|
| 7 | ೧೨ | ರ೫೬। | ಮೂ೪೪ | ವೈ೨೧ | ಬ೨೩ | ವಿ. ಶೆ೩। | ಅ೨೬ | ಹರಿವಾಸರಃ೬|| |
| 8 | ೧೩ | ಚ೬೮ | ಪೂಷಾ೫೧|| | ವ್ಯ೨೩|| | ಕೌ೨೯| | ವಿ೧೧ | ಅ೩೨ | ಸೋಮಪ್ರದೋಷಃ |
| 9 | ೧೩ | ಕು೨| | ಉಷಾ೫೮|| | ಪ್ರೀ೨೫||| | ತೈ೨| | ವಿ೧೪ | ಅ೪೦|| | ಲ್ಲ೩ರ೩೫ ಮಕರೆಚ೮| ಘ್ತು೪ಶು೨೦ |
| 10 | ೧೪ | ಬು೭||| | ಶ್ರ೬೦ | ಆ೨೭|| | ವ೭||| | ವಿ೯|| | ಅ೨೬| | ಋಗುಪಾಕರ್ಮ |
| 11 | ೧೫ | ಗು೧೨||| | ಶ್ರ೫ | ಸೌ೨೮||| | ಬ೧೨||| | ವಿ೧೬ | ಅ೪೨| | ಕುಂಭೆಚ೩೭||| ಯಜುರುಪಾಕರ್ಮ ○ ಪೂರ್ಣಿಮಾ |
| 12 | ೧ | ಶು೧೬||| | ಧ೧೦|| | ಶೊ೨೯॥ | ಕೌ೧೬||| | ವಿ೩೦ | ಅ೫೬ | ಲ್ಲ೪ಕು೬ ಹ೧ಶು೭೧ |
| 13 | ೨ | ಶ೨೦ | ಶ್ತ೧೫। | ಅ್ರ೨೯। | ಗ೨೦ | ವಿ೩೨|| | ಅಶೆ॥ಅ೫೮ | ಲ್ಲ೪ರ೨ |

# ಈ ವಾರದಲ್ಲಿ ನಿಮ್ಮ ಗ್ರಹಗತಿ ಹೇಗಿದೆ?

**ವಾರದ ಭವಿಷ್ಯ.**

**ತಾ. ೭—೮—'೩೮ರಿಂದ ೧೩—೮—'೩೮ ವರೆಗೆ.**

*✠*

**ಮೇಷ:—**

ಪ್ರತಿಯೊಬ್ಬ ಗ್ರಹನೂ ಆವನವನಿಗೆ ಉಕ್ತವಾದ ಗತಿಯನ್ನನುಸರಿಸಿ ನಿಯುಕ್ತ ಕಾಲದಲ್ಲಿ ರಾಶಿಚಕ್ರವನ್ನು ಸುತ್ತುತ್ತಿರುವನು. ಅಂತೆಯೇ ಈ ಗ್ರಹರೊಳಗೆ ಸೇರಿದ ಶನಿಯೂ ಕೂಡ ಎರಡೂವರೆ ವರ್ಷಕ್ಕೊಂದು ರಾಶಿಯಂತೆ ಮೂವತ್ತು ವರ್ಷಗಳಲ್ಲಿ ರಾಶಿಚಕ್ರವನ್ನು ಒಮ್ಮೆ ಸುತ್ತುವನು. ಹೀಗೆ ಸುತ್ತುವಾಗ ಜನರಿಗೆ ಅವರವರ ಜನನ ಕಾಲದಲ್ಲಿ ಚಂದ್ರನಿರುವ ರಾಶಿಯನ್ನನುಸರಿಸಿ, ಆ ರಾಶಿ ಮತ್ತು ಅದರ ಹಿಂದಿನ ಮುಂದಿನ ರಾಶಿಗಳಲ್ಲಿ, ಅಂತೂ ಮೂರು ರಾಶಿಗಳಲ್ಲಿ ಶನಿಯು ಇರುವಾಗ ಆ ಜಾತಕದವರಿಗೆ (ಏಳೂವರೆ ಶನಿ) ಎಂದು ಹೇಳುವರು. ಈ ಏಳೂವರೆ ಶನಿಯು ದೇಹಕ್ಕೆ ಪೀಡೆಯನ್ನು ಕೊಡುವನು. ಪ್ರಕೃತ ಈ ಮೇಷ ರಾಶಿಯವರಿಗೂ ಕೂಡ ಈ ಶನಿಯ ಫಲಗಳು ಹೆಚ್ಚಾಗಿ ಅನುಭವಕ್ಕೆ ಬರಲಿವೆ. ಯಾಕಂದರೆ, ಬೃಹಸ್ಪತ್ಯಾಚಾರ್ಯರೊಬ್ಬರನ್ನು ಹೊರತಾಗಿ ಬಾಕಿ ಎಲ್ಲಾ ಗ್ರಹರೂ ಶನಿಯ ಪಾಲಿಗೇ ಸೇರಿರುವರು. ಆದ ಕಾರಣ ಇವರು ಕೈಗೊಂಡ ಕಾರ್ಯಗಳು ವಿಘ್ನದಿಂದಾಗಿ ಕೊನೆಗಾಣುವುದಿಲ್ಲವು. ಬಂಧುಬಾಂಧವರೊಳಗೆ ಮನಸ್ತಾಪವುಂಟಾಗಿ ಎಲ್ಲರೂ ಸ್ವಲ್ಪ ದೂರದಲ್ಲೇ ಇರುವರು. ಒಂದಲ್ಲೊಂದು ನೆವನದಿಂದ ಪ್ರತಿ ದಿನವೂ ಸ್ವಸ್ತ್ರೀಯಲ್ಲಿ ಕಲಹ ತಪ್ಪದು. ಈ ರೀತಿಯಾಗಿ ಚಿಂತಾಕುಲರಾಗಿದ್ದು ಕಾರ್ಯಾಕಾರ್ಯ ವಿವೇಕವಿಲ್ಲದೆ ದಿಙ್ಮೂಢರಂತಾಗುವರು. ಆದರೂ ಗಾಢಾಂಧಕಾರದಲ್ಲೊಂದು ದೀಪದ ಕಿಡಿಯಂತೆ ಗುರುವೊಬ್ಬನಿರುವುದರಿಂದ ಕರ್ತವ್ಯಜ್ಞಾನಶೂನ್ಯರಾದವರಿಗೆ ದಾರಿ ತೋರಿಸಲಿರುವನು. ತಾ. ೭, ೮ರ ದಿನಗಳು ಹೆಚ್ಚಿನ ಕೆಟ್ಟದ್ದಿವೆ. ರಾಜಭಯ, ಆಯಾಸ, ಉದರ ರೋಗ—

**ವೃಷಭ:—**

"ಏಕೋ ಹಿ ದೋಷೋ ಗುಣಸನ್ನಿಪಾತೇ ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ॥" ದಯಾದಾಕ್ಷಿಣ್ಯಾದಿ ಗುಣಗಳಿಂದ ತುಂಬಿರುವ ಮನುಷ್ಯನಲ್ಲಿರತಕ್ಕ ಒಂದು ಚಿಕ್ಕ ದೋಷವು ದೋಷವೆಂತ ಕಂಡುಬರುವುದಿಲ್ಲವು. ಆ ಗುಣ ಸಮೂಹದಲ್ಲಿದ್ದು ಅಡಗಿ ಹೋಗುವುದು. ಹೇಗೆಂದರೆ, ಷೋಡಶಕಲಾಪೂರ್ಣನಾದ ಚಂದ್ರನಲ್ಲಿರತಕ್ಕ ಕಳಂಕವು ಆತನ ಕಿರಣಗಳಲ್ಲಡಗಿ ಅದೊಂದು ಕಳಂಕವಾಗಿ ಜನರಿಗೆ ತೋರಿಬರುವದಿಲ್ಲವು; ಅಂತೆಯೇ, ಈ ವೃಷಭ ರಾಶಿಯವರಿಗೂ ಕೂಡ ಈ ವಾರವು ಹಾಗೆಯೇ ಇರುವುದು. ಸರ್ವಗ್ರಹರೂ ಅನುಕೂಲರಿರುವಾಗ ಕೇವಲ ಗುರುವು ಮಾತ್ರ ಅನಾನುಕೂಲನಾದರೆ ಅವನಿಂದಾಗಿ ದೊಡ್ಡ ಅನಿಷ್ಟ ಸಂಭವಿಸಲಾರದು. ಆದ್ದರಿಂದಲೇ ಈ ವಾರದಲ್ಲಿ ಈ ರಾಶಿಯ ಜನರು ಕೈಗೊಂಡ ಕಾರ್ಯಗಳು, ವ್ಯವಹಾರ, ರಾಜಕೀಯ, ಯಾ ಇನ್ನಿತರ ಯಾವ ಜಾತಿಯ ಕಾರ್ಯಗಳೇ ಆಗಲಿ, ಇವರಿಗೆ ಅನುಕೂಲವಾಗಿಯೇ ಕೊನೆಹೊಂದುವವು. ದ್ಯೂತದಲ್ಲೂ, ವಂಚಕ ಜನರಿಂದಲೂ, ಇತರ ವ್ಯಾಪಾರಾದಿಗಳಿಂದಲೂ ತುಂಬಾ ಲಾಭವಾಗುವುದು. ರೋಗಿಗಳಾಗಿದ್ದವರು ನಿರೋಗಿಗಳಾಗುವರು. ಹೊಸ ಮಿತ್ರರುಗಳ ಸಂಬಂಧದಿಂದಾಗಿ ಯಾವಾಗಲೂ ಸಂತೋಷದಿಂದಿರುವರು. ಸರ್ವತ್ರ ಸ್ಥಾನಮಾನಗಳು ಸಿಗುವವು. ತಾ. ೧೨, ೧೩ ಈ ದಿನಗಳು ಅತ್ಯುತ್ತಮವಿರುವವು. ಮಹಾ ಸುಖ, ಇಷ್ಟಸಿದ್ಧಿ—

**ಮಿಥುನ:—**

ಈ ರಾಶಿಯಲ್ಲಿ ಹುಟ್ಟಿದವರಿಗೆ ಈ ವಾರವು ಹೆಚ್ಚಿನಂಶ ಕೆಟ್ಟದ್ದಿರುವುದು. ಯಾಕಂದರೆ ರವಿ, ಕುಜ, ಶನಿ, ರಾಹುಗಳು ಪ್ರತಿಕೂಲರಾಗಿರುವರು. ಗುರು ಶುಕ್ರ ಕೇತುಗಳು ಶುಭರಾಗಿದ್ದರೂ ಶನಿ ರಾಹುಗಳಿಂದ ವಿದ್ಧರಾದ ಪ್ರಯುಕ್ತ ಅಶುಭರಾಗಿಯೇ ಪರಿಣಮಿಸುವರು. ಆದಕಾರಣ ಧನ ಸಂಬಂಧವಾಗಿ ಶತ್ರುಭಯವು ಹೆಚ್ಚಾಗಿ ಇರುವುದು. ಇವರ ಮನಸ್ಸು ದುಷ್ಕಾರ್ಯದಲ್ಲಿ ಪ್ರೇರೇಪಿಸುವುದು. ಇದರಿಂದ ತನ್ನ ದುಶ್ಚಾರಿತ್ರ್ಯವು ಬಹಿರಂಗವಾಗಿ ತಾನು ಅಪರಾಧಿಯಾಗುವೆನೋ ಎಂಬ ಸಂಶಯಚಿತ್ತರಾಗಿರುವರು. ಆರೋಗ್ಯವು ಕೆಟ್ಟು ಪಿತ್ಥವಿಕಾರದ ರೋಗವು ತಲೆದೋರುವುದು. ನಾನಾರೀತಿಯಿಂದ ಧನವ್ಯಯವಾಗುವದು. ಶರೀರ ಸುಖವು ಏನೂ ಉಳಿಯದು. ವಿದ್ಯಾಕೀರ್ತಿಗೆ ಹಾನಿಯುಂಟಾಗುವುದು. ಅಂತೂ ಯಾವ ಭಾಗದಲ್ಲಿಯೂ ನೆಮ್ಮದಿಯಿಲ್ಲವು. ತಾ. ೯ರಿಂದ ೧೩ರ ತನಕದ ದಿನಗಳು ತುಂಬಾ ಅನಿಷ್ಟಕಾರಕಗಳಾಗಿವೆ. ಆಯಾಸ, ಬಂಧನ' ರಾಜಭಯ, ಚಿತ್ತಭ್ರಾಂತಿ—

**ಕರ್ಕಾಟಕ—**

ನಿಮಗೆ ಈ ವಾರವು ಚಿಂತಾಜನಕವಾಗಿರುವುದು. ವ್ಯವಹಾರದಲ್ಲಿ ಕಲಹವು ಪ್ರಾಪ್ತವಾಗಿ ಆ ಸಂಬಂಧವಾಗಿ ತುಂಬಾ ಧನವ್ಯಯವಾಗುವುದಲ್ಲದೆ ಮಾನಹಾನಿಯೂ ಕೂಡ ಆಗಲಿದೆ. ಆದಕಾರಣ ಪೂರ್ವೋತ್ತರಗಳನ್ನು ಚೆನ್ನಾಗಿ ವಿಚಾರಮಾಡಿ ಕಾರ್ಯದಲ್ಲಿ ಪ್ರವರ್ತಿಸಬೇಕು. ನಿಮ್ಮ ಶತ್ರುಗಳು ತಮ್ಮ ಮುಯ್ಯಿ ತೀರಿಸಿಕೊಳ್ಳಲು ಸಮಯ ಹಾರೈಸುತ್ತಿರುವರು. ಶೋಕಾಕುಲಿತರಾದ ನಿಮಗೆ ಪ್ರವಾಸದ ಸಂಭವವಿರುವುದು. ಇದರಿಂದ ನಿಮಗೆ ಪ್ರಕೃತಿಯು ಕೆಟ್ಟು ಪ್ರಾಣಾಪಾಯದ ರೋಗವು ತಲೆದೋರುವುದು. ಆದರೂ "ವಿಪದಿ ಧೈರ್ಯಂ" ಎಂಬಂತೆ ಆಪತ್ಕಾಲದಲ್ಲಿ ಧೈರ್ಯದಿಂದಿರುವುದೇ ಆ ಆಪತ್ತನ್ನು ಉತ್ತರಿಸಲಿಕ್ಕೆ ಸಾಧನವಾಗಿರುವುದು. ತಾ. ೭ ರಿಂದ ೧೧ರ ವರೆಗಿನ ದಿನಗಳು ಸ್ವಲ್ಪ ಶುಭಕರಗಳು. ರೋಗಶಾಂತಿ. ಅಶನವಸನಗಳಲ್ಲಿ ನಿಶ್ಚಿಂತೆ.—

**ಸಿಂಹ:—**

ಈ ವಾರದಲ್ಲಿ ನಿಮಗೆ ಪ್ರತಿಕೂಲವಾಗಿರುವ ಹೆಚ್ಚಿನ ಗೃಹರು, ನೇತ್ರರೋಗವನ್ನೂ, ಪರಕೀಯ ಸ್ತ್ರೀಯರೊಂದಿಗೆ ಕಲಹವನ್ನೂ ತಂದೊಡ್ಡುವರು ಅಲ್ಲದೆ ಪರರಿಗೆ ಕೇಡನ್ನು ಬಗೆಯುವುದರಿಂದಲೂ, ಜಗಳವನ್ನು ಗಂಟಿಕ್ಕುವುದರಿಂದಲೂ ಹೆಚ್ಚಿನ ಜನರಿಗೆ ಶತ್ರುವಾಗುವಿರಿ. ಅದರಿಂದಾಗಿ ಹಣವು ತುಂಬಾ ಖರ್ಚಾಗುವುದು. ಶರೀರದ ಅನಾರೋಗ್ಯದಿಂದಲೂ ಕೈಯಲ್ಲಿ ಹಣವಿಲ್ಲದಿರುವುದರಿಂದಲೂ ಎಲ್ಲರೂ ನಿಮ್ಮನ್ನು ತಿರಸ್ಕರಿಸುವರು. ಇದರಿಂದಾಗಿ ಸಮಾಜದಲ್ಲಿ ಬಹಳ ದೀನರಾಗಿ ಬಾಳಬೇಕಾಗುವುದು. ಈ ರೀತಿಯಾಗಿ ಇಷ್ಟೆಲ್ಲಾ ಅಶುಭಗಳು ಒದಗುವ ಸಂಭವವಿದ್ದರೂ ಗುರು ಶುಕ್ರರ ದಯಾದ್ರ್ರ ದೃಷ್ಟಿಯು ನಿಮ್ಮ ಮೇಲಿರುವುದರಿಂದ ನೀವು ನಿಮ್ಮ ಜಾತಿಮತದ ಸಂಪ್ರದಾಯಕ್ಕೆ ಯೋಗ್ಯವಾದ ಸತ್ಕ್ರಿಯೆಗಳನ್ನೂ ಆಚರಿಸಿಕೊಂಡಿದ್ದಲ್ಲಿ ಈ ದೋಷಗಳು ನಿಮ್ಮನ್ನು ಹೆಚ್ಚಾಗಿ ಪೀಡಿಸಲಾರವು. ತಾ. ೭. ೮ ದಿನಗಳು ಸ್ವಲ್ಪ ಅನಿಷ್ಟಕರಗಳಾಗಿವೆ. ಅನಾರೋಗ್ಯ, ಕಾರ್ಯನಾಶ, ಶೋಕ.--

**ಕನ್ಯಾ:—**

ಇಷ್ಟಾನಿಷ್ಟ ಗ್ರಹರು ಸಮಾನಬಲರಾಗಿಯೂ, ಸಮಾನರಾಗಿಯೂ ಇರುವುದರಿಂದ ಈ ವಾರದಲ್ಲೇನೊಂದೂ ವಿಶೇಷ ಪರಿಣಾಮವು ನಿಮ್ಮ ಮೇಲೆ ಆಗುವಂತಿಲ್ಲವು. ಆದರೂ ಕೂಡಾ ನಿಮ್ಮ ವಿರೋಧಿಗಳಲ್ಲಿರತಕ್ಕ ಕಲಹವು ವೃದ್ಧಿಯಾಗಿ ಧನವ್ಯಯಕ್ಕೆ ಕಾರಣವಾಗುವ ಒಂದು ಯೋಗವಿದೆ. ಆದಕಾರಣ ವೈರಿಗಳ ಬಲೆಗೆ ಸಿಲುಕದೆ ಉಪಾಯದಿಂದಲೇ ಕಾರ್ಯ ಸಾಧಿಸುವಲ್ಲಿ ಜಾಣ್ಮೆಯಿದೆ. ತಾ. ೭ ರಿಂದ ೧೧ರ ವರೆಗಿನ ದಿನಗಳು ಸ್ವಲ್ಪ ಅಶುಭಕಾರಕಗಳಾಗಿರುವವು. ಆ ದಿನಗಳಲ್ಲಿ ಉದರ ರೋಗವು ತಲೆದೋರುವುದು ಮಿತ್ರರಲ್ಲಿ ಅವಿಶ್ವಾಸ ತೋರಿಬಂದು ಅವರು ಶತ್ರುಗಳಾಗಿ ಪರಿಣಮಿಸುವರು. ದಿನನಿತ್ಯದ ಕಾರ್ಯಕ್ಕೆ ವಿಘ್ನ ಸಂಭವಿಸುವುದು. ಇವುಗಳಿಂದಾಗಿ ಮನಸ್ಸಿಗೆ ಚಿಂತೆಯು ಅಂಟಿಕೊಳ್ಳಲಿದೆ. ಆದಕಾರಣ ಮೇಲ್ಕಂಡ ದಿನಗಳಲ್ಲಿ ಅತಿ ಜಾಗರೂಕತೆಯಿಂದಿರಬೇಕು.—

**ತುಲಾ:—**

ಇವರು ಎಲ್ಲಾ ಭಾಗದಲ್ಲೂ ಸ್ವತಂತ್ರರಾಗಿರುವರು. ಆದಕಾರಣದಿಂದಲೇ ಎಂತಹ ದುಸ್ಸಾಧ್ಯವಾದ ಕಾರ್ಯವನ್ನಾದರೂ ಕೂಡ ಅನಾಯಾಸದಿಂದ ಶೀಘ್ರವಾಗಿ ತಮ್ಮಂತೆಯೇ ಮಾಡಿಕೊಳ್ಳಲು ಶಕ್ತರಿರುವರು. ಇವರ ಅದೃಷ್ಟವು ಅಷ್ಟೊಂದು ಅನುಕೂಲವಾಗಿರುವುದೇ ಇದಕ್ಕೆ ಕಾರಣವು. ಮುಟ್ಟಿದ್ದೆಲ್ಲಾ ಚಿನ್ನವೆಂದಂತೆ, ವ್ಯಾಪಾರದಲ್ಲಾಗಲಿ ವ್ಯವಹಾರದಲ್ಲಾಗಲಿ ಯಾ ಯಾವ ಕಾರ್ಯದಲ್ಲೇ ಆಗಲಿ, ನಾನಾ ರೀತಿಯಿಂದ ಧನ ಲಾಭವಾಗುವುದು. ದ್ಯೂತವನ್ನಾಡುವವರಿಗೆ ಈ ವಾರವು ಒಳ್ಳೇ ಲಾಭದಾಯಕವಾಗಿರುವುದು. ವಿಟರು ತಾವು ಬಯಸಿದ ಸ್ತ್ರೀಯನ್ನು ಹೊಂದುವರು. ವಾಕ್ಚಾತುರ್ಯದಿಂದ ಸಕಲರನ್ನೂ ತಮ್ಮವರನ್ನಾಗಿ ಮಾಡಿಕೊಳ್ಳುವರು. ಅಲ್ಲದೆ ಶತ್ರುಗಳನ್ನೂ ಕೂಡ ಗೆಲ್ಲುವರು. ಇಷ್ಟೆಲ್ಲಾ ಶಕ್ತಿಯು ಇವರಲ್ಲಿದ್ದರೂ ಇತರರಿಗೆ ತಿಳಿಯದ ಅದೊಂದು ಚಿಂತೆಯು ಮನಸ್ಸಿನಲ್ಲಿ ಮನೆ ಮಾಡಿರುವುದು. ತಾ. 7, 8, ಈ ದಿನಗಳು ಅತ್ಯುತ್ತಮವಿರುವವು—

**ವೃಶ್ಚಿಕ:—**

ಈ ವೃಶ್ಚಿಕರಾಶಿಯಲ್ಲಿ ಹುಟ್ಟಿದವರಿಗೆ ಈ ವಾರದಲ್ಲಿ ಸಾಮಾನ್ಯ ಕೆಟ್ಟ ಸ್ಥಿತಿಯೇ ಹೆಚ್ಚಿರುವುದು. ಕಾರಣ, ಬುಧ, ಶುಕ್ರ ಮತ್ತು ಕೇತುವು ಇವರಿಗೆ ಅನುಕೂಲರಾಗಿದ್ದು ಶತ್ರುನಾಶದಿಂದ ಮನಸ್ಸಿಗೆ ಶಾಂತಿಯನ್ನು ಕೊಡಲಿರುವರು. ಅಲ್ಲದೆ ಹೊಸ ಮಿತ್ರಜನರಿಂದ ಅನೇಕ ಪುರಸ್ಕಾರಾದಿಗಳನ್ನೂ, ಉದ್ಯೋಗದಲ್ಲಿ ಉಚ್ಚಸ್ಥಾನವನ್ನೂ, ಧನಾದಿಗಳ ಲಾಭವನ್ನೂ ಮಾಡಲು ಶಕ್ತರಿರುವರು. ಆದರೂ ಇತರ ದುಷ್ಟ ಗ್ರಹರು ಕೆಟ್ಟ ಸ್ಥಾನವನ್ನು ಹೊಂದಿರುವುದರಿಂದ ಸರ್ಪಕ್ಕೆ ಹಾಲು ಕುಡಿಸಿದರೆ ಹೇಗೆ ವಿಷವೃದ್ಧಿಗೆ ಕಾರಣವಾಗುತ್ತದೋ ಅಂತೆಯೇ ಈ ಗ್ರಹರು ಬಹಳ ಕೆಟ್ಟದ್ದನ್ನು ಮಾಡಲು ಹವಣಿಸುತ್ತಿರುವರು. ಇವರಿಂದಾಗಿ ಶರೀರ ಪೀಡೆಯು ಯಾವಾಗಲೂ ತಪ್ಪದು. ಆದ್ದರಿಂದಲೇ ತೇಜೋಹೀನರಾಗಿರುವರು. ಮುಖಭಾವದಿಂದಲೇ ಅವರಲ್ಲಿರತಕ್ಕ ವ್ಯಸನವು ಇತರರಿಗೆ ವ್ಯಕ್ತವಾಗುವುದು. ಕೈಕೊಂಡ ಕಾರ್ಯದಲ್ಲಿ ತುಂಬಾ ಧನವ್ಯಯವಾಗುವುದಲ್ಲದೆ ಅದರ ಫಲವೂ ಬಹಳ ಹಾನಿಕರವಿರುವದು. ಎಲ್ಲರಲ್ಲಿಯೂ ಕಲಹವಾಗುವುದು. ತನ್ನನ್ನನುಸರಿಸಿರತಕ್ಕ ಒಕ್ಕಲು, ಮಕ್ಕಳೂ ಕೂಡಾ ಇವರಿಗೆ ವಿರೋಧವಾಗಿ ವರ್ತಿಸುವರು. ಮಾತ್ರವಲ್ಲ, ಬಂಧುಜನರಿಂದಾಗಿ ಇವರಿಗೆ ಅತ್ಯಂತ ಖೇದವಾಗುವುದು. ತಾ. 6, 7, 12, 13 ಈ ದಿನಗಳು ತುಂಬಾ ಹಾನಿಕಾರಕಗಳಾಗಿವೆ.

**ಧನು:—**

ಕಾಲವು ಅನುಕೂಲವಾಗಿದ್ದರೆ ಇಡೀ ಲೋಕವೇ ಅನುಕೂಲವಾಗಿರುವದು. ಅದೇ ಪ್ರತಿಕೂಲವಾಗಿರುವಾಗ ಯಾರೇನು ಮಾಡಲೂ ಶಕ್ತರಲ್ಲ. ಅಂತೆಯೇ ಈ ರಾಶಿಯವರ ಅವಸ್ಥೆಯೂ ಅಷ್ಟಕ್ಕೆ ಬಂದಿದೆ. ಎಲ್ಲಾ ಗ್ರಹರೂ ಇವರ ಮೇಲೆ ವಿರೋಧ ದೃಷ್ಟಿಯುಳ್ಳವರಾಗಿರುವರು. ಆದ ಕಾರಣ ಈ ವಾರದಲ್ಲಿ ಈ ರಾಶಿಯವರ ಗ್ರಹಚಾರವು ಬಹಳ ಕಠಿಣಾವಸ್ಥೆಯಲ್ಲಿರುವುದರಿಂದ ಕಾರ್ಯದಲ್ಲಿ ಅನಿಷ್ಟವು ಅಕಸ್ಮಾತ್ ಉಂಟಾಗಿ ಸ್ಥಾನಮಾನಗಳಿಗೆ ತುಂಬಾ ಹಾನಿಯಾಗುವುದು. ಶತ್ರುಗಳ ಪೀಡೆಯು ಹೆಚ್ಚುವುದು. ಕೈಹಿಡಿದ ಅರ್ಧಾಂಗಿಯೂ ಕೂಡ ವಿರೋಧಿಸುವಳು. ದೇಹದಲ್ಲಿ ರೋಗವು ತಲೆದೋರುವದಲ್ಲದೆ ಗಾಯಗಳೂ ಆಗುವವು. ಚೆನ್ನಾಗಿ ವಿಚಾರ ಮಾಡಿ ವ್ಯವಹಾರ ಮಾಡಿದರೂ ಜಗಳವು ತಪ್ಪಿದ್ದಲ್ಲ. ವಿದ್ಯಾರ್ಥಿಗಳಿಗೆ ಈ ವಾರವು ಬಹಳ ಕೆಟ್ಟದ್ದಿರುವುದು. ಬುದ್ಧಿಹ್ರಾಸದಿಂದಾಗಿ ಅನೇಕ ಅಕಾರ್ಯಗಳು ಆಗಿಹೋಗುವುವು. ಆರಂಭಿಸಿದ ಕಾರ್ಯವು ವಿಘ್ನಗಳಿಂದಾಗಿ ಎಂದೂ ಕೊನೆಗೊಳ್ಳುವಂತಿಲ್ಲವು. ತಾ. 9, 10, 11 ಈ ದಿನಗಳು ಬಹಳ ಅನಿಷ್ಟಗಳಾಗಿವೆ. ಮಾನಹಾನಿ, ಧನನಾಶ, ಕಲಹ.

**ಮಕರ:—**

ಹೆಚ್ಚಿನ ಶುಭಾಶುಭ ಗ್ರಹರು ಅನುಕೂಲವಿರುವುದರಿಂದ ಈ ರಾಶಿಯವರಿಗೆ ಹೆಚ್ಚಿನಂಶ ಒಳ್ಳೇಯದೇ ಆಗುವುದು. ವ್ಯಾಪಾರ ಮಾಡತಕ್ಕವರಿಗೆ ಒಳ್ಳೇ ಆದಾಯ ಆಗುವುದು. ಕೋರ್ಟ

ಮುಂತಾದವುಗಳಲ್ಲಿರತಕ್ಕ ಇವರ ವ್ಯವಹಾರವು ಅನುಕೂಲವೇ ಆಗಿ ಕೀರ್ತಿಭಾಗಿಗಳಾಗುವರು. ಸಂಸಾರದಲ್ಲಿ ಏನಾದರೂ ಕೊರತೆ ಇಲ್ಲದೆ ಎಲ್ಲಾ ಭಾಗದಲ್ಲೂ ಸಂಪೂರ್ಣವಾಗಿದ್ದು ಸುಖಕರವಾಗಿರುವುದು. ಇವರಿಗಿಂತ ಅನೇಕ ಭಗದಲ್ಲಿ ಹೆಚ್ಚಾದ ಶತ್ರುಗಳು ಇವರ ಮಿತ್ರರಾಗಿ ಪರಿಣಮಿಸಿ ಸರ್ವತ್ರ ಅನುಕೂಲವಾಗಿಯೇ ವರ್ತಿಸುವರು. ತಮ್ಮ ಬುದ್ಧಿ ಕೌಶಲ್ಯದಿಂದ ಎಲ್ಲರನ್ನು ತಮ್ಮೆಡೆಗೆ ಸೆಳೆದು ತಮ್ಮ ಕಾರ್ಯವನ್ನು ಸುಲಭದಿಂದ ಕೊನೆಗಾಣಿಸಲು ಶಕ್ತರಾಗುವರು. ಹೀಗಿದ್ದರೂ ಅನಿಷ್ಟಕಾರಕರಾದ ಕೆಲವು ಗ್ರಹರಿಂದ ಕಣ್ಣುನೋವು, ಹೊಟ್ಟೆನೋವು, ಧನಕ್ಕೆ ಸ್ವಲ್ಪಮಟ್ಟಿನ ಖರ್ಚು, ಪ್ರವಾಸವೂ ಕೂಡಾ ಸಂಭವಿಸಸೀತು. ಮಾತ್ರವಲ್ಲ, ಗೌರವಕ್ಕೂ ಸ್ವಲ್ಪ ಹಾನಿ ತಗಲೀತು. ತಾ.6, 7, 12 ಮತ್ತು 13 ಈ ದಿನಗಳು ಸ್ವಲ್ಪ ಕೆಟ್ಟದ್ದಾಗಿರುವುದರಿಂದ ಆ ದಿನಗಳಲ್ಲಿ ಸ್ವಲ ಜಾಗ್ರತೆಯಿಂದಿರಬೇಕು.

**ಕುಂಭ:—**


ಈ ವಾರದಲ್ಲಿ ನಿಮಗೆ ಇಷ್ಟಾನಿಷ್ಟಗಳು ಸಮಾನಬಲವುಳ್ಳವುಗಳಾಗಿರುವವು ಆದ್ದರಿಂದ ನಿಮ್ಮಲ್ಲಿದ್ದ ಶೋಕವು ನಿವಾರಣೆಯಾಗುವುದು. ಶರೀರದ ಅನಾರೋಗ್ಯವು ಪರಿಹಾರವಾಗಿ ಕ್ಷೇಮಿಗಳಾಗುವಿರಿ. ನಿಮಗೆ ಈ ಹಿಂದೆ ಉಂಟಾಗಿದ್ದ ಕಲಹವು ತೀರ್ಮಾನವಾಗಿ ನಿಮ್ಮಲ್ಲಿ ಮೈತ್ರಿಯು ಬೆಳೆಯುವುದು. ಮತ್ತು ಪಾಪಿಗ್ರಹರಿಂದಾಗಿ ಇತರ ಜಾತಿಯವಲ್ಲಿ ಹಗೆ ಕಟ್ಟಿಕೊಳ್ಳುವಿರಿ. ಮತ್ತು ಬುದ್ಧಿಹೀನತೆಯಿಂದಾಗಿ ಹಣವನ್ನು ವೃಥಾ ಖರ್ಚು ಮಾಡುವಿರಿ. ಮತ್ತು ಕೆಟ್ಟ ಕೆಲಸವನ್ನು ಮಾಡಿ ಪಶ್ಚಾತ್ತಾಪ ಪಡುವಿರಿ. ತಾ. 9 ರಿಂದ 11ರ ತನಕದ ದಿನಗಳಲ್ಲಿ ಆರೋಗ್ಯಕ್ಕೆ ಹಾನಿ ತಗಲುವ ಸಂಭವವಿದೆ. ಜಾಗ್ರತೆಯಿಂದಿರಿ.

**ಮೀನ:—**

ಧನು ರಾಶಿಯವರಿಗೂ ಇವರಿಗೂ ಏನೂ ಅಭ್ಯಂತರವಿಲ್ಲವೆಂದೇ ಹೇಳಬಹುದು. ಇವರಿಗೆ ಆರಂಭಿಸಿದ ಕಾರ್ಯವನ್ನು ಕೊನೆಗಾಣಿಸಲೂ ಹೊಸತಾದೊಂದು ಕಾರ್ಯವನ್ನು ಕೈಗೊಳ್ಳಲೂ ಬೇಕಾದ ಸಾಹಸವಿಲ್ಲವು. ಧನ ಜನಬಲವಿಲ್ಲವು. ಆದಕಾರಣ ಯಾವ ಕಾರ್ಯನಿರ್ವಾಹದಲ್ಲಿಯೂ ಮುಂಗಾಣದೆ ಲೋಕವೇ ಅಂಧಕಾರಮಯುವಾಗಿ ತೋರುವುದು ಸಹಜ. ಕಾರಣ ಬುದ್ಧಿಶೂನ್ಯರಿಗೆ ಎಲ್ಲವೂ ಶೂನ್ಯವೆಂದು ತೋರುವುದು ಸ್ವಾಭಾವಿಕವು. ಸಂಸಾರದ ತಾಪತ್ರಯದಿಂದಾಗಿ ವಿರಕ್ತಿ ಹೊಂದುವಿರಿ. ಮತ್ತು ವ್ಯಾಪಾರ ವ್ಯವಹಾರದಲ್ಲಿ ಹಣದ ಮುಗ್ಗಟ್ಟಿನಿಂದಾಗಿ ತುಂಬಾ ವ್ಯಥೆಪಡಬೇಕಾಗುವುದು. ಈ ಊರೇ ಬಿಟ್ಟು ದೇಶಾಂತರಕ್ಕೆ ಹೋಗುವ ಎಂಬಲ್ಲಿಯತನಕ ನಿಮ್ಮ ಬುದ್ಧಿ ಹೋಗುವುದು. ಯಾಕೆಂದರೆ ದೇವರು ಕೈಬಿಟ್ಟವನಿಗೆ ಎಂದಿಗೂ ಒಳಿತಿಲ್ಲವು ಎಂದಂತೆ ಇವರ ಪಾಡಾಗಿರುತ್ತದೆ. ತಾ. 7ರಿಂದ 11ರ ವರೆಗೆ ಚಂದ್ರಬಲವಿರುವುದರಿಂದ ಇಷ್ಟಸಿದ್ಧಿ, ಮಿತ್ರಲಾಭ.

ಬಾಲಭಾಸ್ಕರ—

ನನಗರಿಯದು, ನಿಮಗೆ-



ಚಕ್ರವರ್ತಿ ರಾಜಗೋಪಾಲಾಚಾರ್ಯರ ಸಾಮ್ರಾಜ್ಯ ಯಾವುದು?

ಶ್ರೀ ಲೋಕಮಾನ್ಯ
ವೈದ್ಯಾಲಯ

ಅತ್ಯಂತ ನೂತನ ಕ್ರಮ
ಗಳಿಂದೊಪ್ಪುವಂತೆ ಅನುಭವಸಿದ್ಧವಾದ
ಪ್ರಾಚೀನಕಾಲದ ಪ್ರಯೋಗದಿಂದೊಡ
ಗೂಡಿ ನಾನಾತರದ ಮಹಾರೋಗಗಳಿಗೆ
ಬಹು ಕಡಿಮೆ ಪಥ್ಯದಿಂದ ಶೀಘ್ರಗುಣ
ಕಾರಿಯಾದ ಕೈಕಂಡ ಪ್ರಯೋಗ ಮತ್ತು
ಪರಮೌಷಧಿಗಳು ಬೇಕಾದವರಿಗೆ

ಶ್ರೀ ಲೋಕಮಾನ್ಯ ವೈದ್ಯಾಲಯ
ಮಂಗಳೂರು.

# ಪಟಾಕಿ

‘ಗಡಿನಾಡಿನ ಕಾಂಗ್ರೆಸ್ ಮಂತ್ರಿ ಮಂಡಲದ ಕಾರ್ಯಕಲಾಪಗಳು ತಮ್ಮ ‘ಖುದಾಯಿ, ಕಿದ್ಮತ್‌ಗಾರ’ ಸಂಘದ ವರ್ಚಸ್ಸನ್ನು ಕೆಡಿಸಿವೆ’- ಎಂದು ಖಾನ್ ಅಬ್ದುಲ್ ಗಫರ್ ಖಾನರು ಅಲ್ಲಿಯ ಕಾಂಗ್ರೆಸ್ ಪಕ್ಷದ ಸಭೆಗೊಂದು ಠರಾವು ಕಳುಹಿಸಿದ್ದಾರೆ. ಅನ್ಯಾಯವಲ್ಲವೇ?

* * *

ತಮ್ಮ ಸಂಘದ ವರ್ಚಸ್ಸನ್ನು ಮಂತ್ರಿಗಳು ಕೆಡಿಸಿದರು- ಎಂದು ಗಫಾರ್‌ಖಾನರಂತವರು ಹೇಳಿದರೆ ಕಾಂಗ್ರೆಸ್ ಮಂತ್ರಿಮಂಡಲದ ವರ್ಚಸ್ಸೂ ಹಾಗೆಯೇ ಕೆಡುತ್ತದಲ್ಲಾ! ಇಂತಹ ಪ್ರತೀಕಾರವನ್ನು- ಹಿಂಸೆಯನ್ನು- ಗಡಿನಾಡಿನ ಗಾಂಧಿಯುಹರು ಮಾಡಬಹುದಿತ್ತೆ?

* * *

ಅಲ್ಲಿಯ ಮುಖ್ಯ ಮಂತ್ರಿ ಡಾ| ಖಾನ್ ಸಾಹೇಬರೆಂತಹ ದಡ್ಡರಯ್ಯ! ನಮ್ಮ ಮುಖ್ಯ ಮಂತ್ರಿಗಳಾದರೆ ಪ್ರಾಂತ್ಯದ ಮೂಲೆ ಮೂಲೆಗೆ ಹೋಗಿ ‘ನಮ್ಮನ್ನು ವಿಮರ್ಶಿಸ ಬೇಡಿ. ವಿರೋಧಿಗಳ ತಾಳಕ್ಕೆ ತಕ್ಕಂತೆ ಕುಣಿಯಬೇಡಿ’ ಎಂದು ಹೇಳುತ್ತಾ ಬರುತ್ತಿದ್ದಾರೆ. ಡಾ। ಖಾನ್ ಸಾಹೇಬರಿಗೆ ತನ್ನ ಮನೆಯ ವರೆಗೆ ಹೋಗಿ ತನ್ನ ತಮ್ಮನಿಗೊಂದಿಷ್ಟು ಬುದ್ಧಿ ಹೇಳಿ ಬರಲಿಕ್ಕಾಗುವದಿಲ್ಲವೆಂದರೆ?

* * *

ಜೆಕೊಸ್ಲೊವೇಕಿಯದ ರಾಷ್ಟ್ರೀಯ ಸರಕಾರವು ಜರ್ಮನರ ಸಮಾಧಾನಕ್ಕಾಗಿ ಪ್ರಾಂತಿಕ ಸ್ವಾತಂತ್ರ್ಯವನ್ನು ಕೆಲವು ಪ್ರಾಂತ್ಯಗಳಿಗೆ ಕೊಡಬಹುದೆಂದು ಸಾರಿಯದೆ.

* * *

ಸುಡೇಟನ್ ಜರ್ಮನರಿಗೆ ಇದರಿಂದ ತೃಪ್ತಿಯಾಗಿಲ್ಲವಂತೆ. ಹಾಗೆ ಮಾಡಿದರೂ ಕೆಲವೆಡೆಗಳಲ್ಲಿ ಅವರು ಅಲ್ಪ ಸಂಖ್ಯಾತರಾಗಿಯೇ ಉಳಿಯುವರಂತೆ. ರಾಜ್ಯಭಾರ ಸೂತ್ರವು ಬಹುಸಂಖ್ಯಾಕರ ಕೈಯಲ್ಲೇ ನಿಲ್ಲುವದಂತೆ- ಹೀಗಾಗುತ್ತದಲ್ಲಾ ಎಂದು ಜರ್ಮನರ ಚಿಂತೆ.

* * *

ಹೀಗಾಗಬಾರದೆಂದೇ ಹಿಟ್ಲರನು ಒಮ್ಮೆ ಮನಸ್ಸು ಮಾಡಿದ್ದ- ಜರ್ಮನ್ ಸೈನ್ಯವು ಜೆಕೋವಿನ ಒಳನುಗ್ಗಬೇಕು- ಇಲ್ಲಿಯ ಸುಡೆಟನರೊಡನೆ ಸೇರಿ ಜರ್ಮನರ ಸಂಖ್ಯೆ ಹೆಚ್ಚಬೇಕು, ಎಂದು!

* * *

ಹೀಗೆ ಒಂದೆಡೆಯಲ್ಲಿ ಜರ್ಮನರ ಸಂಖ್ಯೆ ಹೆಚ್ಚಿದಂತಾಯಿತಲ್ಲಾ- ಅದೇ ಸಮಯದಲ್ಲಿ ಜೆಕ್‌ಜನರನ್ನು ಧ್ವಂಸಗೊಳಿಸುವಾಗ ಅಲ್ಲಿಯವರ ಸಂಖ್ಯೆ ಕಡಿಮೆಯಾದ ಹಾಗೂ ಆಗುತ್ತದೆ.

* * *

ಆಗ ಲೆಕ್ಕ ಮಾಡಲಿ, ಸುಡೆಟನ್ ಜರ್ಮನರು ಬಹುಸಂಖ್ಯಾಕರು- ಜೆಕೊಸ್ಲೆವೇಕಿಯಾನರು ಅಲ್ಪ ಸಂಖ್ಯಾಕರಾಗುತ್ತಾರಲ್ಲಾ- ಮತ್ತೆ ಜೆಕ್ ರಾಷ್ಟ್ರವು ತನ್ನಿಚ್ಛೆಯಂತೆ ತಾನಿರಬಹುದು- ಇದು ಹಿಟ್ಲರನ ಯೋಚನೆ!

* * *

ಇದಕ್ಕೆ ಭಂಗ ಬಂದುದು ಹಿಟ್ಲರನಂತೆಯೇ ಜೆಕ್ ಸರಕಾರವೂ ಯೋಚಿಸಲಿಕ್ಕೆ ಕಲಿತು. ಸುಡೆಟೆನ್ ಜರ್ಮನರು ಅಲ್ಪ ಸಂಖ್ಯಾಕರಾಗಿರುವದು ಬೇಡವೆಂದು ಹಿಟ್ಲರನಂತೆಯೇ ಜೆಕ್ ಸರಕಾರಕ್ಕೂ ತೋರಿತು.

* * *

‘ಅಲ್ಪ’ವಾಗಿದ್ದುದನ್ನು ಪೂರ್ತಿಮಾಡಲು ಎರಡು ಹಾದಿಗಳಿವೆ. ಒಂದನೇ ಉಪಾಯ ಅದನ್ನು ಹೆಚ್ಚಿಸುವದು - ಎರಡನೇ ಹಾದಿ ಅದನ್ನು ಪೂರ್ಣ ಅಳಿಸಿಬಿಡುವದು. ಹಿಟ್ಲರನು ಮೊದಲನೆಯದನ್ನೂ ಜೆಕ್ ಸರಕಾರವು ಎರಡನೆಯದನ್ನೂ ಅಂಗೀಕರಿಸಲುತಯಾರು!

* * *

ಎರಡನೇ ಹಾದಿ ಮೊದಲೇ ಸ್ವೀಕರಿಸಲ್ಪಟ್ಟಲ್ಲಿ, ಮೊದಲನೇ ಹಾದಿ ತನ್ನಂತೆ ಬಂದು ಮಾಡಲ್ಪಡುವದು. ಇದನ್ನು ತಿಳಿದ ಹಿಟ್ಲರ್ ಈಗ ಜೆಕೊಸ್ಲೊವೇಕಿಯದೊಡನೆ ಸಂಧಾನಕ್ಕೆ ಇಳಿದಿದ್ದಾನೆ!

* * *

ರಾಜಿಮಾಡಿಹಾಕಲು ಬ್ರಿಟಿಷರಷ್ಟು ಮತ್ತೆ ಯಾರಿಗೆ ತಿಳಿದಿದೆ? ಈ ಪಂಚಾಯತಿಕೆಗೂ ಬ್ರಿಟಿಷ್ ರಾಯಭಾರಿ ಲೋರ್ಡ್ ರುನ್ಸಿಮೇನರು ಕೈ ಹಾಕಿದ್ದಾರೆ.

* * *

ರಾಜಿಮಾಡುವ ಕೆಲಸಕ್ಕೆ ಬ್ರಿಟಿಷರು ಈ ಮೊದಲು ಎಷ್ಟೋಸಲ ಹಲವು ಸಂದರ್ಭಗಳಲ್ಲಿ ಮುಂದೆ ಬಂದಿದ್ದಾರೆ. ಆದರೆ ಅವರನ್ನು ಕೇಳುವವರಿರಲಿಲ್ಲ.

* * *

ಈ ಸಲ ‘ನೀವು ಹೇಳಿದಂತೆ’ ಎಂದು ಇತ್ತಂಡದವರೂ ಒಪ್ಪಿದ್ದಾರೆ. ಬ್ರಿಟಿಷರು ತಮ್ಮ ಸಾಧನೆಯಲ್ಲಿ ಈ ಬಾರಿ ಗೆಲ್ಲಬಹುದು. ‘ಮರಳಿ ಯತ್ನವ ಮಾಡು’ ಎನ್ನುವದು ಸುಳ್ಳಲ್ಲ!

— ದೂತ.

# ಚುಂಬನದ ರಿಕಾರ್ಡು ನಾವು ಮುರಿಯಬಹುದಿತ್ತು!

ಒಂದು ಹುಚ್ಚು ಹರಟೆ

ಹರಟೆಗಾರ:

**ದೇಶಭಕ್ತ ಹಾಗೂ ಚುಂಬನಪ್ರಿಯ**

ಹೌದು. ಹಿಂದಿನ ಕಾಲದಂತಾದರೆ ನಾವೇ ಮುರಿಯಬಹುದಿತ್ತು. ಆದರೆ, ಅಯ್ಯೋ ನಮ್ಮ ಹಿಂದುಸ್ಥಾನದ ಅವಸ್ಥೆಯೇ! ಲೋಕದ ಯಾವದಾದರೊಂದು ರಿಕಾರ್ಡು ಮುರಿಯುವಷ್ಟರ ಸಾಹಸ ನಮ್ಮಲ್ಲಿಲ್ಲದೆ ಹೋಯಿತಲ್ಲಾ! ನಮ್ಮ ಹಿರಿಯರು ಎಂಥೆಂಥದ್ದನ್ನೆಲ್ಲಾ ಮುರಿದಿದ್ದರು! ಶ್ರೀ ರಾಮಚಂದ್ರ ಶಿವಧನುಸ್ಸನ್ನು ಮುರಿದು ಸೀತೆಯನ್ನು ವರಿಸಿದ್ದ. ಹನುಮಂತ ಸೇತುಬಂಧನಕ್ಕಾಗಿ ಕೈಲಾಸ ಪರ್ವತದ ಶಿಖರವನ್ನೇ ಮುರಿದು ತಂದು ಹಾಕಿದ್ದ. ಭೀಮಸೇನ ಬಕಾಸುರನ ಅಷ್ಟು ತೋರವಿದ್ದ ಕುತ್ತಿಗೆಯನ್ನೇ ಮುರಿದು ಹಾಕಿದ್ದ. ಇಂತವರ ವಂಶದಲ್ಲಿ ಹುಟ್ಟಿದ ನಾವು ಈಗ ಒಂದೇ ಒಂದು ರಿಕಾರ್ಡನ್ನಾದರೂ ಮುರಿಯುವದು ಬೇಡವೆ? ಹಾಯ್ ಭಾರತ ಮಾತೆ! ನಿನ್ನ ದುರವಸ್ಥೆಯೆ! ನಿಜ, ಆದರೆ ನಾನು ಹೀಗೆ ದುಃಖಿಸಿ ಫಲವೇನು? ನಮ್ಮಲ್ಲಿ ರಿಕಾರ್ಡು ಮುರಿಯುವವರು ಇಲ್ಲವೇ ಇಲ್ಲವೆಂದರೇನು? ಮೊನ್ನೆ ದೂಮಪ್ಪ ಶೆಟ್ಟಿ ಒಂದು ರಿಕಾರ್ಡು ಮುರಿಯಲಿಲ್ಲವೆ? 'ಸುಬ್ಬನಿಗೆ ೧೬ ವರ್ಷ ತುಂಬುವವರೆಗೆ ಆಸ್ತಿ ದೂಮಣ್ಣ ಸೆಟ್ಟಿಯ ಸ್ವಾಧೀನವಿರಬೇಕು — ಅವನು ಆದರ ಸಾಲನನ್ನು ತೀರಿಸಿ ಸುಬ್ಬನಿಗೆ ಪ್ರಾಯ ತುಂಬಿದಾಗ ಬಿಟ್ಟುಕೊಡಬೇಕು'—ಎಂದು ೧೨ ವರ್ಷಗಳ ಹಿಂದೆಯೇ ರಿಕಾರ್ಡಾಗಿತ್ತು-ವಾಯಿದೆಯಾಗಿ ವ್ಯವಹರಣೆ ನಡೆದಾಗ ಆಸ್ತಿ ತನ್ನ ಸ್ವಂತ ಹಕ್ಕಿನದೆಂದು ವಾದಿಸಿ ದೂಮಪ್ಪ ಶೆಟ್ಟಿ ಆ ರಿಕಾರ್ಡು ಮುರಿಯಲಿಲ್ಲವೆ? ಮತ್ತೆ ರಿಕಾರ್ಡು ಮುರಿಯುವವರಿಲ್ಲವಲಾ ಎಂದು ಅಳುವದೇಕೆ?

ಹೌದು. ಆದರೆ ಅದು ನಮ್ಮೊಳಗಿನ ರಿಕಾರ್ಡಾಯಿತು. ಯುರೋಪಿಯಾನರು—ನಮ್ಮನ್ನು ಇಂತಹ ದುರವಸ್ಥೆಗೊಳಪಡಿಸಿದ ಆ ಬಿಳಿ ಮೋರೆಯವರು ಮಾಡುವ ರಿಕಾರ್ಡನ್ನು ಮುರಿಯುವವರು ನಮ್ಮಲ್ಲಿಲ್ಲವಲ್ಲಾ ಎಂದೇ ನನ್ನ ಸಂತಾಪ. ನೋಡಿ—ಈಜುವದರಲ್ಲಿ, ಓಡುವದರಲ್ಲಿ, ಓಡಿಸುವದರಲ್ಲಿ - ಎಲ್ಲಕ್ಕೂ ಅವರು ಮಾಡಿಟ್ಟ ರಿಕಾರ್ಡೇ ಕೊನೆಯದು. ನಾವು, ಭಾರತೀಯರು ಮುಂದೆ ಬರಬೇಕಾದರೆ ಅಂಥಾ ಕೆಲವು ರಿಕಾರ್ಡುಗಳನ್ನಾದರೂ ಮುರಿಯಬೇಕು. ಶನಿವಾರದ ಪತ್ರಿಕೆಯಲ್ಲಿ 'ಮಿಸ್. ಮಾರ್ಗರೆಟ್ ಘಂಟೆಗೆ ೫೦ ಮೈಲಿನಂತೆ ಸೈಕಲು ಬಿಟ್ಟಳು' ಎಂದು ಬಂದರೆ ಆದಿತ್ಯವಾರದ ಪತ್ರಿಕೆಯಲ್ಲಿಯೇ ಬರಬೇಕು—'ಕುಮಾರಿ ದುರ್ಗಿ ಘಂಟೆಗೆ ೫೨॥ ಮೈಲುಗಳಂತೆ ಸೈಕಲು ಓಡಿಸಿ ರಿಕಾರ್ಡು (ಹಾದಿಗರ ಕೈ ಕಾಲಲ್ಲ) ಮುರಿದಳು' ಎಂದು! ಹೀಗೆ ಕೆಲವು ರಿಕಾರ್ಡುಗಳನ್ನಾದರೂ ನಾವು ಹರಿದು ಹಾಕಿದರೆ, 'ಹಿಂದೀಯರು ಸ್ವರಾಜ್ಯಕ್ಕೆ ಅರ್ಹರು' ಎಂಬುದಕ್ಕೆ ಬೇರೆ ರಿಕಾರ್ಡೇ ಬೇಡ. ಆದರೆ ನಮ್ಮ ಧುರೀಣರಿಗೆ ಈ ಆಲೋಚನೆಯೇ ಬರುವದಿಲ್ಲವಲ್ಲಾ—ಅದೀಗ ನಾನು ಹೇಳುವದು!

ಆದರಲ್ಲಿಯೂ ಒಂದು ಸಂಶಯ. ರಿಕಾರ್ಡು ಮುರಿಯದೆ ಸ್ವರಾಜ್ಯ ಸಿಕ್ಕಲಿಲ್ಲವೋ—ಸ್ವರಾಜ್ಯ ಸಿಕ್ಕದೆ ರಿಕಾರ್ಡು ಮುರಿಯಲಾಗಲಿಲ್ಲವೋ? 'ಆಲಯವು ಬಯಲೊಳಗೋ-ಬಯಲು ಆಲಯದೊಳಗೋ? 'ಮದುವೆಯಾಗದೆ ಹುಚ್ಚು ಬಿಡದು-ಹುಚ್ಚು ಬಿಡದೆ ಮದುವೆಯಾಗದು'-ಹೀಗಾಯಿತಲ್ಲಾ! ನೋಡಿ-ನ್ಯೂಯೋರ್ಕಿನಲ್ಲಿ ಮಿಸ್. ಕೆರಿಟ್ ಮತ್ತು ಮಿಸ್ಟರ್ ಜಂಕಿನರು ಈಜುವ ಸ್ಪರ್ಧೆಯ ಎಲ್ಲಾ ರಿಕಾರ್ಡುಗಳನ್ನು ಮುರಿದು (ಅಥವಾ ಅದೇ ನೀರಿನಲ್ಲಿ ಮುಳುಗಿಸಿ) ಮೇಲೆ ಬಂದರೆನ್ನಿ. ೧೨ ಮೈಲುದ್ದದ ಕಾಲುವೆಯನ್ನು ಮಿಸ್ ಕೆರಿಟ್ ೧ ಘಂಟೆ ೨ಮಿನಿಟನಲ್ಲಿಯೂ ಜಂಕಿನ್ ೧ಘಂಟೆ ೨ಮಿ. ೪೦ಸೆಕುಂದಗಳಲ್ಲಿಯೂ ಈಜಿ ದಾಟಿದರೆನ್ನುವ. ಕೆರಿಟಳ ಬೆನ್ನಲ್ಲಿಯೇ (ಆದ್ದರಿಂದಲೇ ಅವನಿಗೆ ಅಷ್ಟು ಈಜಲು ಸಾಧ್ಯವಾಯಿತು.) ಜಂಕಿನನಿದ್ದುದರಿಂದ ಅವರೊಳಗೆ ಕೆಲವೇ ಸೆಕುಂದಗಳ ವ್ಯತ್ಯಾಸ! ಹೇಗೂ ಇರಲಿ, ಅವರೊಂದು ರಿಕಾರ್ಡು

ಮಾಡಿದರಲ್ಲ. ಅಂತಹದೇ ಒಂದು ರಿಕಾರ್ಡನ್ನು ನಾವು ಎಲ್ಲಿಂದ ತಂದು ತೋರಿಸುವದು ಹೇಳಿ! ಪಲ್ಯಕ್ಕೆ ಉಪ್ಪು ಹೆಚ್ಚಿಗೆ ಹಾಕಿದಳೆಂದು, ಸೌಭಾಗ್ಯವತಿ. ಪಾಚುವನ್ನು ಮಹಾರಾಜೇಶ್ರೀ. ಕುಜುಂಬನು ಹೊಡೆಯಲು ಹಿಡಿಕೊಂಡು ಹೋಗಿ, ಇಬ್ಬರೂ ಐದು ಮಿನಿಟನೊಳಗೆ ಮನೆಗೆ ಮೂರು ಮೂರು ಸುತ್ತು ತೆಗೆದ ರಿಕಾರ್ಡೇನೋ ನಮ್ಮಲ್ಲಿ ಉಂಟು ಅದನ್ನು ತೋರಿಸುವ ಕೆಲಸ ಮಾತ್ರ ನಿಮಗೆ! ಹೀಗೆ ಈಜುವ ಸ್ಪರ್ಧೆಯಲ್ಲಿ ಅವರೇ ಮೇಲು ಎಂದಾಯಿತು. ಇನ್ನು ಸೌಂದರ್ಯ ಸ್ಪರ್ಧೆಯಲ್ಲಿ? ಆದರಲ್ಲೂ ಅವರೇ! ಮಿಸ್ ಕೆಲಿಫೋರ್ನಿಯಾ, ಮಿಸ್ ಪ್ಯಾರಿಸ್, ಮಿಸ್ ಲಂಡನ್‌ನಂಥವರನ್ನು ನಮ್ಮವರು ಸೌಂದರ್ಯದಲ್ಲಿಯೂ ಸ್ಪರ್ಧಿಸುವದೇ? ಸೌಂದರ್ಯಸ್ಪರ್ಧೆಗೆಂದು ನಮ್ಮ ಸ್ತ್ರೀಯರನ್ನು ಕಳುಹಿಸಿದರೆ ಕಳುಹಿಸಿದವರಿಗೆ ತಲೆಯಿಲ್ಲವೆಂದೂ, ಹಿಂದೀ ಸ್ತ್ರೀಯರಿಗೆ ಎರಡು ಕಣ್ಣು ಹೊರತು ಮಿಕ್ಕ ಯಾವ ಅಂಗಗಳೂ ಇಲ್ಲವೆಂದೂ ಆಗ ತಿಳಿದುಕೊಂಡಾರು. ಹಿಂದೀ ಸ್ತ್ರೀಯರ ಸೀರೆ, ಕುಪ್ಪಸ, ಪರ್ದೆಗಳ ನಡುವೆ ಎರಡು ಕಣ್ಣುಗಳು ಮಾತ್ರ ಹೊರಗೆ ಬಂದು ಆ ಎಲ್ಲಾ 'ಮಿಸ್'ಗಳನ್ನು ಸ್ಪರ್ಧಿಸಿ ಗೆಲ್ಲುವದೆಂದರೆ ಹೇಗದು.? ಮಿಸ್ ಕೆಲಿಫೋರ್ನಿಯಾ, ಲಂಡನ್, ಯಾ ಪೇರಿಸ್-ಇವರಲ್ಲಿ ಸೊಂಟದ ಮೂರು ಇಂಚಗಲದ ಕಾಚವೊಂದನ್ನು ಬಿಟ್ಟರೆ ಮಿಕ್ಕುದೆಲ್ಲವೂ ಸೌಂದರ್ಯವೇ! ಆದ್ದರಿಂದ ಸೌಂದರ್ಯ ಸ್ಪರ್ಧೆಯಲ್ಲಿ ಗೆಲ್ಲುವ ಆಸೆ ಬಿಡುವ! ಇನ್ನು ಚುಂಬನಾಸ್ಪರ್ಧೆಯೊಂದುಂಟು. ಅದರಲ್ಲಾದರೂ ನಾವು ರಿಕಾರ್ಡು ಮುರಿಯಬಹುದೆ? "ಯಾರಿದ್ದಾರಯ್ಯಾ ನಮ್ಮಲ್ಲಿ ಅಂತಹ ಮೀಸೆ ಹೊತ್ತ ಗಂಡಸು?" ಎಂದು ಕೇಳುತ್ತೀರೇನು? ಸತ್ಯ, ನಿಜ, ಸಂಪೂರ್ಣ ಸತ್ಯ! ನಮ್ಮಲ್ಲಿ ನಿಜವಾಗಿಯೂ ಮೀಸೆ ಹೊತ್ತ ಗಂಡಸರಿರುತ್ತಿದ್ದರೆ ಈ ಒಂದು ಸ್ಪರ್ಧೆಯ ಮಟ್ಟಿಗೆ ಖಂಡಿತವಾಗಿಯೂ ನಾವು ಗೆಲ್ಲಬಹುದಿತ್ತು. ಆ ಚಾನ್ಸು ಕಾಲ ವಿಪರೀತದಿಂದ ತಪ್ಪಿಹೋಯಿತು! ಆದಕ್ಕೇ ಹೇಳಿದೆ- ಹಿಂದೂದೇಶದ ದುರ್ದೈವವೇ ಎಂದು!

ಸ್ವಲ್ಪ ಹಿಂದೆ ನೋಡಿ- ಅಂದರೆ ಹಿಂದಿನ ಕಾಲದತ್ತ ನೋಡಿ- ಕೃತ, ತ್ರೇತಾ, ದ್ವಾಪರಯುಗಗಳಾರಭ್ಯ ಈ ಯುಗದಲ್ಲಿ ಹತ್ತೊಂಭತ್ತನೇ ಶತಮಾನದ ವರೆಗೂ ನಮ್ಮ ಭಾರತ ಭೂಮಿಯಲ್ಲಿ ಮೀಸೆಹೊತ್ತ ಗಂಡಸರೇ ಇದ್ದರು. ಭೀಮಾರ್ಜುನರು, ರಾವಣ ಕೌರವೇಶ್ವರರು, ಅವರಿವರೆಂದೇನು ಎಲ್ಲರಿಗೂ ಪೌರುಷದ ಕುರುಹಾಗಿದ್ದುದು ಮೀಸೆಯೊಂದೇ. ಭೀಮನಿಗೆ ಸಿಟ್ಟು ಬಂತು, ಇಲ್ಲವೇ ರಾವಣೇಶ್ವರನಿಗೆ ದೇವೇಂದ್ರನ ಮೇಲೆ ಕಣ್ಣುಬಿತ್ತು- ಎಂದಾಡೊಡನೆ ಆಗುತ್ತಿದ್ದುದೇನು? -'ತುದಿ ಮೀಸೆ ಕುಣಿದುದು; ಕಣ್ಣು ಕೆಂಪಡರಿದುದು?' ರಾಮಾಯಣ ಭಾರತಗಳಲ್ಲಿರುವುದನ್ನು ನೋಡಿದ್ದಿರಲ್ಲ. ಸಿಟ್ಟುಬರುವಾಗ, ನೀವು ನಾನು ಬರುವ ಹಾಗೆ ಡ್ರೆಸ್ಸುಗಿಸ್ಸು ಹಾಕಿಕೊಂಡು ಮದುವಣಿಗನ ಹಾಗೆ ಬರುವದಿಲ್ಲ; ಅದು ಬಂತೆಂ



ಗುರುವಣ್ಣನ ಮೀಸೆಯ ಜಿಡುಪಿನಿಂದ ಸೂರಕ್ಕನ ಮೂಗುತಿಯು ಸೆರೆಬಿಡಿಸಲು ನೀವು ಕೈ ಹಾಕುವುದಿಲ್ಲವಲ್ಲಾ!— ಅವರಾಗಿ ಬಿಡಿಸಿಕೊಳ್ಳುವಾಗ ಕಡಿಮೆಯೆಂದರೆ ಇಪ್ಪತ್ತು ಮಿನಿಟು ಬೇಕೇ ಬೇಕು!

ಬುದು ಕುಡಿಮೀಸೆ ಕುಣಿದೇ ಗೊತ್ತಾಗಬೇಕು. ಹೀಗೆ ಕುಡಿ ಮೀಸೆ ಕುಣಿಸಿಯೇ ಅವರೆಲ್ಲ 'ಮೀಸೆ ಹೊತ್ತ ಗಂಡಸರು' ಆಗಿದ್ದರು. ೧೯ನೇ ಶತಮಾನದ ನಂತರ ನಾವು ಮೀಸೆಹೊತ್ತ ಗಂಡಸರಲ್ಲ. ಇದಕ್ಕೆ ಒಂದನೇ ದೃಷ್ಟಾಂತ, ಆ ಕಾಲದ ನಂತರ ಬ್ರಿಟಿಷರು ನಮ್ಮನ್ನಾಳುತ್ತಿರುವದು. ಎರಡನೇ ನಿದರ್ಶನ, ಅಂದಿನಿಂದ ನಮ್ಮ ಗಂಡಸರ ಮುಖದಲ್ಲಿಯೂ ಮೀಸೆಯಿಲ್ಲದಿರುವದು.

ಹೌದು. ಮೀಸೆಹೊತ್ತ ಗಂಡಸರಾಗದೆ ನಾವು ಯಾವ ಕೆಲಸವನ್ನಾದರೂ ಮಾಡುವದು ಹೇಗೆ? ಚುಂಬನಾಸ್ಪರ್ಧೆಯಲ್ಲಿ ಗೆಲ್ಲುವದು ಹೇಗೆ? ಪೌರುಷಯುಕ್ತವಾದ ಯಾವ ಕೆಲಸವನ್ನಾದರೂ ಮಾಡುವದು ಹೇಗೆ? ಅಯ್ಯೋ, ನಮ್ಮ ಭಾರತ ಮಾತೆಯ ದುರವಸ್ಥೆಯೆ!

ನೋಡಿ. ಚುಂಬಿಸುವುದರಲ್ಲಿ ಪಾಶ್ಚಾತ್ಯರ ದೊಡ್ಡ ದಾಖಲೆಯೆಂದರೆ ೧೫ ಮಿನಿಟು. "ಅಷ್ಟೊ ಕಡಿಮೆಯೆ?" ಎಂದು ಸೋಜಿಗಪಡಬೇಡಿ. ಅದು ಹೇಗೆ ಎಂಬುದನ್ನೂ ಹೇಳುತ್ತೇನೆ ಕೇಳಿ. ಮಿಸ್. ಸಿಸಿನ್ ಮತ್ತು ಮಿಸ್ಟರ್ ಹೆಂಡನ್ ಚುಂಬನಾದಾಖಲೆಯಲ್ಲಿ ಮಿಗಿಲಾಗಬೇಕೆಂಬ ಉಮೇದಿನಿಂದ ರಂಗಕ್ಕಿಳಿದರೆನ್ನಿ. ಮಿಸ್. ಸಿಸಿನಳ ತುಟಿಗಳ ಮೇಲೆ ಎಂದಿನಂತೆ ಮುಕ್ಕಾಲಿಂಚು ಪೌಡರ್ ಇರಲೇ ಬೇಕು. ಮಿಸ್ಟರ್ ಹೆಂಡನ್ ಇಪ್ಪತ್ತು ಸಿಗರೇಟುಗಳನ್ನಾದರೂ ಎಳೆದು ಮುಗಿಸಲೇಬೇಕು. ಇಲ್ಲವಾದರೆ ಅವರಿಬ್ಬರಲ್ಲಿಯೂ ಕಾರ್ಯೋತ್ಸಾಹವೇಳದು. ಆಯ್ತು, ಬೆಳಗ್ಗೆ ಏಳು ಘಂಟೆಗೆ ಸರಿಯಾಗಿ ಇವರಿಬ್ಬರೂ ಚುಂಬಿಸಿ ಕೊಳ್ಳಹತ್ತಿದರೆನ್ನಿ. ಹೆಂಡನನ ತುಟಿಗಳು ಸಿಸಿನಳ ತುಟಿಗಳ ಮೇಲಿನ ಮುಕ್ಕಾಲು ಇಂಚು ದಪ್ಪದ ಮಂಕುಬೂದಿ(ಪೌಡರ್)ಯನ್ನು ಭೇದಿಸಲು ಒಂದೇ ಒಂದು ಮಿನಿಟು ಸಾಕಾಯಿತೆನ್ನುವ. ಹೀಗೆ ಇವರ ತುಟಿಗಳ ಪೆಟ್ಟು ತಿಂದ ಆ ಪೌಡರಿಗೆ ಪುನಃ ತನ್ನ ಸ್ಥಾನವಾದ ಡಬ್ಬಿಯೊಳಗೇನೆ ಸೇರಲು ಮನಸಾಗುವದು ಸ್ವಾಭಾವಿಕ. ಸರಿ, ಅಲ್ಲಿ ತಾಗಿಕೊಂಡೇ ಉಂಟಲ್ಲ—ಹೆಂಡನನ ಮೂಗಿನ ಸೊಳ್ಳೆ. ಅದನ್ನೇ ಹೊಕ್ಕಿತು! ನಿಮ್ಮ ಮೂಗಿನ ಸೊಳ್ಳೆಯನ್ನೊಮ್ಮೆ ಪೌಡರ್ ಡಬ್ಬಿಯಾಗಿ ಮಾಡಿ ನೋಡಿದರೆ, ಮಿಸ್ಟರ್ ಹೆಂಡನನಿಗೆ ಆಗ ಆಗುವ ಕಷ್ಟವು ಎಷ್ಟೆಂದು ನಿಮಗೂ ತಿಳಿದೀತು. ಇತ್ತ ಇವನ ಬಾಯಿಯ ಸಿಗರೇಟಿನ ವಾಸನೆಯನ್ನು ಅವನೇನು ಮನೆಯಲ್ಲಿ ಬಿಟ್ಟು ಬರುತ್ತಾನೆಯೆ? ಆ ಪರಿಮಳವು ಅದೇ ಕಾಲಕ್ಕೆ ಮಿಸ್. ಸಿಸಿನಳ ಸೊಳ್ಳೆಗಳನ್ನು ಹೊಕ್ಕಿತು. ಸಿಸಿನಳಿಗೆ ಎಂತಹ ಮೂಗುಬ್ಬಸವಾದೀತೆಂಬುದನ್ನು ನೀವೇ ಊಹಿಸಿಕೊಳ್ಳಿ. ಹೀಗೆ ಮಿಸ್ಟರನ ಮೂಗಿನೊಳಗೆ ಮಂಕುಬೂದಿ, ಮಿಸ್.ಳ ಮೂಗಿನೊಳಗೆ ವಿಷಗಾಳಿ ಸೇರಿಕೊಂಡಲ್ಲಿ ಅವರು ಕೆಲವು ಮಿನಿಟು ಒದ್ದಾಡಿ, ಆದಷ್ಟು ಬೇಗನೆ ದೂರ ಸರಿಯದೆ ಮತ್ತೇನು ಮಾಡಿಯಾರು? ಮೂಗು ಮತ್ತು ತುಟಿಗಳು ಹತ್ತಿರ ಹತ್ತಿರವಿರುವಷ್ಟು ಕಾಲ ಅವರಿಗೆ ಚುಂಬನಾ ಸ್ಪರ್ಧೆಯ ದಾಖಲೆಯನ್ನು ೧೫ ಮಿನಿಟುಗಳಿಗಿಂತ ಹೆಚ್ಚಿಸಲು ಸಾಧ್ಯವಿಲ್ಲವೆನ್ನಿ! ಇನ್ನು ಮೀಸೆಹೊತ್ತ ಗಂಡಸರಿರುತ್ತಿದ್ದರೆ ಈ ಒಂದು ಸ್ಪರ್ಧೆಯನ್ನಾದರೂ ನಾವು ಗೆದ್ದು ಬಿಡಬಹುದಿತ್ತು ಎಂದೆನಲ್ಲಾ, ಅದು ಹೇಗೆ ಎಂಬುದನ್ನೂ ತೋರಿಸುತ್ತೇನೆ. ನೋಡಿ—೧೯ನೇ ಶತಮಾನದಂತಾದರೆ ನಮ್ಮಲ್ಲಿ ಗಂಡಸರೆಲ್ಲರಿಗೂ ಗಲ್ಲ ಮೀಸೆ; ಹೆಂಗಸರಿಗೆ ಕಾಲಡಿ ಉದ್ದದ ಮೂಗುತಿ. ಮಿಸ್. ಸಿಸಿನ್, ಮಿಸ್ಟರ್. ಹೆಂಡನ್ ಜತೆಯು ೧೫ ಮಿನಿಟನೊಳಗೆ ಸೋತು ಮೂಗು ತಿಕ್ಕುತ್ತಾ ಕಳಬಿಟ್ಟರೆಂದಾದೊಡನೆ ನಮ್ಮ ಶ್ರೀಮಾನ್ ಗುರುವಣ್ಣ ಮತ್ತು ಶ್ರೀಮತಿ ಸೂರಕ್ಕನನ್ನು ರಂಗಕ್ಕಿಳಿಸಿದರೆ ಸರಿ. ಇಬ್ಬರೂ ಬಾಯಿಯ ವೀಳ್ಯವನ್ನು ಉಗುಳಿಕೊಂಡು ಹೋಗಬೇಕೆಂದು ಮೊದಲೇ ಸೂಚನೆ ಕೊಟ್ಟರಾಯಿತು. ಅವರು ಚುಂಬಿಸಿಕೊಳ್ಳಹತ್ತುವರು. ಅಕ್ಕನ ತುಟಿಗಳೂ ಅಣ್ಣನ ತುಟಿಗಳೂ ಇದಿರಿದಿರಾಗಿ ಕುಸ್ತಿ ಹಿಡಿಯುವಾಗ, ಅಕ್ಕನ ತುಟಿಯಲ್ಲಿರುವ ಮೂಗುತಿಯೂ ಅಣ್ಣನ ತುಟಿ ಮೇಲಿನ ಮೀಸೆಯೂ ಹೇಡಿಯಂತೆ ಬೆನ್ನ ಹಿಂದೆ ಹೋಗಿ ನಿಲ್ಲುತ್ತದೇನು? ಇಲ್ಲ. ಅವೂ ಹೋರಾಡಿಕೊಳ್ಳುತ್ತವೆ. ಆಗ ಹೇಗಾದೀತು ನೋಡಿ. ಗುರುವಣ್ಣನ ಮೀಸೆಯೆಂದರೆ ದರ್ಬೆ ಹುಲ್ಲಿನ ಜೊಂಪೆಯೊಡನಾದರೂ ಸ್ಪರ್ಧಿಸುವ ಯೋಗ್ಯತೆಯುಳ್ಳದ್ದು. ಯಾವುದಾದರೊಂದು ಸಣ್ಣ ಹಕ್ಕಿ ಒಮ್ಮೆ ಹೊಕ್ಕಿಬಿಟ್ಟರೆ ಆ ಪೊದರಿನಿಂದ ಫಕ್ಕನೆ ಬಿಡಿಸಿಕೊಂಡು ಬರುವ ಆಸೆ ಬಿಡಬೇಕು! ಇಂಥಾ ಗೊಂಚಲು ಮೀಸೆಯೊಳಗೆ ಸೂರಕ್ಕನ ಮೂಗುತಿ ಸಿಕ್ಕಿಬಿಟ್ಟರೆ ಅದನ್ನು ಬಿಡಿಸಿಕೊಳ್ಳಲು ಕಡಿಮೆ

ಯೆಂದರೂ ಇಪ್ಪತ್ತು ಮಿನಿಟು ಬೇಕು! ಸಾಕಲ್ಲಾ—ತುಟಿತುಟಿಗಳನ್ನೊತ್ತಿಕೊಂಡು ೧೫ನೇ ಮಿನಿಟನಲ್ಲಿ ಸೋತರೆಂದೇ ಬೇಕಾದರೆ ಹಿಡಿಯೋಣ—ಆ ಮೇಲೆ ಮೂಗುತಿಯನ್ನು ಮೀಸೆಯ ಸೆರೆಯಿಂದ ಬಿಡಿಸಲಿಕ್ಕೆ ೨೦ ಮಿನಿಟು—ಹೀಗೆ ಚುಂಬನಾ ರಿಕಾರ್ಡನ್ನು ೩೫ ಮಿನಿಟಗೇರಿಸುವದಕ್ಕೆ ತೊಂದರೆಯೇನಿತ್ತು? ಬೇರಾವ ತೊಂದರೆಯೂ ಇಲ್ಲ. ಗುರುವಣ್ಣನ ಮೀಸೆಯ ಸಳುಗಳಲ್ಲಿ 1/8 ಅಂಶ ಹರಿದು ಹೋಗಬಹುದು. ಸೂರಕ್ಕನ ಮೂಗಿನ ತೂತು ಅರ್ಧ ಇಂಚಿನಷ್ಟು ಅಗಲಕ್ಕೆ ಹರಿದು ಹೋಗಬಹುದು- ದೊಡ್ಡದಲ್ಲ. ಆವುಗಳ ಜತೆಯಲ್ಲಿಯೇ ಯುರೋಪಿಯಾನರು ಮಾಡಿಟ್ಟ ಚುಂಬನಾ ರಿಕಾರ್ಡೂ ಹರಿದು ಹೋಗುತ್ತದಲ್ಲಾ! ಹಿಂದುಸ್ಥಾನಕ್ಕೊಂದು ರಿಕಾರ್ಡು ಮುರಿದಕೀರ್ತಿ ಬರುತ್ತದಲ್ಲಾ.

ಆದರೆ ಈಗ ಏನು ಮಾಡೋಣ! ಅಯ್ಯೋ ನಮ್ಮ ದುರ್ಬುದ್ಧಿಯೇ! ನಮ್ಮಲ್ಲಿ ಈಗ ಮೀಸೆಯಿದ್ದ ಗಂಡಸರೂ ಇಲ್ಲ; ಮೂಗುತಿಯಿದ್ದ ಹೆಂಗಸರೂ ಇಲ್ಲ. ಸ್ವಾತಂತ್ರ್ಯ ತಪ್ಪಿ ಹೋದರೆ ಪುನಃ ಸಂಪಾದಿಸಬಹುದೆಂಬ ಆಸೆ ಕಟ್ಟಿಕೊಳ್ಳಬಹುದು; ಸ್ವಾತಂತ್ರ್ಯ ಸಂಪಾದನೆಯ ಸಾಧನಗಳನ್ನೇ ಕಳಕೊಂಡರೆ ಮತ್ತೆ ಮಾಡುವದೇನಯ್ಯಾ? ಲೋಕದ ಎಲ್ಲಾ ರಾಷ್ಟ್ರಗಳೂ ಒಂದನ್ನೊಂದು ಸ್ಪರ್ಧಿಸಲು ತಮ್ಮ ಸಾಧನಗಳನ್ನು ಹೆಚ್ಚಿಸುತ್ತಾ ಇವೆ. ನಾವು ನಮ್ಮ ಸಾಧನಗಳನ್ನು ಕಳಕೊಳ್ಳುತ್ತಾ ಬರುತ್ತಿದ್ದೇವೆ. ಮೀಸೆ ಮೂಗುತಿಗಳನ್ನು ಕಳಕೊಂಡು, ಚುಂಬನದ ಆಯುಸ್ಸನ್ನೂ ಕಡಿಮೆಮಾಡಿ ಹಾಯ್ ಭಾರತ ಮಾತೆ, ನಾವು ನಿನಗೆ ಮಾಡಿದ ದ್ರೋಹವೆ!

---


ನೀವು ಪ್ರಪಂಚದ ವೈಶಿಷ್ಟ್ಯಗಳನ್ನು ತಿಳಿಯಬಯಸುವಿರಾ : : : ?

ಹಾಗಾದರೆ

ಪ್ರತಿ ತಿಂಗಳ ತಾ. 15ಕ್ಕೆ ಪ್ರಕಟವಾಗುವ

ವರ್ತಕ ಧುರೀಣ

ಆಧುನಿಕ ಭಾರತಕೊಪ್ಪುವ ರಾಷ್ಟ್ರೀಯ ಧ್ಯೇಯದ ಮಾಸ ಪತ್ರಿಕೆಯನ್ನು ಅಗತ್ಯವಾಗಿ ಓದಲೇಬೇಕು

ಈ ಪತ್ರಿಕೆಯಲ್ಲಿ ವಿದ್ವಜ್ಜನರಿಂದ ಬರೆಯಲ್ಪಡುವ ರಾಜಕೀಯ, ಸಾಮಾಜಿಕ, ಐತಿಹಾಸಿಕ, ಪ್ರಾಪಂಚಿಕ, ಧಾರ್ಮಿಕ ಮೊದಲಾದ ವಿವಿಧ ಲೇಖನಗಳೂ, ಕಥೆಗಳೂ, ಉಪನ್ಯಾಸಗಳೂ, ಟೀಕೆ-ಟಿಪ್ಪಣಿಗಳೂ ಪ್ರಕಟವಾಗುತ್ತಿವೆ.

ಪ್ರತಿಯೊಂದು ಸಂಚಿಕೆಯಲ್ಲೂ ಪ್ರಕಟವಾಗುವ ಮಿಸ್ಟರ್ ಜಮದಗ್ನಿ ಯವರ ರಿಪೋರ್ಟು - ಯಾ - ಸಿಂಹಾವಲೋಕನವನ್ನು ಓದಲು ಮರೆಯಬೇಡಿರಿ

ಯಾವುದೇ ಸರಕಿನ ಪ್ರಚಾರವಾಗಬೇಕಾದರೂ - ಈ - ಪತ್ರಿಕೆಯು ಜಾಹೀರಾತುದಾರರಿಗೊಂದು ಉತ್ತಮ ಸಾಧನ

ಜಾಹೀರಾತುಗಳ ದರಕ್ಕೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

೧೯೩೫ರಲ್ಲಿ ಜನ್ಮವೆತ್ತಿ ಜನಾದರಣೀಯವಾದ ಈ ಪತ್ರಿಕೆಯು ತನ್ನದೇ ಆದ ಒಂದು ವಿಶಿಷ್ಟ ಧ್ಯೇಯವನ್ನು ಕಾಯ್ದುಕೊಂಡಿದೆ

ವಾರ್ಷಿಕ ಚಂದಾ: ಊರವರಿಗೂ ಪರಊರವರಿಗೂ :ರೂ.1-8-0

ಬಿಡಿ ಸಂಚಿಕೆ 0-2-0
ಹಿಂದಿನ ಸಂಚಿಕೆ 0-3-0

ಪ್ರೊಪ್ರೈಟರ್, ವರ್ತಕ ಧುರೀಣ, ಉಡುಪಿ, ದಕ್ಷಿಣ ಭಾರತ.

# ಮಾನವನ ಅಸ್ಥಿಪಂಜರ

ಬರೆದವರು:
ಶ್ರೀ. ಯನ್. ಶ್ರೀಪಾದ ರಾವ್, ಎಲ್. ಎಂ. ಪಿ.
ಮದ್ರಾಸ್ ಸರಕಾರದ (೯೧೦ರ ಸ್ವರ್ಣ ಪದಕದವರು.

ಈ ನಮ್ಮ ಮಾನವ ಶರೀರವು ಎಲ್ಲಾ ಕಟ್ಟಡಗಳಂತೆ ಮತ್ತು ಯಂತ್ರಗಳಂತೆ ಇದೆ. ಈ ಶರೀರಕ್ಕೆ ಆಧಾರವು ಎಲುಬಿನ ಪಂಜರ (Skeleton) ಎಲುಬುಗಳಲ್ಲಿ ಹೆಚ್ಚಾಗಿ ಉದ್ದವಾಗಿರುವಂಥವು ಕೈ, ಕಾಲುಗಳಲ್ಲಿಯೂ (long bones) ಚಪ್ಪಟೆಯಾಗಿರುವಂಥವು. (Flat bones) ತಲೆ, ಭುಜದ ಹಿಂಭಾಗದ ರೆಕ್ಕೆಗಳಲ್ಲಿಯೂ (Shoulder blades) ಅದರ ಪಕ್ಕದಲ್ಲಿಯೂ ಎಲುಬುಗಳು (Hip bones) ಎದೆಯಲ್ಲಿಯೂ (Breast-bones) ಇರುತ್ತವೆ. ಇಡೀ ದೇಹದಲ್ಲಿ ಶಿರಸ್ಸು ಯಾ ತಲೆಯೇ ಪ್ರಧಾನವಾದದ್ದು. ಸೃಷ್ಟಿಯಲ್ಲಿ ಮಾನವಜನ್ಮವೇ ಅತಿಶಯ ಶ್ರೇಷ್ಟವಾದದ್ದು. ಆದ್ದರಿಂದಲೇ ಮಾನವನ ತಲೆಯು ಉಚ್ಚಸ್ಥಾನ ಅಂದರೆ ಎಲ್ಲಕ್ಕೂ ಮೇಲೆ ಇದೆ. ಮಾತ್ರವಲ್ಲ, ತಲೆಬುರ್ಡೆಯು ಹೊರಗಿನಿಂದ ನೋಡಿದರೆ ಆನೆಯಂತಹ ದೊಡ್ಡ ಮೃಗಗಳ ತಲೆಬುರ್ಡೆಗಿಂತ ಚಿಕ್ಕದಾಗಿ ಕಂಡರೂ ಒಳಗಿರುವ ಮೆದುಳು ಮಾನವನದೇ ದೊಡ್ಡದು ಮತ್ತು ಭಾರವಾದದ್ದು. ಈ ತಲೆಬುರ್ಡೆಯಲ್ಲಿ ಮೆದುಳು ಅಲ್ಲದೆ ಕಣ್ಣು, ಕಿವಿ, ಬಾಯಿಯು ಕೂಡಾ ಇದೆ. ಉದ್ದ ಮತ್ತು ಚಪ್ಪಟೆ ಎಲುಬುಗಳಲ್ಲದೆ ಕೆಲವು ಆಯಾಯ ಉಪಯೋಗಕ್ಕೆ ಸರಿಯಾಗಿ ಹಸ್ತ ಮತ್ತು ಪಾದದ ಗಂಟುಗಳಲ್ಲಿ ಗುಂಡಾಗಿ ಇವೆ. ಕುತ್ತಿಗೆಗೆ ಮತ್ತು ಬೆನ್ನಿಗೆ ಎಲುಬುಗಳ ಒಂದು ಬಿದಿರಿನಂತಹ (Vertebral Column or back bone) ಅಂಡೆ ಇದೆ. ಬೆನ್ನಿನ ಈ ಬಿದಿರು ಅಂಡೆಯಲ್ಲಿ ನರಗಳ ಹಗ್ಗವಿದೆ (Spinal Cord). ಈ ಬೆನ್ನಿನಲ್ಲಿ ಎಲುಬು ಒಂದೇ ಇರುವುದಲ್ಲ ಇದರಲ್ಲಿ ೩೩ ಎಲುಬುಗಳಿವೆ. ಕುತ್ತಿಗೆಯಲ್ಲಿ ೭ (Cervical Vertebrae) ಶ್ವಾಸಕೋಶದ ಪಂಜರಕ್ಕೆ ಹಿಂಬದಿ ೩ (Dorsal or Thoracic Vertebrae) ಸೊಂಟದ ಹಿಂಬದಿ (Lumbar Vertebrae)೫. ಸೊಂಟದ ಕೆಳಗೆ ಇರುವ ಬೆನ್ನಿನ ಎಲುಬು ಸ್ವಲ್ಪಮಟ್ಟಿಗೆ ಚಪ್ಪಟೆಯಾಗಿವೆ ಎಂದೇ ಹೇಳಬೇಕು. ಆದರೆ ಇದರಿಂದ ನರಗಳು ಹೊರಡುವದರಿಂದ ಮತ್ತು ಗರ್ಭದಲ್ಲಿ ಮತ್ತು ಚಿಕ್ಕಂದಿನಲ್ಲಿ ಐದು ಬೇರೆ ಎಲುಬುಗಳಾಗಿ ತಿಳಿಯುವದರಿಂದ ಇವುಗಳನ್ನು (Sacrum) ಈ ಬೆನ್ನಿನ ಬಿದುರು



ಎಲುಬುಗಳಲ್ಲಿ (Vertebrae) ಸೇರಿಸಿಯದೆ. ಮತ್ತು ೫ ಬೇರೆಯಾಗಿದ್ದದ್ದು ಸೇರಿ ಒಂದೇ ಆದ್ದರೂ ೫ ಎಂತ ಲೆಖ್ಖ. ಹೀಗೆ ೨೯ ಬೆನ್ನಿನ ಬಿದುರುಎಲುಬುಗಳಲ್ಲದೆ ಮೃಗಗಳ ಬಾಲದೋಪಾದಿಯಲ್ಲಿ ೪ ಸಣ್ಣ ಎಲುಬು ತುಂಡುಗಳು ಸೇರಿವೆ. (Coccyx) ಈ ಬಾಲ ಎಲುಬುಗಳಿಂದ ನರ ನರಗಳು ಹೊರಡುವದಿಲ್ಲ.

ಎದೆಗೆ (Thorax) ಮುಂಭಾಗದಲ್ಲಿ ಚಪ್ಪಟೆಯಾದ (Breast bone) ಎಲುಬು ಹಿಂಭಾಗದಲ್ಲಿ (Thoracic Vortebrae) ಇವೆ. ಮತ್ತು ಪಕ್ಕದಲ್ಲಿ ೧೨ ಜೊತೆಉದ್ದವಾದ ಎಲುಬುಗಳು (Ribs) ಇವೆ. ಈ ೧೨ ಜೊತೆಗಳಲ್ಲಿ ಮೇಲಿನ ೭ ಜೊತೆ ಎದೆ ಎಲುಬಿಗೂ (Breast bone) ಹಿಂದೆ ಬೆನ್ನೆಲುಬಿಗೂ (Thoracic Vertabrae) ಸೇರಿಕೊಂಡಿವೆ ಇನ್ನೂ ನಡುವಿರುವ ೩ ಜೊತೆ ಒಂದಕ್ಕೊಂದು ಎದುರಿಗೆ ಸೇರಿವೆ. ಹಿಂಭಾಗದಲ್ಲಿ ಬೆನ್ನಲುಬಿಗೆ ಒಂದೊಂದಾಗಿ ಪ್ರತ್ಯೇಕ ಸೇರಿವೆ. ಕೆಳಗಿನ ಎರಡುಜೊತೆ ಹಿಂದೆಮಾತ್ರ ಬೆನ್ನೆಲುಬಿಗೆ ಸೇರಿವೆ. ಎದುರಿನಲ್ಲಿ ಯಾವದಕ್ಕೂ ಸೇರದೆ ಹೊಟ್ಟೆಯ ಹಿಂಭಾಗಕ್ಕೆ ತೇಲಿದಂತಿರುವದರಿಂದ (Floating ribs) ಅನ್ನುತ್ತೇವೆ. ಈ ಎದೆಯಲ್ಲಿ ಮುಖ್ಯವಾಗಿ ಶ್ವಾಸಕೋಶ (Lungs) ಮತ್ತು ಗುಂಡಿ (Heart) ಇರುತ್ತದೆ.

---

# ತರುಣಿ ತರಂಗಿಣಿ

ಬರೆದವರು:

**ಶ್ರೀ. ಯಂ. ಯನ್. ಸಿಂಹ**

ಕಿರುಗಲ್ಲ ಸುಲಿಪಲ್ಲ ತರುಣೀ ತರಂಗಿಣಿಯೆ
ಪ್ರವಹಿಪುದು ನಸುನಗುತದಾವ ಸಂತಸದ ಭರ-
ದಿಂದೆ? ನರಕೀಟಗಳಲಿಯ ಬಾಳು ಹಾಳೆಂದೆ?
'ಮನುಜರಿರವತಿಕಿರಿದು, ಸಿರಿದೆನ್ನ ಬಾಳೆ'ಂದು
ಕಲಕಲೆಂದೆನುತಲ,ಲಿಯುತಿಹೆಯೇಂ? ಬೆಜ್ಜರೆಡೆ
ಗೆಯ್ತುರ್ಪ ಪಡಿಯರನ ಪರಿಯಿಂ ಪರಿಯುತಿರುವೆ.
ಆ ನೀತಿ ಕಲ್ಗಳವು ಕೂಪಾರಗುಪಾಯನ
ತೆರಲೆಂದು ತಂದುಪ್ರೋ? ಹವಸದಾರ್ಧದನಕಂ
ಸಾಗಿಸ ಪ್ರೇಮಿ ಬಂಧುಗಳೈಸೆ ನಿಂದಿಹವು.
ಎಲೆಯುಬಲೆ ಕೋಮಲೆ ಕಠಿನ ಕಲ್ಗಳೊಡನೇನು
ನಿನಗೆ ನೇಹಂ? ನನೆವಿಲ್ಗೆ ಕಬ್ಬಿಣದ ಹೆಪೆಯೆ?
ಜನನಿಯೊಂದೆಡೆ ಬಳಲುತಿರೆ ನೀನಿಲ್ಲಿ ಸುಖಿಯೆ?
ಸಂತಸದಿ ಪರಿತಂದು, ನಗೆಯಾಂತ ಮುಖದಳೆದು
ಚಾಡಿ ಮೋಡಿಗಳ ಗಾಡಿಯೆನೆ ಮೆರೆಯುತಿಹೆ.
ಸತಿ ಪತಿಯನೆಡೆಗೊಂಬ ವ್ಯಯಾರವೇನು?
ಪಡಲೀಕೆ ಮರುಳೆ ಮರಳೊಳಗೆ ನೀರೆರವ ಭಂಗ?
ಭವದ ಭಾವಪೂರೆಯುವುದೊಂದೆ **ನಿನ್ನಂತರಂಗ?**

---

**Join our new Scheme of Deposit and enrich yourself by saving petty cashes.**

# SAVE AS YOU PLEASE

***Refundable with $6\frac{1}{4}$ per cent after 5 years.***

**SUPPLY AGENCY LIMITED, UDIPI.**

**FINANCE DEPARTMENT,**
**Vyasa Bhavanam,**
**Car Street.**

# ಯು. ಆರ್. ಶೆಣೈ ಎಂಡ್ ಸನ್ಸ್.

ಹೆಡ್ ಆಫೀಸ್:- ರಥಬೀದಿ. ಬ್ರಾಂಚ್:- ಕೊಡಿಯಾಲಬೈಲ್.

ಮಂಗಳೂರು

ಎಲ್ಲಾ ತರದ ಶಾಲಾ ಕಾಲೇಜು ಪುಸ್ತಕಗಳು, ಸ್ಟೇಶನೆರಿ, ಕಟ್ಲೆರಿ, ಪ್ರಿಂಟಿಂಗ್ ಶಾಯಿ ಮತ್ತು ಮದುವೆ ಉಪನಯನಾದಿಗಳಿಗೆ ಬೇಕಾದ ಸುಗಂಧ ದ್ರವ್ಯ ಉಡುಗೆರೆ ವಗೈರೆಗಳು ಮತ್ತು ಪ್ರಿಂಟಿಂಗ್ ಕಾಗದಗಳು ನಮ್ಮಲ್ಲಿ ಸುಲಭ ದರದಲ್ಲಿ ಸಿಗುವುವು.

**For all kinds of School and College requisites, Books, Stationary Articles, Printing inks, and students everyday requisites:-**

## U. R. SHENOY & SONS,

***Car-Street, Mangalore,*** **Branch at Kodialbail.**

***BINDING IS OUR SPECIALITY.***



ನಿಮಗೆ ಗೊತ್ತಿದೆಯೇ?

ಒಳಕ್ಕೂ ಮಿಕ್ಕಿದ ಪುಟಗಳು! ಹಲವಾರು ಚಿತ್ರಗಳು!!

ನುರಿತ ಬರೆಹಗಾರರ ಲೇಖನಗಳು!!!

ದಕ್ಷಿಣ ಕರ್ನಾಟಕದಿಂದ, ಸಾರಸ್ವತ ಸಮಾರಾಧನೆಯ ಮಹೋದ್ದೇಶದಿಂದ ಹೊರಟ ಮಾಸಪತ್ರಿಕೆ.

# ನವಶಕ್ತಿ


ಸಂಪಾದಕರು: ಶ್ರೀ. ಪಿ. ಎನ್. ಬನ್ನಂಜೆ ರಾಮಾಚಾರ್ಯರು

**ಸರಸ ಸಾಹಿತ್ಯದ ಸುಗ್ಗಿ! ರಸಭರಿತ ಕತೆಗಳು! ಮಧುಮಯ ಕವನಗಳು! ವಿಚಾರಪರ ನಾಟಕಗಳು! ಶೋಧನಾತ್ಮಕ ವಿಮರ್ಶೆಗಳು! ಬಗೆಬಗೆಯ ಲೇಖನಗಳು! ಭಿನ್ನ ಭಿನ್ನರುಚಿಯ ಸಮಸ್ತರಿಗೂ ಒಪ್ಪುವ ವಿಷಯಗಳು!**

**ಇಷ್ಟಿದ್ದರೂ ವಾರ್ಷಿಕ ಚಂದಾ ಮೂರೇ ರೂಪಾಯಿ! ಕೂಡಲೇ ಚಂದಾದಾರರಾಗಿರಿ. ಕನ್ನಡಿಗರು ನೆಲೆಸಿರುವಲ್ಲೆಲ್ಲ ತುಂಬ ಪ್ರಚಾರವಿರುವುದರಿಂದ ಜಾಹೀರಾತುದಾರರಿಗೆ ಉತ್ತಮವಾದ ಪತ್ರಿಕೆ! ವಿವರಗಳಿಗೆ ಬರೆಯಿರಿ.**

ಮೆನೇಜರ್, 'ನವಶಕ್ತಿ'

ನವಶಕ್ತಿ ಕಾರ್ಯಾಲಯ **ಉಡುಪಿ,** ದ. ಭಾರತ.



# ಛಾಯಾ ಲೋಕ.

## ಹೆತ್ತವರಿಟ್ಟ ಹೆಸರಿಗೆ ಕತ್ತರಿ ಪ್ರಯೋಗ

ಬರೆದವರುಃ
'ಉಪೇಂದ್ರ'

ರಜತ ಪರದೆಯ ಮೇಲೆ ಮಿನುಗುವ ತಾರೆಗಳ ಹೆಸರಿನಲ್ಲಿ ಯಾವ ಆಕರ್ಷಣಾಶಕ್ತಿ ಇದೆ ಎಂಬುದನ್ನು ನೀವೇ ನೋಡಿ ಯೋಚಿಸಿರಿ. ಒಬ್ಬ ವಿಶಿಷ್ಟ ನಟಿಯ ಹೆಸರಿಗಾಗಿ ಅದೊಂದು ಅಪ್ರಯೋಜಕ ಚಿತ್ರವೂ, ಒಳ್ಳೆಯ ಪ್ರೋತ್ಸಾಹವನ್ನು ಪಡೆಯುವುದು. ಚಿತ್ರಪಟದ ಅರ್ಧಯಶಸ್ಸು ಅದರಲ್ಲಿ ಅಭಿನಯಿಸಿದ ನಟನಟಿಯರ ಮೇಲೆ ಹೊಂದಿಕೊಂಡಿರುವುದು. ರತನ್‌ಬ್ಯಾ, ಸುಲೋಚನಾ, ಸಬಿತಾ, ಆಶಾಲತಾ, ಬಿಬ್ಬು, ನಾಡಿಯಾ, ಮುಂತಾದ ಈ ವಾಕ್ಚಿತ್ರ ತಾರೆಯರ ನಿಜವಾದ ಹೆಸರೇನೆಂಬುದನ್ನು ಬಲ್ಲಿರಾ? "ಆಶಾಲತಾ" ಇದು ಅಭಿನೇತ್ರಿಯಾದ ಬಳಿಕ ದೊರೆತ ಹೆಸರವಳಿಗೆ! ಅದು ಮೊದಲು ಇವಳನ್ನು "ಮೆಹರುನ್ನೀಸಾ" ಎಂದು ಕರೆಯುತ್ತಿದ್ದರು. ಜಾತಿಯಲ್ಲಿವಳು ಖೋಜಾ! ಹೆಸರು ಮಾತ್ರ ತಾಜಾ ಹಿಂದುಗಳದ್ದು! "ಸಬಿತಾದೇವಿ" ನೋಡಲು ಇವಳು ಗುಜರಾತಿ ಹೆಂಗಸಿನಂತಿದ್ದಾಳೆ! ಚಿತ್ರ ಸೃಷ್ಟಿಯ ಹೊರಗೂ ಇವಳು ತುಪ್ಪ ಗುಜರಾತಿ ಸ್ತ್ರೀಯರಂತಿದೆ! ನಿಜವಾದ ಇವಳ ಹೆಸರು "ಐರಿಷ್ ಗ್ಯಾಸ್ಪರ್" ಎಂದು. ಸಿನೇಮಾ ಪ್ರೇಮಿಗಳು, ಐರಿಸ್ ಗ್ಯಾಸ್ಪರಳ ಪರಿಚಿತರಲ್ಲ. ಸಬಿತಾ ದೇವಿಯೇ ಅವರ ಪರಿಚಿತಳು! ಇವಳು ಎಂಗ್ಲೋ ಇಂಡಿಯನಳು. "ರತನ್‌ಬ್ಯಾ" ಇವಳಭಿನಯಿಸಿದ ಯಾವದಾದರೊಂದು ಚಿತ್ರದ ಜಾಹಿರಾತಿನಲ್ಲಿ "ಈ ಚಿತ್ರದಲ್ಲಿ "ಇವಾನ್ ಬಂದಿ" ನಟಿಸಿದ್ದಾಳೆ" ಎಂದು ಬರೆದರೆ ವಾಕ್ಚಿತ್ರ ಪ್ರೇಮಿಗಳು ಇವಳಾವ ಹೊಸ ನಟಿಯಪ್ಪಾ? ಎಂದು ಕೊಳ್ಳದಿರಲಾರರು. ರತನ್‌ಬ್ಯಾಯ ಹೆಸರು "ಇವಾನ್ ಬಂದಿ" ಎಂದು. "ಕಮಲೇಶ ಕುಮಾರಿ". ಎಲ್ಲರಿಗೂ ಒಂದೊಂದೇ ಹೆಸರಾದರೆ, ಇವಳಿಗೆ ಮೂರು ಹೆಸರು. ನ್ಯೂಥಿಯೇಟರ್ಸ್‌ನಲ್ಲಿ "ಕಮಲೇಶ ಕುಮಾರಿ" ಎಂದು ಒಂದು ಹೆಸರು. ಪ್ರೀಮಿಯರ್ ಸಿನೇಟೋನಿನಲ್ಲಿ "ಸುಂದರಿ" ಚಿತ್ರದಲ್ಲಿ ಪಾತ್ರವಹಿಸಿ ಕೊಂಡಾಗ "ಸರೋಜಿನಿ" ಎಂಬ ಹೆಸರಾಯ್ತು. ಮೂರನೆಯದಾಗಿ



❋ ಮಸೂರಿ ಮತ್ತು ಸಿಮ್ಲಾದಲ್ಲಿ ನರ್ತನ ಕೂಟವಾದಾಗ "ಮಿಸ್ ಕಾರಲೇರಾ" ಎಂಬ ಅಭಿದಾನವಾಯ್ತು.

ಹೀಗೆ ಮೂರು ಹೆಸರು ಗಳಿಂದ ಇವಳು ಕರೆಯಿಸಿಕೊಳ್ಳುತ್ತಾಳೆ! ಪರಂತು ಇವಳ ನಿಜವಾದ ಹೆಸರಾವುದು ಗೊತ್ತೆ? "ಮಿಸ್ ಲೇವಿ" ಎಂದು. ರಣಜಿತ್ ಫಿಲ್ಮ್ ಕಂಪೆನಿಯ ಶ್ರೇಷ್ಠ ಚಿತ್ರತಾರೆ ಯಾದ ಮಾಧುರಿಯ ನಿಜವಾದ ಹೆಸರು "ಮಿಸ್ ಬೇರಿಲ್ ಕೆಟಿಸೆನ" ಎಂದು. ಈ ಆಂಗ್ಲನಾಮಕ್ಕಿಂತ "ಮಾಧುರಿ" ಎಂಬ ಹೆಸರೇ ಹೆಚ್ಚಿನ ಮಾಧುರ್ಯ ಸೂಸುವುದರಿಂದ ಕಂಪೆನಿಯವರು ಮಾಧುರಿ ಎಂಬ ಹೆಸರಿಟ್ಟುವವಳಿಗೆ! ಸಾಗರ ಫಿಲ್ಮ್ ಕಂಪೆನಿಯವರ ಮನ ಮೋಹನ್ ಚಿತ್ರದಲ್ಲಿ ಅಭಿನಯಿಸಿ ಕೀರ್ತಿಶಾಲಿನಿ ಯಾದ "ಮಿಸ್ ಬಿಬ್ಬು" ಅವಳ ಹೆಸರೂ ಬೇರೆಯೆ! ಯಾವುದುಗೊತ್ತೆ? "ಇಶರತ್ ಸುಲ್ತಾನ್" ಎಂದು. ವಾಡಿಯಾ ಮೂವಿಟೋನದ ಸುಪ್ರಸಿದ್ಧ ನಟಿ ಸ್ಟಂಡ್ ಕ್ವೀನ್ ಮಿಸ್ ನಾಡಿಯಾ ಇವಳ ಹೆಸರು "ಮೇರಿ ವ್ಹೆಯಿನ್ಸ್"ಎಂದು.



ಪ್ರಸಿದ್ಧ ಚೀನೀಯ ನಟಿ **ಅನ್ನಮೋವಾಂಗ್**
ಚೀನಾ ಯುದ್ಧದ ಕುರಿತು ತಯಾರಿಸಿದ ಚಿತ್ರಗಳಲ್ಲಿ ಈಕೆಯು ಅಭಿನಯಿಸಿದ್ದಾಳೆ.

ಸಿನೇಮಾ ಸುಂದರಿಯರು ಅನೇಕ ವೇಳೆ ತನಗಾಗಿಯೂ ಸಿನೇಮಾ ರಸಿಕರ ಸಲುವಾಗಿಯೂ ಹೆತ್ತವರಿಟ್ಟ ಹೆಸರಿಗೆ ಕತ್ತರಿ ಪ್ರಯೋಗ ಮಾಡಿ ಬೇರೆ ಹೆಸರಿನಿಂದ ಮೆರೆಯ ಬೇಕಾಗುತ್ತದೆ!



ಜೋನ್ ಕ್ರಾಫೋರ್ಡ್

## ಕೊಚ್ಚಿಯ ರಾಜಕುಮಾರರ ಚಲಚ್ಚಿತ್ರಾಭಿಮಾನ!

### ಕೇರಳದ ಉದ್ಧಾರಕ್ಕಾಗಿ "ಭೂತರಾಯರ್" ಚಿತ್ರ.

ಕೊಚ್ಚಿಯ ರಾಜಕುಮಾರರಾದ ರಾಮವರ್ಮ ಅಪ್ಪನ್ ತಂಬುರನ್‌ರವರು ಕೇರಳ ಸಿರಾನೆಟೋನ್ ಎಂಬ ಲಿಮಿಟೆಡ್ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ರಜತ ಪರದೆಯಲ್ಲಿ ಕೇರಳದ ಪ್ರಾಚೀನ ಸಂಸ್ಕೃತಿ ಮತ್ತು ಕಲೆಯ ಉದ್ಧಾರ ಕಾರ್ಯವನ್ನು ಮಾಡುವುದು ಸುಲಭವಾದುದರಿಂದ "ಭೂತರಾಯರ್" ಎಂಬ ನಾಟಕವನ್ನು ಅವರು 'ಪ್ರಾಚೀನ ಕೇರಳಂ' ಎಂಬ ಹೆಸರಿನ ವಾಕ್ಚಿತ್ರವಾಗಿ ಮಾರ್ಪಡಿಸುವರು. ಈಗಾಗಲೇ ಅಭಿನಯಾಭ್ಯಾಸವು ಯಶಸ್ವಿಯಾಗಿ ನಡೆಯುತ್ತಿದೆ. ನುರಿತ ಶಿಕ್ಷಿತ ನಟರು ಇದರಲ್ಲಿ ಭಾಗ ವಹಿಸುತ್ತಿರುವುದರಿಂದ ಚಿತ್ರವು ಯಶಸ್ವಿಯಾಗುವುದೆಂದು ಭಾವಿಸಲಾಗಿದೆ.

**Printed and published by P. Venkataramanacharya for and on behalf of SUPPLY AGENCY LTD., at Manipal Power Press, Udipi.**

श्री प्रसाद

# ಶ್ರೀ ಪ್ರಸಾದ

# SRI PRASADA

ಸಮಗ್ರ ಭಾರತದಲ್ಲಿ ಅನೇಕ ವರ್ಷಗಳಿಂದ
ಸಂಚರಿಸುತ್ತಲಿರುವ ಮಂತ್ರವಿದ್ಯೆಯಲ್ಲಿ
ಪಾರಂಗತರಾದ ತನ್ನ ಮಂತ್ರಶಕ್ತಿಯಿಂದ
ಅನೇಕ ಜನರಿಗೆ ಪ್ರಯೋಜನವನ್ನುಂಟು
ಮಾಡಿದ ಯೋಗಿ ಮಹಾಶಯರೊಬ್ಬರ

## ಮಹಾ ಮಂತ್ರಶಕ್ತಿಯ ಪ್ರಸಾದ

ಈ ಪ್ರಸಾದಗಳ ಸೇವನೆಯಿಂದಲೂ, ಧಾರಣೆಯಿಂಡಲೂ, ಪ್ರಯೋಗದಿಂದಲೂ
ಅನೇಕರು ಅನೇಕ ವಿಧಗಳಿಂದ ಪ್ರಯೋಜನಗಳನ್ನು ಹೊಂದಿರುವರು.

### ಈ ಪ್ರಸಾದದಿಂದ

ಪರೀಕ್ಷೆಯಲ್ಲಿ ಪಾಸಾಗುವದು, ಶತ್ರುಗಳನ್ನು ಸ್ವಾಧೀನಪಡಿಸುವದು, ವ್ಯಾಪಾರದಲ್ಲಿ
ಅಭಿವೃದ್ಧಿಹೊಂದುವದು, ಮುಂತಾದ ಯಾವತ್ತು ಅಭೀಷ್ಟಗಳನ್ನು ಸಾಧಿಸಬಹುದು.
ಒಂದು ತಿಂಗಳು ಉಪಯೋಗಿಸುವ ಪ್ರಸಾದಕ್ಕೆ ರೂಪಾಯಿ ಒಂದು.
ವಿಶೇಷತರದ ಪ್ರಸಾದಕ್ಕೆ ರೂಪಾಯಿ ಐದು.

**ಪ್ರಸಾದ ಬೇಕಾದವರು–** ತಮ್ಮ ನಕ್ಷತ್ರ, ಯಾ ಜನನ ಸಮಯವನ್ನೂ ತಾರೀಕನ್ನೂ ತಿಳಿಸಬೇಕು
ಅದು ಗೊತ್ತಿಲ್ಲದಿದ್ದರೆ ಕಾಗದ ಬರೆಯುವ ಸ್ಥಳ, ಸಮಯಗಳನ್ನೂ ನಿರ್ದೇಶಿಸಬೇಕು.
**ಪತ್ರ ವ್ಯವಹಾರ:–** ಇಂಗ್ಲಿಷ್, ಸಂಸ್ಕೃತ, ಯಾ ಕನ್ನಡ ಭಾಷೆಯಲ್ಲಿ ಮಾಡಬಹುದು.
ಎಲ್ಲ ಪತ್ರಗಳು ಗುಪ್ತವಾಗಿರಿಸಲಾಗುತ್ತವೆ.

ಮುಖತಃ ಭೇಟಿಯನ್ನು
ಇಟ್ಟುಕೊಳ್ಳಲಾಗುವುದಿಲ್ಲ.

C. C. No. 4.
C/o. **ANTARANG**
**UDIPI.**

*Personal interviews are prohibited*

# ನಮ್ಮಲ್ಲಿ

## - ಕನ್ನಡ ಪುಸ್ತಕಗಳು -

| | | | | |
|---|---|---|---|---|
| ಶಾಂತಿ ಪುರಾಣ . . | | 3 | 0 | 0 |
| ಚಂದ್ರಗುಪ್ತ ಚಕ್ರವರ್ತಿ . | | 1 | 0 | 0 |
| ಸರಸ್ವತೀ . . . (ಸಾಮಾಜಿಕ ನಾಟಕ) | | 0 | 8 | 0 |
| ಒಂದೇ ತಿಂಗಳಲ್ಲಿ ಇಂಗ್ಲಿಷ್ . (ಇಂಗ್ಲಿಷ್ ಸ್ವಯಂಬೋಧಿನಿ) | | 0 | 8 | 0 |
| ಸಾಮುದ್ರಿಕ ಶಾಸ್ತ್ರ . . | | 0 | 8 | 0 |
| ಹೊಂದೊವಲ ಹಂಬಲು. . | | 0 | 6 | 0 |
| ವೀರಭೂಮಿ (ಕತೆ) . . | | 0 | 1 | 6 |
| ಗೀತೆಯ ಕೈಗನ್ನಡಿ . . | | 0 | 4 | 0 |
| ಗೀತೆಯ ಮೂಲ . . (ಈಶಾವಾಸ್ಯೋಪನಿಷತ್ತಿನ ಭಾಷಾಂತರ) | | 0 | 1 | 0 |
| ಸ್ತ್ರೀಪದ್ಯರತ್ನಾಕರ ಭಾಗ | I | 0 | 1 | 0 |
| ಡಿ | II | 0 | 1 | 0 |
| ಡಿ | III | 0 | 1 | 0 |
| ಡಿ | IV | 0 | 1 | 0 |
| ಪುರಂದರ ದಾಸರ ಪದ ಭಾಗ | I | 0 | 4 | 0 |
| ಡಿ | II | 0 | 4 | 0 |
| ಡಿ | III | 0 | 4 | 0 |
| ಮಧುವನ . . . | | 1 | 8 | 0 |
| ಧರ್ಮಸಂಕಟ (ಸಾಮಾಜಿಕ ನಾಟಕ) | | 0 | 4 | 0 |
| (Gouthama the Buddha) | | 0 | 8 | 0 |
| ಭಗವದ್ಗೀತೆ . . . | | 0 | 2 | 0 |
| ಕುಕ್ಕುಟ ಪಂಚಾಂಗ . . | | 0 | 1 | 0 |
| ಮಗ್ಗಿ . . . . | | 0 | 1 | 6 |
| ತುಳುನಾಡ್ ತಿಲಕ ಪಂಚಾಂಗ . | | 0 | 1 | 0 |
| ವೈಜಯಂತೀ ಪಂಚಾಂಗ . | | 0 | 2 | 6 |
| ಜಯಪಾಂಡ್ಯ ವಿಜಯ . . | | 0 | 2 | 0 |

## - ತುಳು ಪುಸ್ತಕಲು -

| | | | |
|---|---|---|---|
| ಕೃಷ್ಣಸಂಧಾನ (ಪ್ರಸಂಗ) . (ಕನ್ನಡ ಕೃಷ್ಣಸಂಧಾನವನ್ನೊಳಗೊಂಡಿದೆ.) | 0 | 8 | 0 |
| ಬಲೀಂದ್ರ (ಕತೆ) . . (ವಿಮರ್ಶಾತ್ಮಕ ಲೇಖನ) | 0 | 2 | 0 |
| ಅಳಿಯ ಸಂತಾನ ಕಟ್ಟದ ಗುಟ್ಟು | 0 | 4 | 0 |
| ಕಾನಿಗೆ (ಪದ್ಯ) . . | 0 | 4 | 0 |
| ತುಳುವ್ಯಾಕರಣ . . | 0 | 8 | 0 |
| ಜನಮರ್ಲ್ (ನಾಟಕ) . . | 0 | 6 | 0 |
| ಮದ್ಮಾಳತ್ತ ಮದ್ಮಾಯೆ . (ಕತೆ) | 0 | 2 | 0 |
| ಬಂಗಾರ್‌ದಂಗಿದ ಕತೆ . . | 0 | 1 | 0 |
| ಪದ್ಯಮಾಲಿಕೆ . . | 0 | 1 | 0 |
| ಮಿತ್ಯನಾರಾಯಣ ಕತೆ. . | 0 | 8 | 0 |
| ಸತೀ ಕಮಲೆ (ನಾವೆಲ್) . . | 0 | 6 | 0 |
| ಕನ್ಯೋಪದೇಶ . . . | 0 | 2 | 0 |
| ಕನ್ನಡಕೊ . . . | 0 | 0 | 6 |
| ವಾಲಿಸುಗ್ರೀವರ ಕಾಳಗ. . | 0 | 3 | 0 |
| ಬೊಬ್ಬರ್ಯ (ಪಾಡ್ದನ) . . | 0 | 2 | 0 |
| ತೊಡಕಿನಾರ್ ,, . . | 0 | 2 | 0 |
| ಮುಂಡತ್ತಾಯ ,, . . | 0 | 2 | 0 |
| ವಿಶ್ವರೂಪ ದರ್ಶನ . . (ಗೀತೆಯ II ನೇ ಅಧ್ಯಾಯದ ಪದ್ಯಾತ್ಮಕ ಭಾಷಾಂತರ) | 0 | 1 | 0 |
| ಭಗವದ್ಗೀತೆ . . | 0 | 5 | 6 |

**ತುಳುನಾಡ್ ಪ್ರೆಸ್,**

**ಉಡುಪಿ, ದ. ಕ.**

This page is available for advertisement. Rate Rs. 15. (per insertion).

# ತುಳುನಾಡ್ ತಿಲಕ ಪಂಚಾಂಗ

● ಅಖಿಲ ಕರ್ನಾಟಕದಲ್ಲಿ ಇದಕ್ಕಿಂತ ಹೆಚ್ಚು ಪ್ರಚಾರವುಳ್ಳ ಪಂಚಾಂಗವು ಬೇರೊಂದಿಲ್ಲ

● ಜಾಹಿರಾತಿಗೆ ಇದಕ್ಕಿಂತ ಉತ್ತಮ ವಾಹನವು ಇನ್ನೊಂದು ದೊರಕದು

***ADVERTISE IN***

# TULUNAD TILAKA PANCHANGAM

Enjoys the largest net circulation among the Almanacs of Karnataka

*For rates of Advts.*

ADVT. MANAGER,

**SUPPLY AGENCY Ltd**

UDIPI.